౨౨..

[illegible].

V, 2 N

౨౨౫౦

Digitized by ROJA MUTHIAH RESEARCH LIBRARY

Digitized by ROJA MUTHIAH RESEARCH LIBRARY

ರಾಧಾಕೃಷ್ಣ ವಾಚನಾಲಯ ಮಾಲಾ

ನಂಬರು ೩.

RAGHAVENDRA KRISHNA INAMATI
POST ANNIGERI
No.
DATE
DHARWAR.
2250
2240

# ಅಶೋಕ

ಅಥವಾ

## ಆರ್ಯಾವರ್ತದ ಮೊದಲನೆಯ ಚಕ್ರವರ್ತಿ.

ಈ ಚರಿತ್ರವನ್ನು

"ಸರೋಜಿನಿ" "ವೀರೇಂದ್ರ" "ಭಾರತವರ್ಷೀಯ ಭೂವರ್ಣನೆ"

ಇತ್ಯಾದಿ ಪುಸ್ತಕಗಳ ಲೇಖಕರಾದ

**ರಾಘವೇಂದ್ರ ಕೃಷ್ಣ ಇನಾಮತಿ, ಅಣ್ಣಿಗೇರಿ**

ಇವರು ಬರೆದರು.

ಸಂಸ್ಕೃತಿ ಭಂಡಾರ,
ಬೆಂಗಳೂರು-೧೮.

PRINTED BY
J. M. SU[illegible] PRESS, MANGALORE,
[illegible] BY
R[illegible] FICE, MANGALORE.

Digitized by ROJA MUTHIAH RESEARCH LIBRARY

W 404
ಕರ್ನಾಟಕ ಸಾಹಿತ್ಯ ಪರಿಷತ್ತು
ಪುಸ್ತಕ ಭಂಡಾರ
ಕ್ರಮ ಸಂಖ್ಯೆ ........ ವರ್ಗ ಸಂಖ್ಯೆ ........
ತಾರೀಖು ........
ಬೆಲೆ ........
THE MYSORE EDUCATIONAL LIBRARY.
General No.
Class and Subject. W. Kan. Literature
Number of Class. 484.
V. 2 N

2250
MYSORE EDUCATIONAL LIBRARY MUSEUM

# ಅರಿಕೆ.

ಈ ಚಿಕ್ಕ ಪುಸ್ತಕವನ್ನು ಮೊದಲು ಶ್ರೀಯುತ ವಾಸುದೇವ ಗೋವಿಂದ ಆಪಟೆ ಬಿ. ಎ. ಯವರು "ಮಹಾರಾಷ್ಟ್ರ ಭಾಷೆಯಲ್ಲಿ" ಬರೆದರು. ಅವರ ಅಪ್ಪಣೆಯನ್ನು ಪಡೆದು ನಾನು ಅದನ್ನು ಕನ್ನಡಿಸಿದ್ದೇನೆ. ಭಾಷಾಂತರಿಸಲು ಅಪ್ಪಣೆಯನ್ನು ಕೊಟ್ಟುದಕ್ಕಾಗಿ ತುಂಬಾ ಕೃತಜ್ಞನಾಗಿದ್ದೇನೆ.

ಶರೀರ ಅಸ್ವಾಸ್ಥೆಯ ಮೂಲಕವಾಗಿ ಇದಕ್ಕೆ ವಿಸ್ತೃತ ಪ್ರಸ್ತಾವನೆಯನ್ನು ಬರೆಯದಿದ್ದುದಕ್ಕಾಗಿ ವಾಚಕರು ಕ್ಷಮೆ ಮಾಡುವುರೆಂದು ನಂಬಿದ್ದೇನೆ. ನನ್ನ ಪರಮ ಮಿತ್ರರಾದ ಮ. ರಾ. ರಾ. ಬಿ. ರಾಮರಾವ್ ಎಮ್. ಎ. ಯವರು ಇದನ್ನು ಸಂಶೋಧಿಸಿದುದಕ್ಕಾಗಿ ತುಂಬಾ ಕೃತಜ್ಞನಾಗಿದ್ದೇನೆ.

ಅಣ್ಣಿಗೇರಿ, ಶ. ೧೯
ತಾ॥ ... ರಾ. ಕೃ. ಇನಾಮತಿ.

ಕರ್ನಾಟಕ ಸಾಹಿತ್ಯ ಪರಿಷತ್ತು
ಪುಸ್ತಕ ಭಂಡಾರ
ಕ್ರಮ ಸಂಖ್ಯೆ 2250 ವರ್ಗ ಸಂಖ್ಯೆ
ತಾರೀಖು ........
ಬೆಲೆ ........

Digitized by ROJA MUTHIAH RESEARCH LIBRARY

*Madras,*
*16th January 1903.*

"ಅಶೋಕ" ಎಂಬ ಕರ್ಣಾಟ ವಚನ ಗ್ರಂಥವನ್ನು ಕಡೆಗೂ ಓದಿ ಅದರ ವಿಷಯಕವಾಗಿ ನನಗೆ ತೋರಿದ ಅಭಿಪ್ರಾಯವನ್ನು ತಿಳಿಸಲು ಉಲ್ಲಾಸ ಪಡುವೆನು. ಗ್ರಂಥವು ಚಿಕ್ಕದಾದರೂ ವಿಷಯವು ಅಧಿಕವಾಗಿದೆ. ಎಲ್ಲಾ ಸಂಗತಿಗಳೂ ಸಪ್ರಮಾಣಗಳಾಗಿ ತೋರಿಸಲ್ಪಟ್ಟವೆ. ಬರವಣಿಗೆ ರಮಣೀಯವಾಗಿದೆ. ಯಥಾರ್ಥವಾದ ಪ್ರಾಚೀನರ ಚರಿತ್ರವನ್ನು ಹೀಗೆ ಸಂಗ್ರಹಿಸಿ ಬರೆಯುವ ಪದ್ಧತಿಯನ್ನು ನಮ್ಮ ಹಿಂದೂ ಸ್ವದೇಶ ಭಾಷಾಭಿಮಾನಿಗಳಿಗೆ ತೋರಿಸುತ್ತಿರುವ ಈ ಗ್ರಂಥಕಾರರು ಶ್ಲಾಘನೀಯರಾಗಿರುವರು. ಹೀಗೆಯೇ ಪೂರ್ವಿಕರ ಚರಿತ್ರೆಗಳು ಸಂಗ್ರಹವಾಗಿಯೂ ಸರಳವಾಗಿಯೂ ಸಪ್ರಮಾಣಗಳಾಗಿಯೂ ಹೊರಗೆ ಬರುವುದು ಬಹಳ ಒಳ್ಳೆಯದೆಂದು ನಂಬುತ್ತೇನೆ.

(*Signed*) **S. Sivasankara Sastry.**
*Kanarese Pandit, Presidency College.*

(True copy).

"ರಾ॥ ರಾಘವೇಂದ್ರ ಕೃಷ್ಣ ಇನಾಮತಿ ಇವರು ಬರೆದ 'ಅಶೋಕ' ಎಂಬ ಚಿಕ್ಕ ಪುಸ್ತಕದ ಬಗ್ಗೆ ಅಭಿಪ್ರಾಯವು.

ಈ ಪುಸ್ತಕವನ್ನು ಓದಿ ಬಹಳ ಸಂತೋಷವಾಯಿತು. ಈ ತರದ ಪುಸ್ತಕಗಳು ಕನ್ನಡದಲ್ಲಿ ಕಡಿಮೆ. ರಾ॥ ಇನಾಮತಿ ರಾಘವೇಂದ್ರ ರಾಯರು ಶ್ರಮ ಮಾಡಿ ಈ ಪುಸ್ತಕವನ್ನು ಬರೆದುದು ಅವರಿಗೆ ಭೂಷಣವೇ ಸರಿ * * * * * * * * * * * * * *

ವಿಷಯ ರಚನೆಯೂ ಭಾಷಾ ರಚನೆಯೂ ಒಟ್ಟಿನ ಮೇಲೆ ನೆಟ್ಟಗಿರುತ್ತವೆ. ಭಾಷೆಯು ಸಾಧಾರಣ ಜನರಿಗೂ ತಿಳಿಯುವಂತಿದ್ದುದರಿಂದ ಪುಸ್ತಕದ ಉಪಯೋಗವು ಬಹಳವಾಗ ಬಹುದು. ರಾ॥ ಇನಾಮತಿಯವರು ತಮ್ಮ ದೇಶ ಬಾಂಧವರ ಮೇಲೆ ಉಪಕಾರ ಮಾಡಿರುತ್ತಾರೆನ್ನಲಿಕ್ಕೆ ಅಡ್ಡಿ ಇಲ್ಲ. ಎಲ್ಲ ಓದಬಲ್ಲ ಕನ್ನಡಿಗರು ಈ ಪುಸ್ತಕವನ್ನು ಮನಸ್ಸುಗೊಟ್ಟು ಓದಿ ರಾ॥ ಇನಾಮತಿಯವರು ತಮ್ಮ ಬಾಂಧವರ ಮೇಲಿನ ಪ್ರೀತಿಯಿಂದ ಪಟ್ಟ ಶ್ರಮವನ್ನು ಮನಗಾಣುವರೆಂದು ತುಂಬಾ ನಂಬುತ್ತೇನೆ.

ಈ ಪುಸ್ತಕವನ್ನು ಸುಧಾರಿಸಲಿಕ್ಕೆ ಅವಶ್ಯವಾದ ಸೂಚನೆಗಳು ರಾ॥ ಇನಾಮತಿಯವರಿಗೆ ಬೇಕಾದಾಗ ಮಾಡಲಿಕ್ಕೆ ನಾನು ಸಿದ್ಧನಿದ್ದೇನೆ."

*Bijapur,*
*25—1—1903.* } (*Signed*) **R. H. Deshapande.**

(True copy).

"ಅಶೋಕ" "ಆರ್ಯಾವರ್ತದ ಮೊದಲನೆಯ ಚಕ್ರವರ್ತಿ"

ಈ ಪುಸ್ತಕವನ್ನು ಅಣ್ಣಿಗೇರಿಯ ರಾ. ಕೃ. ಇನಾಮತಿ ಎಂಬವರು ನಮ್ಮ ಅಭಿಪ್ರಾಯಕ್ಕೋಸ್ಕರ ಕಳುಹಿಸಿದ್ದಾರೆ * * * * * *
* * * * * * * * * * * * * * *

ಈ ಪುಸ್ತಕದ ಭಾಷೆಯು ಬಹು ಸರಸಾಗಿರುವದು. ಇದರಲ್ಲಿ 'ಪೂರ್ವ ವಯದಲ್ಲಿ' 'ಬಂಡಾಯ' 'ಕಥೆಗಳ ಮೇಲಿಂದ' 'ಕವಡೆ' ಇಂಥಾ ಮರಾಠೀ ಸಂಸರ್ಗವನ್ನು ಸೂಚಿಸುವ ಪ್ರಯೋಗಗಳಿರದಿದ್ದರೆ ಇದು ದಕ್ಷಿಣ ಮಹಾರಾಷ್ಟ್ರದಲ್ಲಿ ಹುಟ್ಟಿದ್ದ ಕುರುಹೇ ಇರುತ್ತಿದ್ದಿಲ್ಲ. ಆದರೂ ಇದರ ಭಾಷೆಯು ಈ ಶೀಮೆಯ ಸುಶೀಕ್ಷಿತರು ವಾಡಿಕೆಯಾಗಿ ಬರೆಯುವ ಭಾಷೆಗಿಂತ ಮೇಲಾದದ್ದೆಂಬದಕ್ಕೆ ಸಂದೇಹವಿಲ್ಲ.

ಪುಸ್ತಕದ ವಿಷಯವಾದರೂ ಇತಿಹಾಸ ಶೋಧಕರಿಗೆ ಅತ್ಯುಪಯುಕ್ತವಾದದ್ದಿರುತ್ತದೆ. ದಿಗಂತ ವಿಶ್ರಾಂತಿ ಕೀರ್ತಿಯಾದ ಅಶೋಕ ರಾಜನು ಪೂರ್ವ ವಯಸ್ಸಿನಲ್ಲಿ ಅತಿ ಕ್ರೂರನಾಗಿದ್ದನು. ಓದಿದವರ ಮನಸ್ಸಿಗೆ ಒಂದು ಬಗೆಯ ಪ್ರಹಾರವಾಗುತ್ತದೆ. ಆದರೆ ಇದರಿಂದ ಅಶೋಕ ರಾಜನ ಮಹಾಮಹಿಮೆಗೆ ವೊಪ್ಪು ಹಾಕಿದ ಹಾಗಾಗುತ್ತದೇ ಹೊರ್ತು ಕುಂದು ಬರುವುದಿಲ್ಲ. ಸಾರಾಂಶ ಪುಸ್ತಕವು ಶೋಧಕರ ಸಂಗ್ರಹಕ್ಕೆ ತಕ್ಕದ್ದಾಗಿರುತ್ತದೆ."

24—12—1902. (*Signed*) **V. R. Katti.**

(True copy).

Digitized by ROJA MUTHIAH RESEARCH LIBRARY

*Dharwar K. V. V. Sangha,*

No. 960. *10—3—1903.*

I have read with much pleasure the six chapters of the Life of Ashok, in Canarese, written by Mr. Inamati of Annigeri. It is written in an elegent and polished style which reflects credit on the writer * * * * * * * * * * * *

The life is instructive and interesting and will deserve support of the Canarese reading public if it be completed in the same way as it is begun.

(*Signed*) **N. G. Kargudri,**
*Honorary Secretary.*

(True copy).

This excellent little book Asoka shows considerable learning and research and would be a very valuable addition to Kannada Literature. So far as I know, this book is the first of its kind and marks a new departure in Kannada Literature * * * * * * * * * * * * * * *

The work is written in elegant and chaste style characteristic of the author. Altogether the author is to be congratulated on the production of this work.

*Madras,*
*10th March 1903.* } (*Signed*) **H. Narayana Rau,**
*First Senior Asst. Professor,*
*Presidency College, Madras.*

(True copy).

Digitized by ROJA MUTHIAH RESEARCH LIBRARY

## ಅನುಕ್ರಮಣಿಕೆ.

# ಅಶೋಕ

## ಆರ್ಯಾವರ್ತದ ಮೊದಲನೆಯ ಚಕ್ರವರ್ತಿ.


| | | ಪುಟ. |
|---|---|---|
| ೧ನೆಯ ಪ್ರಕರಣ. | ಪೀಠಿಕಾ. | 1—4 |
| ೨ ” ” | ಧರ್ಮಕ್ರಾಂತಿ | 5—9 |
| ೩ ” ” | ಕುಲ ವೃತ್ತಾಂತ | 10—13 |
| ೪ ” ” | ಅಶೋಕನ ಪೂರ್ವ ವಯಸ್ಸು | 14—28 |
| ೫ ” ” | ಬೌದ್ಧಧರ್ಮ—ರಾಷ್ಟ್ರೀಯ ಮತ. | 29—35 |
| ೬ ” ” | ಮಹಿಂದ, ಸಂಗಮಿತ್ರೆ, ಕುನಾಲ | 36—48 |
| ೭ ” ” | ಧರ್ಮಕೃತ್ಯಗಳು | 49—51 |
| ೮ ” ” | ಅಶೋಕನ ಲೇಖಗಳು | 52—71 |
| ೯ ” ” | ಅಶೋಕನ ಪ್ರಸಿದ್ಧವಾದ ಹದಿನಾಲ್ಕು ಆದೇಶಗಳು | 72—86 |
| ೧೦ ” ” | ವಾರ್ಧಕ್ಯ ಮತ್ತು ಮೃತ್ಯು. | 87—95 |
| ೧೧ ” ” | ಸಮಾಲೋಚನ | 96—104 |

# ಅಶೋಕ.

## ಆರ್ಯಾವರ್ತದ ಮೊದಲನೆಯ ಚಕ್ರವರ್ತಿ.

### ೧ನೆಯ ಪ್ರಕರಣ.

#### ಪೀಠಿಕಾ.

ಭಾರತಖಂಡದ ಇತಿಹಾಸದಲ್ಲಿ ಚಿರಸ್ಮರಣೀಯರೂ ಕೀರ್ತಿಯುತರೂ ಆಗಿರುವ ರಾಜರಲ್ಲಿ, ಬೌದ್ಧಧರ್ಮಪ್ರಚಾರಕನಾದ ಚಕ್ರವರ್ತಿಯಾದ ಅಶೋಕನು ಅಗ್ರಗಣ್ಯನು. ದ್ವಾಪರಯುಗದಲ್ಲಿ ಯುಧಿಷ್ಠಿರ, ಕಲಿಯುಗದಲ್ಲಿ ವಿಕ್ರಮಾದಿತ್ಯ, ಹರ್ಷವರ್ಧನ, ಶಾಲಿವಾಹನ, ಅಕಬರ್— ಈ ಸಾರ್ವಭೌಮರು ಮಾತ್ರವೇ ಇವನಿಗೆ ಸಮಾನರು. ಇವರಲ್ಲಿ ಯುಧಿಷ್ಠಿರನ ವಿಷಯವಾಗಿ ಪೌರಾಣಿಕ ಕಥೆಗಳ ಹೊರತು ಅನ್ಯ ಐತಿಹ್ಯಪ್ರಮಾಣಗಳು ಉಪಲಬ್ಧವಾಗುವುದಿಲ್ಲವಾದುದರಿಂದ, ಇವನನ್ನು ಬಿಟ್ಟು ಮಿಕ್ಕ ರಾಜರೊಂದಿಗೆ ಅಶೋಕನನ್ನು ತುಲನೆಮಾಡಿದರೆ, ಇವನೇ ಸರ್ವರಾಜರೊಳಗೆ ಶ್ರೇಷ್ಠನೆಂದು ಒಪ್ಪಿಕೊಳ್ಳಬೇಕಾಗುತ್ತದೆ.[೧] ಅಶೋಕನು ಬಹು ಪರಾಕ್ರಮಿಯು. ಅವನ ರಾಜ್ಯವು ಬಹು ವಿಸ್ತಾರವಾಗಿತ್ತು. ಪೂರ್ವಕ್ಕೆ ವಂಗ (ಬಂಗಾಲ) ಮತ್ತು ಕಾಮರೂಪ (ಆಸ್ಸಾಮ್); ದಕ್ಷಿಣಕ್ಕೆ ಗೋದಾವರೀ ತೀರ; ಪಶ್ಚಿಮಕ್ಕೆ ಸೌರಾಷ್ಟ್ರ (ಕಾಠೇವಾಡ) ಮತ್ತು ಸಿಂಧುತಟ; ಉತ್ತರಕ್ಕೆ ಕಾಶ್ಮೀರ

---

[೧] No greater prince had ever reigned in India since the Aryans first colonised this country and no succeeding monarch excelled his glory. (R. C. Dutt's History of civilization in ancient India—vol. ii p. 2).

Digitized by ROJA MUTHIAH RESEARCH LIBRARY

ಮತ್ತು ಹಿಮಾಲಯ ಪರ್ವತ ಇವೇ ಅವನ ರಾಜ್ಯದ ಮರ್ಯಾದೆಗಳಾಗಿದ್ದುವು.[೨] ಈ ಪ್ರಾಂತಗಳಲ್ಲಿ ಅವನ ಸ್ವಾಮಿತ್ವವು ಸಂಪೂರ್ಣವಾಗಿತ್ತು. ಮತ್ತು ಅವುಗಳ ಆಚೆಯಲ್ಲಿರುವ ಚೋಳ, ಪಾಂಡ್ಯ, ಯೋನ, ಕಾಂಬೋಜ, ಗಾಂಧಾರ, ಪಿತಿನಿಕ, ಆಂಧ್ರ, ವಜ್ರಿ, ಭೋಜ, ಪುಲಿಂದ, ತಾಮ್ರಪರ್ಣಿ ಮುಂತಾದ ದೇಶದ ರಾಜರು ಇವನ ಮಾಂಡಲೀಕತ್ವಕ್ಕೆ ಒಪ್ಪಿಕೊಂಡಿದ್ದರು;[೩] —ಎಂದರೆ ಹಿಂದುಸ್ಥಾನದ ¾ ಭಾಗವು ಅವನ ಅಧಿಕಾರಕ್ಕೆ ಒಳಗಾಗಿತ್ತು. ಇಷ್ಟು ರಾಜ್ಯವು ಇದಕ್ಕೆ ಪೂರ್ವದಲ್ಲಿ ಯಾವ ಅರಸನ ವಶದಲ್ಲಿಯೂ ಇರಲಿಲ್ಲ. ಈ ಕಾರಣದಿಂದ ಅಶೋಕನಿಗೆ ಹಿಂದುಸ್ಥಾನದ ಮೊದಲನೆಯ ಚಕ್ರವರ್ತಿ ಎಂದೆನ್ನುತ್ತಾರೆ. ಆದರೆ ಇತಿಹಾಸದಲ್ಲಿ ಅಶೋಕನ ಹೆಸರು ಚಿರಸ್ಮರಣೀಯವಾಗಿರಲು ಅವನ ಪರಾಕ್ರಮವೂ, ರಾಜ್ಯವಿಸ್ತಾರವೂ, ಐಶ್ವರ್ಯವೂ, ಕಾರಣವಲ್ಲ; ಅಜ್ಞಾನವೆಂಬ ಅಂಧಕಾರದಲ್ಲಿ ಮುಳುಗಿದ್ದುದರಿಂದ ಧರ್ಮದ ಸತ್ಯತತ್ವಗಳನ್ನು ಮರೆತಂತಹ ತನ್ನ ಪ್ರಜೆಗಳಿಗೆ, ಒಂದು ಹೊಸತಾದ ಶುದ್ಧವಾದ ಧರ್ಮಮಾರ್ಗಕ್ಕೆ ಹಚ್ಚಿ ತದ್ವಾರಾ ಅವರ ಉನ್ನತಿಗೋಸ್ಕರ ಮಾಡಿದ ಪರಿಶ್ರಮವೂ, ಸತ್ಯನಿಷ್ಠೆಯೂ, ಧರ್ಮಶ್ರದ್ಧೆಯೂ, ಅನೇಕ ಧರ್ಮಕೃತ್ಯಗಳಲ್ಲಿ ಅವನು ತೋರಿಸಿದ ಸ್ವಾರ್ಥತ್ಯಾಗದ ಉತ್ಕೃಷ್ಟ ಉದಾಹರಣೆಯೂ ಇವೇ ಮೊದಲಾದ ಸೋಜ್ವಲಕೃತ್ಯಗಳು ಅವನನ್ನು ಜಗತ್ತಿನಲ್ಲಿ ಕೊಂಡಾಡಲು ಕಾರಣೀಭೂತವಾಗಿರುತ್ತವೆ.[೪] ಒಬ್ಬ ಜರ್ಮನ್ ಗ್ರಂಥಕಾರನು ಹೀಗೆನ್ನುವನು:—[೫] "ಯಾವನೊಬ್ಬನ ಪಶ್ಚಾತ್ ಅವನ ಹೆಸರು ಎಷ್ಟು ಹೆಚ್ಚು ಜನರಿಗೆ ಹೆಚ್ಚು ಕಾಲದ ವರೆಗೆ ವಂದ್ಯವಾಗಿರುವುದೋ ಅಷ್ಟು ಅವನ

---

೨ Dr. Rajendralal Mitra's Indo-Aryans vol. ii p. 407; Indian Antiquary vol. xx p. 249. (M. E. Senart's paper on the Inscriptions of Puyodasi).

೩ ಶಿಲಾಲೇಖ (ಆದೇಶ ೨, ೩, ೧೩) ನೋಡಿರಿ.

೪ R. C. Dutt's History of civilization in Ancient India vol. ii p. 2.

೫ Coppen Die Religiondes Buddha.



ಯೋಗ್ಯತೆಯು ದೊಡ್ಡದೆಂದು ತಿಳಿಯ ಬೇಕು. ಇದು ನಿಜವೆಂದು ಗ್ರಹಿಸಿದರೆ ಶಾರ್ಲಮೇನ್, ಸೀಝರ್, ಈ ಪಾಶ್ಚಾತ್ಯ ಪ್ರಾಚೀನ ಇತಿಹಾಸಪ್ರಸಿದ್ಧ ನೃಪತಿಗಳಿಗಿಂತ ಅಶೋಕನು ಹೆಚ್ಚು ಶ್ರೇಷ್ಠನೆಂಬುದನ್ನು ಒಪ್ಪಿಕೊಳ್ಳ ಬೇಕಾಗುವುದು." ಸಾರಾಂಶವೇನೆಂದರೆ;—ಅಶೋಕರಾಜನು ಭರತಖಂಡದ ಇತಿಹಾಸವೆಂಬ ನಭೋಮಂಡಲದಲ್ಲಿ ಸಹಸ್ರರಶ್ಮಿಯಂತೆ ಪ್ರಕಾಶಿಸುತ್ತಿದ್ದನು. ಆದರೆ ನಮ್ಮ ಜನರ ದೃಷ್ಟಿಗೆ ಅಜ್ಞಾನದ ಪಟಲವು ಬಂದುದರಿಂದಲೂ, ಪೌರಾಣಿಕ ದಂತಕಥೆಗಳ ಇಬ್ಬನಿಯು ಐತಿಹಾಸಿಕ ವಾತಾವರಣದಲ್ಲಿ ದಟ್ಟವಾಗಿ ಮುಸುಕಿದುದರಿಂದಲೂ, ಆ ಸೂರ್ಯನ ಪ್ರಭೆಯೂ ಪ್ರಖರತೆಯೂ— ಅವನ ಗುಣದೋಷಗಳೆಲ್ಲಾ ನಮಗೆ ಕಾಣದ ಹಾಗಾಗಿರುತ್ತವೆ. ಅಶೋಕನ ಇತಿಹಾಸವನ್ನು ಯಾರಾದರೂ ದೊರಕಿಸುವುದಕ್ಕೆ ಪ್ರಯತ್ನಿಸಿದರೆ, ಅವರಿಗೆ ಬೌದ್ಧಧರ್ಮದ ಪೌರಾಣಿಕ ಗ್ರಂಥಗಳೂ, ಪರದೇಶೀಯ ಪ್ರವಾಸಿಗಳೂ ಗ್ರಂಥಕಾರರೂ ಬರೆದಿಟ್ಟ ಸತ್ಯಾಸತ್ಯಮಿಶ್ರಿತ ಗ್ರಂಥಗಳೂ ವಿನಾ, ವಿಶ್ವಸನೀಯ ಸಂಗತಿಗಳು ದೊರೆಯುವುದು ಅಪರೂಪ. ಸ್ವತಃ ಅಶೋಕನು ಬರೆಯಿಸಿದ ಕೆಲವು ಶಿಲಾಲೇಖಗಳು ಈಗಲೂ ಇವೆ; ಇವುಗಳಿಂದ ಮುಂದಿನ ಇತಿಹಾಸಕರ್ತರಿಗೆ ಒಳ್ಳೆಯ ಸಹಾಯವಾಗಬಹುದು. ಇಂತಹ ಮಹಾ ಚಕ್ರವರ್ತಿಯ ರಾಜ್ಯದಾಡಳಿತದ ವಿಶ್ವಸನೀಯವಾದ ವೃತ್ತಾಂತವು ಕೂಡ ದೊರೆಯದಿರುವುದು ಇತಿಹಾಸ ದೃಷ್ಟ್ಯಾ ಬಹು ಶೋಚನೀಯವಾದ ಸಂಗತಿಯಾಗಿದೆ. ಆದರೆ ಇದರ ಕಾರಣವು ಎಲ್ಲರಿಗೂ ಸಹಜವಾಗಿ ಲಕ್ಷ್ಯದಲ್ಲಿ ಬರಬಹುದು. ಡಾ|| ರಾಜೇಂದ್ರಲಾಲಮಿತ್ರರು ಈ ವಿಷಯವಾಗಿ ಹೀಗೆ ಬರೆದಿರುವರು:—'ಅಶೋಕನು ತನ್ನ ವಂಶ ಪರಂಪರಾಗತವಾದ ಧರ್ಮವನ್ನು ತ್ಯಜಿಸಿದ ಕಾರಣ, ಅವನ ವಿಷಯದಲ್ಲಿ ತಿರಸ್ಕಾರವು ಉತ್ಪನ್ನವಾಗಿ ಹಿಂದಿನ ಇತಿಹಾಸಕಾರರು ಅವನ ವೃತ್ತಾಂತವನ್ನು ಬರೆಯಲಿಲ್ಲ. ಬೌದ್ಧಗ್ರಂಥಕಾರರು ಅವನ ಸಂಪೂರ್ಣ ಇತಿವೃತ್ತವನ್ನು ಬರೆದಿಟ್ಟಿರ ಬಹುದು; ಆದರೆ ಆ ಧರ್ಮ



Digitized by ROJA MUTHIAH RESEARCH LIBRARY

ವನ್ನು ಹಿಂದುಸ್ಥಾನದಿಂದ ಹೊರಗೆಹಾಕುವ ಗದ್ದಲದಲ್ಲಿ ಆ ಗ್ರಂಥಗಳು ನಷ್ಟವಾಗಿರ ಬಹುದು.'[೬] ನಮಗೆ ಈ ಕಾರಣವು ಸಯುಕ್ತಿಕವಾಗಿ ತೋರುವುದಿಲ್ಲ. ಏಕೆಂದರೆ, ಧರ್ಮಾಂತರವನ್ನು ಮಾಡದಿದ್ದ ವಿಕ್ರಮಾದಿತ್ಯ, ಶಾಲಿವಾಹನ ಇತ್ಯಾದಿ ಹಿಂದೂ ರಾಜರ ವಿಷಯದಲ್ಲಿ ಕೂಡ ಸಾಕಷ್ಟು ಇತಿಹಾಸವು ಎಲ್ಲಿ ಉಪಲಬ್ಧವಾಗಿದೆ? ಹೀಗಾದ ಮೇಲೆ ಅದಕ್ಕೆ ಧರ್ಮಾಂತರದ ಹೊರತು ಅನ್ಯ ಕಾರಣಗಳಿರ ಬಹುದೆಂಬುದು ಸ್ಪಷ್ಟವಾಗುತ್ತದೆ. ನಮ್ಮ ಜನರಲ್ಲಿ ಬಹು ದಿವಸದಿಂದ ನಡೆದು ಬಂದಿರುವ ಅನಾಸ್ಥೆಯೇ ಇದರ ಕಾರಣವೆಂದೆನ್ನ ಬೇಕಾಗುತ್ತದೆ. ನಮ್ಮ ಈ ದೋಷವು ಪರಕೀಯ ಗ್ರಂಥಕಾರರ ಲಕ್ಷ್ಯದಲ್ಲಿ ಕೂಡ ಬಂದಂತೆ ತೋರುತ್ತದೆ. ಸಿಲೋನಿನ ಧರ್ಮಗುರುಗಳಾಗಿ ಬೌದ್ಧ ಧರ್ಮದ ಗ್ರಂಥಗಳನ್ನು ಬರೆದಿರುವ ಪ್ರಸಿದ್ಧರಾದ ಕೋಪಲ್‌ಸ್ಟನ್ ಸಾಹೇಬರು ಈ ಕೆಳಗಿನಂತೆ ಬರೆದಿರುವರು.—"ಹಿಂದೂ ಜನಾಂಗದವರು ಯಾವ ಕಾಲದಲ್ಲಿಯಾದರೂ ಚರಿತ್ರಲೇಖನದ ಕಡೆಗೆ ಮನಸ್ಸು ಕೊಟ್ಟಂತೆ ತೋರುವುದಿಲ್ಲ. ಇದು ಅವರ ಜಾನಾಂಗಿಕ ಸ್ವಭಾವವೆಂದು ತೋರುತ್ತದೆ."*

[೬] Indo-Aryans vol ii.

* "The genius of Indian nations seems to have been at all times averse to history."

## ೨ನೆಯ ಪ್ರಕರಣ.

### ಧರ್ಮಕ್ರಾಂತಿ.

ಕ್ರಿ. ಪೂ. ೬ನೆಯ ಶತಕದಲ್ಲಿ ಪ್ರಚಂಡವಾದ ಧರ್ಮಕ್ರಾಂತಿಯನ್ನು ಉಂಟುಮಾಡುವಂತಹ, ಶಾಕ್ಯ ಗೌತಮನೆಂಬ ಮಹಾಮಹಿಮನು ಹುಟ್ಟಿದನು. ಮುಂದೆ ಇವನಿಗೆ ಬುದ್ಧನೆಂಬ ಹೆಸರು ಪ್ರಾಪ್ತವಾಯಿತು. ಅವನು ತನ್ನ ಜನ್ಮಕಾಲದಲ್ಲಿಯೇ ಹಿಂದುಸ್ಥಾನದ ನಾಲ್ಕೂ ಕಡೆಗೂ ತನ್ನ ಧರ್ಮವನ್ನು ಪ್ರಸಾರಮಾಡಿದನು; ಆದರೆ ಆ ಧರ್ಮದ ಬೇರುಗಳು ಇನ್ನು ಜನರ ಅಂತಃಕರಣ ಪ್ರದೇಶದಲ್ಲಿ ಸ್ಥಿರವಾಗಿ ಪ್ರವೇಶಿಸಿರಲಿಲ್ಲ. ಇಷ್ಟರೊಳಗಾಗಿಯೆ ಬುದ್ಧನು ಮರಣಹೊಂದಿದನು. ಅವನ ಹಿಂದೆ ಕೆಲವು ಕಾಲದವರೆಗೆ ಅವನ ಶಿಷ್ಯರು ಆ ವ್ರತವನ್ನು ಚೆನ್ನಾಗಿ ನಡೆಯಿಸಿದರು; ಆದರೆ ಸರದೊಳಗಣ ನಾಯಕರತ್ನವು ಹೋಗಲು ಮಿಕ್ಕ ಮಣಿಗಳು ವಿಸ್ಖಲಿತವಾಗುವಂತೆ, ಬೌದ್ಧ ಸಂಘ ಶಕ್ತಿಯ ಮುಖ್ಯ ಮಣಿಯಾದ ಗೌತಮನು ಸತ್ತುಹೋಗಲು, ಮಿಕ್ಕ ಮಣಿಗಳು ಅಸ್ತಾವ್ಯಸ್ತವಾಗಿ ಹೋಗಿ ಅವುಗಳ ಶಕ್ತಿಯು ಕಡಮೆಯಾಯಿತು; ಮತಭೇದವೂ, ಪರಸ್ಪರ ವಿರೋಧವೂ, ಪ್ರಬಲವಾಗಿ, ಭಿನ್ನಭಿನ್ನ ಸಂಪ್ರದಾಯಗಳೂ, ಪಂಥಗಳೂ, ನಿರ್ಮಾಣವಾಗತೊಡಗಿದುವು; ಇತ್ತ ಹಿಂದೂ ಸಮಾಜದ ಆಚಾರವಿಚಾರದಲ್ಲಿ ದಿನಂಪ್ರತಿ ವಿಲಕ್ಷಣವಾದ ಅಂತರವು ಬೀಳಹತ್ತಿತ್ತು. ಧರ್ಮಶಾಸ್ತ್ರ ಮತ್ತು ರೂಢಿ ಎಂಬಿವುಗಳಲ್ಲಿ ಈಗಿನಂತೆ ಆಗಲೂ ದ್ವಂದ್ವವು ನಡೆದಿತ್ತು. ಧರ್ಮದಲ್ಲಿ ಇರುವುದು ಒಂದು, ಆಚರಣವು ಎರಡನೆಯದು, ಮತ್ತು ಪ್ರತಿಪಾದಿಸುವುದು ಮೂರನೆಯದು; ಈ ರೀತಿಯಾಗಿ ಸಾಂಪ್ರತ ನಡೆಯುತ್ತಿರುವ ಪ್ರಕಾರವು ಆಗಲೂ ಇದ್ದಿತು. ಸಾಧಾರಣವಾಗಿ ಕ್ಷತ್ರಿಯ ಕುಲವು ಲೋಪವಾಗಿ ಅವರ ಸ್ಥಾನವನ್ನು ಶೂದ್ರರು ಆಕ್ರಮಿಸಿದ್ದರು. ನಂದರಾಜನು ಶೂದ್ರನಾಗಿದ್ದನು; ಮೌರ್ಯವಂಶದ ಎಲ್ಲಾ ರಾಜರೂ ಶೂದ್ರರೇ. ಕ್ಷತ್ರಿಯ ಕುಲವು ಲೋಪವಾದಂತೆಯೇ ಬ್ರಾಹ್ಮಣಧರ್ಮವೃಕ್ಷದ ಮೂಲಕ್ಕೂ ಬೌದ್ಧಧ

Digitized by ROJA MUTHIAH RESEARCH LIBRARY

ರ್ಮವೆಂಬ ಕೀಟಕವು ಹತ್ತಿದುದರಿಂದ, ಅದರಲ್ಲಿಯ ನಿಜವಾದ ಬ್ರಾಹ್ಮಣ್ಯವು ನಷ್ಟವಾಗ ಹತ್ತಿತ್ತು. ಧರ್ಮಶಾಸ್ತ್ರಪಠಣಕ್ರಮವು ಹಿಂದುಹಿಂದು ಬಿದ್ದು, ಜನರು ದರ್ಶನಾದಿ ಶಾಸ್ತ್ರಗಳನ್ನು ಹೆಚ್ಚು ಹೆಚ್ಚಾಗಿ ಅಭ್ಯಾಸಿಸ ತೊಡಗಿದ್ದರು. ಒಂದು ಕಡೆಗೆ ನ್ಯಾಯಶಾಸ್ತ್ರ ಪದ್ಧತಿಯಂತೆ ವಿಚಾರಮಾಡುವ ಶಿಕ್ಷಣವೂ, ಎರಡನೆಯ ಕಡೆಗೆ ಸಾಂಖ್ಯದಂತಹ ನಿರೀಶ್ವರವಾದದ ಪ್ರಸಾರವೂ—ಹೀಗೆ ಇವೆರಡರ ನಡುವೆ ಬ್ರಾಹ್ಮಣಧರ್ಮವು ಸಿಕ್ಕಿ ಬಿದ್ದು ಪೇಚಾಡುತ್ತಿತ್ತು. ಒಂದು ದಿಕ್ಕಿಗೆ ಪತಂಜಲಿಕೃತ ಯೋಗಶಾಸ್ತ್ರದಲ್ಲಿ ಹೇಳಿದ ಅನೇಕ ಅನ್ನೈಸರ್ಗಿಕ ವ್ಯಾಪಾರಗಳೂ, ಮತ್ತೊಂದು ದಿಕ್ಕಿಗೆ ಇವುಗಳನ್ನು ಧಿಕ್ಕರಿಸಿ ಶಾಂತತೆ, ಕ್ಷಮೆ, ದಯೆ, ಇತ್ಯಾದಿ ಗುಣಗಳ ಮಹತ್ವವನ್ನು ಕೊಂಡಾಡುವ ಬೌದ್ಧಧರ್ಮದ ಉಪದೇಶವು. ಹೀಗೆ ಇವೆರಡು ಪರಸ್ಪರ ವಿರುದ್ಧ ಶಕ್ತಿಗಳ ಎಳೆತಕ್ಕೆ ಸಿಕ್ಕಿದುದರಿಂದ, ಆ ಕಾಲದಲ್ಲಿ ಬ್ರಾಹ್ಮಣರ ಸ್ಥಿತಿಯು ಬಹು ಶೋಚನೀಯವಾಗಿದ್ದಿತು. ಅಲೆಕ್ಝಾಂಡರ್ ಮುಂತಾದ ಗ್ರೀಕ ರಾಜರು ಭರತಖಂಡದ ಮೇಲೆ ದಾಳಿಗಳನ್ನು ಇಟ್ಟು, ದೇಶವನ್ನು ಅಸಹ್ಯವಾದ ಕಷ್ಟಗಳಿಗೆ ಗುರಿಯಾಗಿ ಮಾಡಿದರು. ಇವುಗಳ ಪರಿಣಾಮವು ಸಮಾಜದ ಮೇಲೆ ಅಕಲ್ಪಿತವಾದ ರೀತಿಯಿಂದಾಗುತ್ತಲಿತ್ತು. ಈ ಪರದೇಶಸ್ಥರ ಒಡನೆ ಪುನಃ ಪುನಃ ರಾಜಕಾರ್ಯಗಳನ್ನು ನಡೆಯಿಸುವ ಅವಶ್ಯಕತೆ ಬೀಳುತ್ತಿದ್ದುದರಿಂದ, ಭರತಖಂಡದ ರಾಜರಲ್ಲಿಯೂ ಅವರಲ್ಲಿಯೂ ಒಂದು ಬಗೆಯ ಸಂಘಟ್ಟಣವಾಗತೊಡಗಿ, ಅದು ಪರಸ್ಪರ ಅತ್ಯಧಿಕವಾಗಿ ಬೆಳೆದು ವಿವಾಹಗಳು ಸಹ ಆಗುತ್ತಿದ್ದುವೆಂದು ಹಲವರ ಲೇಖದಿಂದ ವಿದಿತವಾಗುತ್ತಿದೆ. ಮಗಧದೇಶಾಧಿಪನಾದ ಚಂದ್ರಗುಪ್ತನು (ಅಶೋಕನ ಅಜ್ಜನು) ಗ್ರೀಕ ರಾಜಪುತ್ರಿಯನ್ನು ಲಗ್ನಮಾಡಿಕೊಂಡ ಸಂಗತಿಯು ಇತಿಹಾಸದಲ್ಲಿದೆ. ರಾಜನ ಈ ಮಾರ್ಗವನ್ನು ಅವನ ಸರದಾರರು ಅನುಸರಿಸಿದ್ದರೆಂದೂ ಆಶ್ಚರ್ಯಪಡಲು ಕಾರಣವಿಲ್ಲ. ಸಾರಾಂಶವೇನೆಂದರೆ, ಆ ಕಾಲದಲ್ಲಿ ಗ್ರೀಕ ಮತ್ತು ಹಿಂದೂ ರಕ್ತದ ಸಂಮೇಲನವು ಸ್ವಲ್ಪಸ್ವಲ್ಪವಾಗಿ ಆಗತೊಡಗಿತ್ತು.



ಮುಂದಿನ ಕಾಲದ ಇತಿಹಾಸವು ಉಪಲಬ್ಧವಾಗಿಲ್ಲವಾದುದರಿಂದ, ಈ ಕ್ರಮವು ಹಾಗೆಯೆ ನಡೆಯಿತೋ ಇಲ್ಲವೋ ಎಂಬುದನ್ನು ತಿಳಿಯಲು ಮಾರ್ಗವಿಲ್ಲ. ಆದರೂ ಕ್ರಿ. ಶ. ಪೂ. ೩—೪ನೆಯ ಶತಕಗಳಲ್ಲಿ ಧಾರ್ಮಿಕ ಮತ್ತು ಸಾಮಾಜಿಕ ಸ್ಥಿತಿ ಮೇಲೆ ವಿವರಿಸಿದಂತೆ ಇತ್ತೆಂಬುದರಲ್ಲಿ ಏನೇನೂ ಸಂದೇಹವಿಲ್ಲ. ಆ ಕಾಲದ ಜನರ ಆಚಾರವಿಚಾರಗಳಲ್ಲಿ ಒಂದು ಬಗೆಯ ಸ್ಥಿತ್ಯಂತರವು ನಡೆದಿತ್ತು.

ಈ ಪ್ರಕಾರ, ಅಶೋಕನ ಆಳಿಕೆಯಲ್ಲಿ ಅಕಲ್ಪಿತ ರೀತಿಯಿಂದಾದ ಧರ್ಮಕ್ರಾಂತಿಯ ಬೀಜವನ್ನು ಅವನ ಅಜ್ಜನಾದ ಚಂದ್ರಗುಪ್ತನು ಅದಕ್ಕೆ ಪೂರ್ವದಲ್ಲಿಯೇ ಬಿತ್ತಿದ್ದನೆಂಬುದು ಇದರಿಂದ ವ್ಯಕ್ತವಾಗುತ್ತಿದೆ.

ಜಾಣರೂ, ಸ್ವಕರ್ತವ್ಯದಕ್ಷರೂ, ಆದವರು ಅನ್ಯರ ಸಂಗತಿಯಿಂದ ಯಾವ ಬಗೆಯ ಲಾಭವನ್ನೂ ಮಾಡಿಕೊಳ್ಳದಿರುವುದಿಲ್ಲ. ಕ್ರಿ. ಶ. ಪೂ. ೩—೪ನೆಯ ಶತಕಗಳಲ್ಲಿ ಗ್ರೀಕರು ತಿರಿತಿರಿಗಿ ದೌಡುಗಳನ್ನು ಮಾಡಹತ್ತಿದುದರಿಂದ, ಗ್ರೀಕ ಮತ್ತು ಹಿಂದೂ ಜನರ ಸಂಘಟ್ಟಣವು ವಿಶೇಷವಾಗಲಾರಂಭಿಸಿತ್ತೆಂಬುದನ್ನು ಮೇಲೆ ಹೇಳಿರುವೆವು. ಗ್ರೀಕರು ಆಗ್ಗೆ ಸಂಸ್ಕರಣಶಿಖರವನ್ನು ಆರೋಹಿಸಿದ್ದರು. ಇವರಿಂದ ಹಿಂದೂ ಜನರು ಭೌತಿಕ ಶಾಸ್ತ್ರಗಳನ್ನೂ ಕಲೆಗಳನ್ನೂ ಸಂಪಾದಿಸಿಕೊಂಡರು. ಹೀಗೆ ಹೇಳಿದುದರಿಂದ ಇಷ್ಟರ ವರೆಗೆ ಹಿಂದೂಜನರಿಗೆ ಶಾಸ್ತ್ರ ಮತ್ತು ಕಲೆಗಳ ಜ್ಞಾನವಿದ್ದಿಲ್ಲವೆಂದೂ, ಅವುಗಳನ್ನು ಅವರು ಗ್ರೀಕರಿಂದಲೇ ಸಂಪಾದಿಸಿಕೊಂಡರೆಂದೂ ಕೆಲವರು ತಿಳಿದುಕೊಂಡಿರುವರು. ಶಿಲ್ಪಕ್ರಿಯೆಯನ್ನೂ ಲೇಖನಕಲೆಯನ್ನೂ ಸಹ ಗ್ರೀಕರೇ ಮೊದಲು ಇಲ್ಲಿಗೆ ತಂದರೆಂದು ಹೀಗೆಯೂ ಕೆಲವು ಇತಿಹಾಸಕರ್ತರ ಅಭಿಪ್ರಾಯವಿದೆ. ಇದಕ್ಕೆ ಏನೂ ಆಧಾರವು ದೊರೆಯುವುದಿಲ್ಲ.[೧] ಹಿಂದೂ ಜನರಿಗೆ ಪೂರ್ವದಿಂ

[೧] ಈ ಸಂಬಂಧವಾದ ಸವಿಸ್ತರ ವಿವೇಚನೆಯು R. C. Dutt's "History of Civilization in Ancient India" ಮತ್ತು Dr. Rajendra Lal Mitra's "Indo-Aryans" ಎಂಬ ಈ ಗ್ರಂಥಗಳಲ್ಲಿ ಇದೆ. ಅದನ್ನು ಜಿಜ್ಞಾಸುಗಳು ನೋಡಬಹುದು.

Digitized by ROJA MUTHIAH RESEARCH LIBRARY

ದಲೇ ಈ ಎಲ್ಲಾ ವಿದ್ಯೆಗಳ ಜ್ಞಾನವಿತ್ತು; ಆದರೆ ಗ್ರೀಕರ ಉದಾಹರಣೆಯಿಂದ ಅವರು ಅದರಲ್ಲಿ ಪರಿಷ್ಕರಣವನ್ನು ಮಾಡಿದರೆಂಬುದು ಮಾತ್ರ ನಿಜವು. ಈ ಕಾಲದ ಕೈಗಾರಿಕೆಯನ್ನು ನೋಡಿ ಡಾ॥ ಫರ್ಗ್ಯೂಸನ್ ಎಂಬ ಶಿಲ್ಪಕಲಾವಿಚಕ್ಷಣಪಂಡಿತನು ಹೀಗೆ ಬರೆದಿರುವನು—"ಕ್ರಿ. ಶ. ಪೂ. ೩ನೆಯ ಶತಕದಲ್ಲಿಯ ಬುದ್ಧಗಯಾ ಎನ್ನಿಸುವ ಬಾರಹಟದಲ್ಲಿಯ ಕೈಗಾರಿಕೆಯು ಪೂರ್ಣವಾಗಿ ಹಿಂದೂಜನರೇ ಮಾಡಿದುದಾಗಿದೆ. ಅದರಲ್ಲಿ ಪರದೇಶದ ಪದ್ಧತಿಯು ಮಿಶ್ರವಾಗಿಲ್ಲ. ಅಲ್ಲಿ, ಆನೆ, ಎರಳೆ, ಮಂಗಗಳ ಚಿತ್ರಗಳನ್ನು ಕೊರೆಯುವುದರಲ್ಲಿ ತೋರಿಸಿದ ಕುಶಲತೆಯು ಪೃಥ್ವಿಯ ಮೇಲೆ ಎಲ್ಲಿಯೂ ಕಂಡುಬರುವುದಿಲ್ಲ. ಮತ್ತು ಅಲ್ಲಿಯ ಗಿಡ, ಬಳ್ಳಿ ಮುಂತಾದುವುಗಳಲ್ಲಿ ವ್ಯಕ್ತವಾಗುವ ಸೂಕ್ಷ್ಮತ್ವವು ಹೊಗಳತಕ್ಕುದಾಗಿದೆ."[೮]

ಈ ಕಾಲದ ಜನರಲ್ಲಿ ಪ್ರಚಲಿತವಾಗಿರುತ್ತಿದ್ದ ಭಾಷೆಯು ಯಾವುದೆಂಬುದನ್ನು ತಿಳಿಯಲು ಸಾಧನಗಳಿಲ್ಲ. ಆದರೂ ಅಶೋಕನು ಎಲ್ಲರಿಗೂ ತಿಳಿಯಬೇಕೆಂಬ ಉದ್ದೇಶದಿಂದ ಶಿಲಾಲೇಖಗಳನ್ನು ಪಾಲೀ ಭಾಷೆಯಲ್ಲಿ ಬರೆಯಿಸಿರುವುದರಿಂದ ಪಾಲೀ ಭಾಷೆಯೇ ಆ ಕಾಲದ ಪ್ರಚಲಿತ ಭಾಷೆಯೆಂಬಂತೆ ತೋರುತ್ತಿದೆ. ಅಶೋಕನ ಲೇಖಗಳಲ್ಲಿ ಸಹ ಕಾಲಪರತ್ವದಿಂದ ಸ್ವಲ್ಪ ಭೇದ ಉಂಟು. ಪಾಲೀ ಭಾಷೆಗೆ ಪಂಜಾಬೀ, ಉಜ್ಜನೀ, ಮಾಗಧೀ, ಎಂಬ ಮೂರು ಶಾಖೆಗಳಿದ್ದುವೆಂದು ಜನರಲ್ ಕನಿಂಗಹ್ಯಾಮ್‌ನೆಂಬ ಪಂಡಿತನು ನಿಶ್ಚೈಸಿರುವನು. ಪಂಜಾಬೀ ಪಾಲಿಯಲ್ಲಿ 'ರ' ಎಂಬ ಅಕ್ಷರವಿದ್ದು, ಆ 'ರ'ದ ಉಚ್ಚಾರವು ಸ್ಪಷ್ಟವಾಗಿ ಆಗುತ್ತಿತ್ತು; (ಉ. ಪ್ರಿಯದರ್ಶಿ, ಶ್ರಾಮಣ ಇತ್ಯಾದಿ). ಹಾಗೆಯೇ ಶ, ಷ, ಸ ಈ ಮೂರು ಅಕ್ಷರಗಳ ಭೇದವನ್ನು ಅವರು ತಿಳಿಯುತ್ತಿದ್ದರು. ಉಜ್ಜನೀ ಪಾಲಿಯಲ್ಲಿ 'ರ' ಮತ್ತು 'ಲ' ಇವೆರಡು

೮ R. C. Dutt's "History of Civilization in Ancient India" vol. ii. p. 64.



ಅಕ್ಷರಗಳಿದ್ದುವು. ಒಮ್ಮೊಮ್ಮೆ 'ಷ' ಎಂಬೀ ಅಕ್ಷರವನ್ನು ಸಹ ಉಪಯೋಗಿಸುತ್ತಿದ್ದರು (ಉ. ಪಾಷಂಡ). ಮಾಗಧೀ ಪಾಲಿಯಲ್ಲಿ 'ರ' ಎಂಬ ಅಕ್ಷರವೇ ಇದ್ದಿಲ್ಲ. ಆದರೆ ಅದರ ಬದಲು 'ಲ' ಬರೆಯುವ ಪದ್ಧತಿಯು ಇದ್ದಿತು. ವಿಲ್ಸನ್ ಮತ್ತು ಲಾಸನ್ ಸಾಹೇಬರ ಅಭಿಪ್ರಾಯವು ಕೂಡ ಹೀಗೆಯೇ ಇದೆ. ಪ್ರಿನ್ಸೆಪ್ ಸಾಹೇಬರು "ಈ ಅಶೋಕನ ಲಿಪಿಯ ಭಾಷೆಯು ಸಂಸ್ಕೃತ ಮತ್ತು ಪಾಲೀಗಳ ನಡುವಿನ ಎರಡನೆಯ ಭಾಷೆಯಾಗಿರಬೇಕು" ಎಂದಿರುವರು. ಆದರೆ ಇತರರಾದ ಅನೇಕ ವಿದ್ವಾಂಸರು ಅದು ಪಾಲೀ ಭಾಷೆಯಾಗಿಯೇ ಇರಬಹುದೆನ್ನುತ್ತಿರುವರು. ಅಶೋಕನ ಕಾಲದ ಲಿಪಿಯು ಬಹು ಚಮತ್ಕಾರಿಕವಾಗಿತ್ತು. ಈ ಲಿಪಿಯಲ್ಲಿ ಎರಡು ರೀತಿಗಳಿದ್ದುವು. ಅರಬ್ಬೀ ಅಥವಾ ಫಾರಸೀ ಭಾಷೆಗಳಂತೆ ಎಡಗಡೆಯಿಂದ ಬಲಗಡೆಗೆ ಬರೆಯುವುದು ಮೊದಲನೆಯದು; ಮತ್ತು ಕನ್ನಡ, ಮಹಾರಾಷ್ಟ್ರ, ಇಂಗ್ಲೀಷು ಭಾಷೆಗಳಂತೆ ಬಲಗಡೆಯಿಂದ ಎಡಗಡೆಗೆ ಬರೆಯುವುದು ಎರಡನೆಯದು. ಇವುಗಳಲ್ಲಿ ಮೊದಲನೆಯ ಲಿಪಿಯ ಮಾದರಿಯು ಕಪರ್ದಗಿರಿಯಲ್ಲಿಯ ಲೇಖಗಳಲ್ಲಿ ಕಂಡುಬರುತ್ತಿದೆ. ಈ ಲಿಪಿಗೆ ಅಂಗ್ಲಪಂಡಿತರು 'ಆರಿಯಾನೋಪಾಲಿ' (Ariano-pāli) ಎಂದು ಹೆಸರು ಕೊಟ್ಟಿರುವರು. ಎರಡನೆಯದು ಅಶೋಕನ ಮಿಕ್ಕ ಲೇಖಗಳಲ್ಲಿ ಕಂಡುಬರುತ್ತಿದೆ. ಇದಕ್ಕೆ 'ಇಂಡೋಪಾಲಿ' (Indo-pāli) ಎಂದೆನ್ನುವರು. ಇವುಗಳಲ್ಲಿ ಮೊದಲನೆಯದು ಪರದೇಶಸ್ಥರಿಂದ ತೆಗೆದುಕೊಂಡುದೆಂತಲೂ, ಎರಡನೆಯದು ಹಿಂದುಸ್ಥಾನದ್ದೇ ಎಂತಲೂ ಹೇಳುವರು. ದೇವನಾಗರಿ ಎಂಬ ಭಾಷೆಯು ಎರಡನೆಯ ಭಾಷೆಯಿಂದಲೇ ಉತ್ಪನ್ನವಾಯಿತೆಂದು ಹೇಳುತ್ತಿರುವರು.[೯]

---

೯ ದೇವನಾಗರಿ ಇತ್ಯಾದಿ ಲಿಪಿಗಳ ಮೂಲ ಉತ್ಪತ್ತಿಯ ವಿಷಯವಾಗಿ ಜನರಲ್ ಕನಿಂಗ್‌ಹ್ಯಾಮ್ ಸಾಹೇಬರು ತಮ್ಮ "Corpus Inscriptionum Indicarum" Vol. i ಎಂಬೀ ಅಮೌಲ್ಯವಾದ ಗ್ರಂಥದಲ್ಲಿ ಉತ್ಕೃಷ್ಟವಾಗಿಯೂ ವಿದ್ವತ್ಪೂರ್ಣವಾಗಿಯೂ ವಿವೇಚಿಸಿರುವರು. ಅದನ್ನು ಜಿಜ್ಞಾಸುಗಳು ನೋಡಬಹುದು.

Digitized by ROJA MUTHIAH RESEARCH LIBRARY

## ೩ನೆಯ ಪ್ರಕರಣ.

### ಕುಲ ವೃತ್ತಾಂತ.

ಮಗಧ ದೇಶವು ಅತೀ ಪ್ರಾಚೀನ ಕಾಲದಿಂದಲೂ ಇತಿಹಾಸ ಪ್ರಸಿದ್ಧವಾಗಿದೆ. ಕೌರವ, ಪಾಂಡವರ ಕಾಲದಲ್ಲಿ ಜರಾಸಂಧನೆಂಬ ಮಹಾಪರಾಕ್ರಮಿಯಾದ ರಾಜನು ಆ ದೇಶದಲ್ಲಿ ಇದ್ದನು. ಅವನು ಅನೇಕ ರಾಜ್ಯಗಳನ್ನು ಪಾದಾಕ್ರಾಂತಗಳನ್ನಾಗಿ ಮಾಡಿ ಅವುಗಳ ರಾಜರುಗಳನ್ನು ಬಂದಿಗಳನ್ನಾಗಿ ತಂದು ಕಾರಾಗೃಹದಲ್ಲಿ ಇಟ್ಟಿದ್ದನು. ಕಡೆಗೆ ಶ್ರೀಕೃಷ್ಣನು ಪಾಂಡವರೊಂದಿಗೆ ಬ್ರಾಹ್ಮಣವೇಷವನ್ನು ತಾಳಿ ಅವನ ಯಜ್ಞಶಾಲೆಗೆ ಹೋಗಿ, ಭೀಮನಿಂದ ಅವನನ್ನು ಮಲ್ಲಯುದ್ಧದಲ್ಲಿ ಕೊಲ್ಲಿಸಿದನೆಂಬೀ ಕಥೆಯು ಸುಪ್ರಸಿದ್ಧವಾಗಿರುವುದು. ಜರಾಸಂಧನ ಪುತ್ರ ಸಹದೇವನೆಂಬುವನು. ಈ ಸಹದೇವನು ಕುರುಕ್ಷೇತ್ರದಲ್ಲಿ ಆದ ಪ್ರಚಂಡವಾದ ಭಾರತಯುದ್ಧದಲ್ಲಿ ಕೌರವರ ಕಡೆಯಿಂದ ಯುದ್ಧ ಮಾಡುತ್ತಿದ್ದನು. ಸಹದೇವನ ಅನಂತರ ೨೧ ಜನ ಪುರುಷರು ರಾಜ್ಯವಾಳಿದ ಬಳಿಕ ಮಗಧ ದೇಶದ ರಾಜ್ಯವು ಪ್ರದ್ಯೋತ ವಂಶದ ಪುರುಷರ ಕಡೆಗೆ ಹೋಯಿತು. ಆ ಬಳಿಕ ಆಳಿದ ರಾಜರುಗಳ ಹೆಸರುಗಳನ್ನು ವಿಷ್ಣುಪುರಾಣದಲ್ಲಿ ಈ ಕೆಳಗಿನಂತೆ ಕೊಟ್ಟಿರುವರು.—೧ ಶಿಶುನಾಗ, ೨ ಕಾಕವರ್ಣ, ೩ ಕ್ಷೇಮಧರ್ಮನ್, ೪ ಕ್ಷತ್ರೌಜ, ೫ ಬಿಂಬಿಸಾರ, ೬ ಅಜಾತಶತ್ರು, ೭ ದರ್ಭಕ, ೮ ಉದಯೊಶ, ೯ ನಂದವರ್ಧನ, ೧೦ ಮಹಾನಂದಿ, ಮತ್ತು ೧೧ ಸುಮಾಲ್ಯ; ಈ ಸುಮಾಲ್ಯನಿಗೆ ಇನ್ನು ಎಂಟು ಮಂದಿ ತಮ್ಮಂದಿರಿದ್ದರು. ಇವರು ಕ್ರಮವಾಗಿ ಒಬ್ಬರ ಹಿಂದೊಬ್ಬರು ಪಟ್ಟಕ್ಕೆ ಬಂದರು. ನಂದವಂಶದ ಕಡೆಯ ರಾಜನ ಕಾಲದಲ್ಲಿ ಚಂದ್ರುಗುಪ್ತನು (ಇವನಿಗೆ ಗ್ರೀಕಭಾಷೆಯಲ್ಲಿ ಸಾಂದ್ರಕೋಟಸ್ ಎನ್ನುವರು) ಮಗಧ ದೇಶದ ಮೇಲೆ ದಂಡೆತ್ತಿ ಹೋಗಿ ಅದನ್ನು ಹಸ್ತಗತವನ್ನಾಗಿ ಮಾಡಿಕೊಂಡನು. ನಮ್ಮ ಪೌರಾಣಿ



ಕಗ್ರಂಥಗಳಲ್ಲಿ ಚಂದ್ರುಗುಪ್ತನು ಒಬ್ಬ ದಾಸಿಯ ಪುತ್ರನೆಂದು ಬರೆದಿದೆ. ಇವನು ಸುಪ್ರಸಿದ್ಧ ರಾಜ್ಯಕಾರ್ಯಧುರಂಧರನಾದ ಚಾಣಕ್ಯನೆಂಬುವನನ್ನು ವಶಮಾಡಿಕೊಂಡು, ಅವನ ಸಹಾಯದಿಂದ ನಂದಕುಲವನ್ನು ಸಂಹರಿಸಿ, ಮಗಧ ದೇಶದ ಗದ್ದುಗೆಯನ್ನು ಸೆಳೆದುಕೊಂಡನು.[೧೦] ಚಂದ್ರುಗುಪ್ತನು ಮೋರಿಯನಗರದ ರಾಣಿಯ ಪುತ್ರನಾಗಿದ್ದನು. ಹೀಗಾದುದರಿಂದ ಅವನ ಕುಲಕ್ಕೆ ಮೌರ್ಯ ವಂಶವೆಂಬ ಹೆಸರು ಬಂದಿತೆಂದು ಬೌದ್ಧ ದಂತಕಥೆಯುಂಟು.[೧೧] ಅದು ಹೇಗಿದ್ದರೂ ಚಂದ್ರುಗುಪ್ತನು ಪರಾಕ್ರಮಿಯಾಗಿದ್ದನೆಂಬುದರಲ್ಲಿ ಸಂದೇಹವಿಲ್ಲ. ಇವನ ಸಭೆಯಲ್ಲಿ ಗ್ರೀಕ ರಾಜನ ವಕೀಲನಾದ ಮೆಗಸ್ಥನಿಸನೆಂಬುವನಿದ್ದನು. ಇದಲ್ಲದೆ ಗ್ರೀಕ ರಾಜನಾದ ಸೆಲ್ಯೂಕಸ್ ಎಂಬುವನು ತನ್ನ ಪುತ್ರಿಯನ್ನೂ ಚಂದ್ರುಗುಪ್ತನಿಗೆ ಕೊಟ್ಟಿದ್ದನು. ಕ್ರಿ. ಶ. ಪೂ. ೨೯೧ನೆಯ ವರ್ಷದಲ್ಲಿ ಚಂದ್ರುಗುಪ್ತನು ಮರಣ ಹೊಂದಿದ ಬಳಿಕ ಅವನ ಪುತ್ರನಾದ ಬಿಂದುಸಾರನು ಪಟ್ಟಕ್ಕೆ ಬಂದನು. ಗ್ರೀಕರು ಇವನಿಗೆ ಅಮಿತ್ರಕೇಟಸ್ [Amitrachates=(ಸಂಸ್ಕೃತ) ಅಮಿತ್ರಕೇತು ಇಲ್ಲವೆ ಶತ್ರುವಿನಾಶಕ] ಎಂದೆನ್ನುತ್ತಿದ್ದರು. ಈ ಬಿಂದುಸಾರನಿಗೆ ಇಬ್ಬರು ಮಕ್ಕಳು, ಹಿರಿಯವನಿಗೆ ಸುಶೀಮನೆಂತಲೂ, ಕಿರಿಯವನಿಗೆ ಅಶೋಕ ಅಥವಾ ಅಶೋಕವರ್ಧನನೆಂತಲೂ ಕರೆಯುತ್ತಿದ್ದನು. ಈ ಅಶೋಕನೇ ನಮ್ಮ ಚರಿತ್ರನಾಯಕನು.[೧೨]

---

೧೦ ವಿಶಾಖದತ್ತಕೃತ ಮುದ್ರಾರಾಕ್ಷಸ ನಾಟಕವನ್ನು ನೋಡಿರಿ.

೧೧ Beal's Si-yw-ki.

೧೨ ಅಶೋಕಚರಿತ್ರ ಸಂಬಂಧವಾದ ಮೂರು ಹಸ್ತಲೇಖಗಳು ದೊರೆತಿವೆ. ೧. ಅವದಾನ ಶತಕ, ೨. ದಿವ್ಯ ಅವದಾನ, ೩. ಅಶೋಕ ಅವದಾನ, ಇವುಗಳಲ್ಲಿ ಅಶೋಕ ಅವದಾನದಲ್ಲಿ ೧೦೦೦ ಅನುಷ್ಟುಪ್ ಶ್ಲೋಕಗಳಿದ್ದು ಅದೇ ವಿಶೇಷ ಮಹತ್ವದ್ದಾಗಿ ತಿಳಿಯಲ್ಪಟ್ಟಿದೆ. ಈ ಗ್ರಂಥದ ಆರಂಭದಲ್ಲಿಯೆ ಅಶೋಕನ ವಂಶಾವಳಿಯು ಈ ಕೆಳಗಿನಂತೆ ಕೊಟ್ಟಿದೆ. ೧. ಬಿಂಬಿಸಾರ (ಈತನು ಶಾಕ್ಯಗೌತಮ ಬುದ್ಧನ ಸಮಕಾಲಿಕನು), ೨. ಮಹೀಪಾಲ, ೩. ಉದಯೊಶ, ೪. ಮುಂಡ, ೫. ಕಾಕವರ್ಣ, ೬ ಸಹಲೀ, ೭. ತರಕರೀ, ೮. ಮಹಾಮುಂಡಲ, ೯. ಪ್ರಸೇನಜಿತ್, ೧೦. ನಂದ, ೧೧. ಬಿಂದುಸಾರ ಮತ್ತು ೧೨. ಅಶೋಕ. ದಿವ್ಯ ಅವದಾನದಲ್ಲಿ ಕೊಟ್ಟ ಹೆಸರುಗಳಿಗೂ ಇವಕ್ಕೂ ತುಂಬಾ ಹೆಚ್ಚುಕಡಮೆಯಿದೆ.

Digitized by ROJA MUTHIAH RESEARCH LIBRARY

ಅಶೋಕನ ಜನ್ಮದ ವಿಷಯದಲ್ಲಿ ಒಂದು ಕಥೆಯುಂಟು. ಅದೇನಂದರೆ;—ಅಶೋಕನ ಪಿತನಾದ ಬಿಂದುಸಾರನು ರಾಜ್ಯವಾಳುತ್ತಿರಲು, ಚಂಪಾಪುರಿಯೆಂಬ ಪಟ್ಟಣದಲ್ಲಿ ಒಬ್ಬ ದರಿದ್ರನಾದ ಬ್ರಾಹ್ಮಣನು ಇರುತ್ತಿದ್ದನು. ಅವನಿಗೆ ಸುಭದ್ರಾಂಗಿ ಎಂಬ ಸುಸ್ವರೂಪೆಯಾದ ಮಗಳೊಬ್ಬಳಿದ್ದಳು. ಇವಳು ವಿವಾಹಯೋಗ್ಯಳಾಗಲು, ಬ್ರಾಹ್ಮಣನು ಅವಳಿಗಾಗಿ ವರನನ್ನು ಹುಡುಕುವ ಯೋಚನೆಯಲ್ಲಿರಲು, ಒಬ್ಬ ಜೋಯಿಸನು ಸಹಜವಾಗಿ ಅವನ ಮನೆಗೆ ಬಂದನು; ಅವನು ಇವಳ ಜನ್ಮಪತ್ರಿಕೆಯನ್ನು ನೋಡಿ ಈ ಹುಡುಗಿಯ ಉದರದಲ್ಲಿ ಯಾರೊಬ್ಬ ದೊಡ್ಡ ಚಕ್ರವರ್ತಿಯಾಗುವ ಕುವರನು ಹುಟ್ಟುವನು; ಇವಳ ಗ್ರಹಸ್ಥಿತಿಯು ಹಾಗಿರುವುದೆಂದು ಹೇಳಿದನು. ಅದನ್ನು ಕೇಳಿ ಆ ಭವಿಷ್ಯದ ಸತ್ಯತೆಯನ್ನು ನೋಡುವುದಕ್ಕೋಸ್ಕರ ಬ್ರಾಹ್ಮಣನು ತನ್ನ ಮಗಳೊಂದಿಗೆ ರಾಜಮಂದಿರಕ್ಕೆ ಹೋಗಿ, ರಾಜನಿಗೆ ಅವಳನ್ನು ಕಾಣಿಕೆಯಾಗಿ ಒಪ್ಪಿಸಿದನು. ಆ ಬ್ರಾಹ್ಮಣಕನ್ಯೆಯ ರೂಪಲಾವಣ್ಯಗಳನ್ನು ನೋಡಿ, ರಾಜನು ಮೋಹಿತನಾಗಿ ಅವಳನ್ನು ಲಗ್ನಮಾಡಿಕೊಂಡು ಅಂತಃಪುರದಲ್ಲಿ ಇಟ್ಟನು. ರಾಜನು ಅವಳನ್ನು ಪ್ರೀತಿಸುವುದು ಅಂತಃಪುರದೊಳಗಣ ಮಿಕ್ಕ ರಾಣಿಯರಿಗೆ ಬಹು ದುಸ್ಸಹವಾಯಿತು. ಅವರು ಅವಳ ಮೇಲೆ ದ್ವೇಷ ಮಾಡತೊಡಗಿ, ಕೀಳಾದ ಕೆಲಸಗಳಿಗೆ ಅವಳನ್ನು ನಿಯೋಜಿಸಿ, ಸಾಧ್ಯವಾದಮಟ್ಟಿಗೆ ಅವಳನ್ನು ರಾಜನ ದೃಷ್ಟಿಗೆ ಬೀಳಗೊಡದೆ ರಾಜನಿಗೆ ಅವಳ ಮೇಲೆ ಇದ್ದ ದಯೆಯು ಕಡಮೆ ಆಗುವಂತೆ ಯತ್ನಿಸಿದರು. ಈ ಮೇರೆಗೆ ಅನೇಕ ದಿವಸಗಳಾದ ಬಳಿಕ ರಾಜನು ಅವಳನ್ನು ಸಂಪೂರ್ಣವಾಗಿ ಮರೆತನು. ಇದರಿಂದ ಬ್ರಾಹ್ಮಣಕನ್ಯೆಯು ದುಃಖಿತಳಾಗಿ ರಾಜನನ್ನು ಒಲಿಸಿಕೊಳ್ಳುವುದಕ್ಕೋಸ್ಕರ ಅವನ ತಲೆಬಾಚುವ ಕೆಲಸವನ್ನು ಕೈಕೊಂಡಳು. ಅವಳು ಆ ಕೆಲಸವನ್ನು ಚೆನ್ನಾಗಿ ಮಾಡಿದುದರಿಂದ, ಒಂದು ದಿನ ರಾಜನು ಅವಳ ಮೇಲೆ ಸುಪ್ರಸನ್ನನಾಗಿ, “ನಿನಗೇನು ಉಚಿತ ಬೇಕು ? ಬೇಡು. ಕೊಡುವೆನು”



ಎಂದನು. ಆಗ ಅವಳು ನಮ್ರತೆಯಿಂದ—“ಪ್ರಭೋ, ಸ್ತ್ರೀಯರಾದ ನಮಗೆ ಪಟ್ಟರಾಣಿಯ ಪದಕ್ಕಿಂತ ಹೆಚ್ಚಾಗಿ ಬೇಕಾದುದು ಏನಿದೆ? ಮಹಾರಾಜರು ಅನುಗ್ರಹಿಸುವುದಾದರೆ ಅದನ್ನು ದಯಪಾಲಿಸ ಬೇಕು” ಎಂದಳು. ಅದಕ್ಕೆ ರಾಜನು---“ಅದು ಹೇಗೆ ಸಾಧ್ಯವು? ನಾವು ಕ್ಷತ್ರಿಯರು; ಇನ್ನು ನೀನು ದಾಸಿ, ಶೂದ್ರಕನ್ಯೆ” ಎಂದನು. ಆಗ ಬ್ರಾಹ್ಮಣ ಕನ್ಯೆಯು ತನ್ನ ಇತ್ಯಂಭೂತ ಕಥೆಯನ್ನು ಹೇಳಿದಳು. ಅದನ್ನು ಕೇಳಿ ರಾಜನಿಗೆ ಮಿಕ್ಕ ಸವತಿಯರ ಮಾತ್ಸರ್ಯವೂ ಬ್ರಾಹ್ಮಣಕನ್ಯೆಯ ಸೌಜನ್ಯವೂ ತಿಳಿದು ಸಂತುಷ್ಟನಾಗಿ, ಅವನು ಅವಳಿಗೆ ಪಟ್ಟರಾಜ್ಞಿಯ ಪದವನ್ನು ಕೊಟ್ಟು ಪ್ರತ್ಯೇಕವಾಗಿ ನಿಲ್ಲಿಸಿದನು. ದಂಪತಿಗಳಾದ ಅವರಿಬ್ಬರ ಪ್ರೇಮವು ದಿನಕ್ರಮವಾಗಿ ಹೆಚ್ಚಿತು; ಮತ್ತು ಆ ಪ್ರೀತಿವೃಕ್ಷಕ್ಕೆ ಮೊದಲನೆಯ ಮಧುರಫಲವಾದ ಅಶೋಕನೆಂಬ ಪುತ್ರರತ್ನವು ಹುಟ್ಟಿತು. ಅವನನ್ನು ಹಡೆಯುವಾಗ ಮಾತೆಗೆ ಸ್ವಲ್ಪವಾದರೂ ಪ್ರಯಾಸವಾಗಲೀ ನೋವಾಗಲೀ ಆಗದ ಕಾರಣ ಅವನಿಗೆ ಅಶೋಕನೆಂಬ ಹೆಸರಿಟ್ಟರು. ಅಶೋಕನ ತರುವಾಯ ಅವಳಿಗೆ ಮತ್ತೊಬ್ಬ ಮಗನು ಹುಟ್ಟಿದನು. ಇದೇ ಕಾರಣದ ದೆಸೆಯಿಂದ ಅವನಿಗೂ ವೀತಾಶೋಕನೆಂದು ಹೆಸರಿಟ್ಟರು.[೧೩]

---

೧೩ ಮಿ. ಹಾಗ್ಸನ್ ಎಂಬುವರು ನೇಪಾಳದಿಂದ ತಂದ ಅನೇಕ ಹಸ್ತಲೇಖಗಳಲ್ಲಿ ಅಶೋಕನ ಸಂಬಂಧವಾದ ಮೂರು ಗ್ರಂಥಗಳಿದ್ದುವು. ಅವರು ಬಂಗಾಲದ ರಾಯಲ್ ಏಸಿಯಾಟಿಕ್ ಸೋಸಾಯಿಟಿಗೆ ಒಂದು; ಪಾರೀಸಿನ ರಾ. ಏ. ಸೊ.ಗೆ ಒಂದು; ಗ್ರೇಟ್ ಬ್ರಿಟನ್ನಿನ ರಾ. ಏ. ಸೊ.ಗೆ ಒಂದು; ಈ ಪ್ರಕಾರ ಆ ಮೂರುಗ್ರಂಥಗಳನ್ನೂ ಕೊಟ್ಟರು. ಅವುಗಳಲ್ಲಿ ಪಾರೀಸಿನ ರಾ. ಏ. ಸೋಸಾಯಿಟಿಯ ಪಾಲಿಗೆ ಅಶೋಕ ಅವದಾನವೆಂಬ ಗ್ರಂಥವು ಬಂದಿತು; ಅದರಲ್ಲಿ ಈ ದಂತಕಥೆಯುಂಟು. ಡಾ. ರಾಜೇಂದ್ರಲಾಲ ಮಿತ್ರರವರ Nepalese Buddhist Literature ಎಂಬ ಗ್ರಂಥದ ಎಂಟನೆಯ ಪುಟವನ್ನು ನೋಡಿರಿ.

Digitized by ROJA MUTHIAH RESEARCH LIBRARY

## ೪ನೆಯ ಪ್ರಕರಣ.

---

## ಅಶೋಕನ ಪೂರ್ವ ವಯಸ್ಸು.

"ಕಬ್ಬಿನ ಕೋಲು ಡೊಂಕಿದೊಡೇನು ತದ್ರಸದಿಂಪು ಡೊಂಕಹುದೇ"
(ಆನಂದರಾಮಾಯಣ.)

ಅಶೋಕನು ಕುರೂಪಿಯಾದುದರಿಂದ ಬಿಂದುಸಾರನು ಅವನನ್ನು ಹೆಚ್ಚಾಗಿ ಪ್ರೀತಿಸುತ್ತಿದ್ದಿಲ್ಲ. ಇದಲ್ಲದೆ ಅವನು ಬಹಳ ಕುತ್ಸಿತಸ್ವಭಾವದವನಾಗಿದ್ದನು. ಒಬ್ಬರನ್ನಲ್ಲ ಒಬ್ಬರನ್ನು ಪೀಡಿಸದೆ, ಅಳುವಂತೆ ಮಾಡದೆ ಅವನು ಒಂದೇ ಒಂದು ದಿನವನ್ನಾದರೂ ಕಳೆಯಲಿಲ್ಲ. ಹೀಗಾದುದರಿಂದ ಎಲ್ಲರೂ ಅವನನ್ನು ತಿರಸ್ಕರಿಸುತ್ತಿದ್ದರು; ಆದರೂ ಅವನು ಯಾವಾಗ ಏನು ಮಾಡುವನೆಂಬ ನೇಮವಿಲ್ಲದುದರಿಂದ, ಎಲ್ಲರೂ ಅವನಿಗೆ ಅಂಜಿ ನಡೆಯುತ್ತಿದ್ದರು. ಅವನ ನಿಷ್ಠುರ ಸ್ವಭಾವದ ದೆಸೆಯಿಂದ ಅವನಿಗೆ 'ಚಂಡ'ನೆಂಬ ಅಭಿಧಾನವು ಪ್ರಾಪ್ತವಾಗಿತ್ತು. ಶರೀರದಿಂದಲೂ, ಸ್ವಭಾವದಿಂದಲೂ ಈ ರೀತಿಯಾಗಿ ಅವನು ಕುರೂಪಿಯಾಗಿದ್ದರೂ ಮುಂದೆ ಅವನೇ 'ದೇವಾನಾಂಪ್ರಿಯ'*ನೆಂಬ ಪದವಿಗೆ ಪಾತ್ರನಾದನೆಂಬೀ ಸಂಗತಿಯು ಅತ್ಯಾಶ್ಚರ್ಯಕರವಾಗಿದೆ. ಮುಂದೆ ಇದರ ವಿವರವು ತಿಳಿದುಬರುವುದು.

ಬಿಂದುಸಾರನು ಅಶೋಕನನ್ನು ವಿಶೇಷವಾಗಿ ಪ್ರೀತಿಸುತ್ತಿದ್ದಿಲ್ಲವೆಂಬುದನ್ನು ಮೇಲೆ ಹೇಳಿರುವೆವು. ಹುಡುಗತನವು ಹೋಗಿ ತಿಳಿವಳಿಕೆಯು ಬಂದರೂ ಅಶೋಕನ ಪೂರ್ವದ ಆಚರಣೆಯಲ್ಲಿ

---

* 'ದೇವನಾಂಪ್ರಿಯ'ವೆಂಬುದು ಒಂದು ಬಯ್ಗಳಾಗಿಯೂ ಇದೆ. ಇದಕ್ಕೆ "ಪಶುವತ್ ಮೂಢ" ಎಂಬ ಅರ್ಥವು. "ತೇ ಏಷ್ಯಕಾತ್ ಪರ್ಯಜ್ಞಾ ದೇವಾನಾಂ ಪ್ರಿಯಾ:"—ಕಾವ್ಯಪ್ರಕಾಶ-ಸಂಪಾದಕ.



ತಿಲಮಾತ್ರವಾದರೂ ಅಂತರ ಬೀಳದುದನ್ನು ನೋಡಿ, ರಾಜನು ಕುಪಿತನಾದನು; ಮತ್ತು ಯಾವುದಾದರೊಂದು ನಿಮಿತ್ತದಿಂದ ಈ ದುಷ್ಟನನ್ನು ಮನೆ ಬಿಡಿಸಬೇಕೆಂಬ ವಿಚಾರದಲ್ಲಿದ್ದನು. ಇಷ್ಟರಲ್ಲಿ (ಕ್ರಿ. ಶ. ಪೂ. ೨೮೦ನೆಯ ವರ್ಷ) ತಕ್ಷಶಿಲಾ (ಪಂಜಾಬ) ಪ್ರಾಂತದಲ್ಲಿ ದಂಗೆಯುಂಟಾದ ವಾರ್ತೆಯು ಬರಲು, ರಾಜನು ಅದನ್ನು ಮುರಿಯುವುದಕ್ಕೋಸ್ಕರ ಅಶೋಕನನ್ನು ಅಲ್ಲಿಗೆ ಕಳುಹಿದನು. ಅಶೋಕನು ಅಲ್ಲಿಗೆ ಮುಟ್ಟಿದ ಕೂಡಲೆ ಆ ಜನರು ಇವನಲ್ಲಿಗೆ ಬಂದು—ತಾವು ಅಲ್ಲಿಯ ಸುಭೇದಾರನ ಬಾಧೆ ಇಡುವ ಕೃತ್ಯಗಳಿಗೆ ಬೇಸರಗೊಂಡು ಆ ಕಾರ್ಯವನ್ನು ಮಾಡಿದೆವಲ್ಲದೆ, ರಾಜನ ವಿರುದ್ಧವಲ್ಲೆಂದು ಬಹುಪರಿಯಿಂದ ಹೇಳಿಕೊಂಡು, ಆತನ ಮನಸ್ಸಿಗೆ ನಂಬುಗೆಯನ್ನುಂಟು ಮಾಡಿ ಕಾಣಿಕೆಕಪ್ಪಗಳನ್ನು ಒಪ್ಪಿಸಲು, ಅಶೋಕನು ಸಂತೋಷಿಸಿ ಬಹು ವಿಭವದೊಡನೆ ಆ ಪಟ್ಟಣವನ್ನು ಪ್ರವೇಶಿಸಿದನು. ಆ ಬಳಿಕ ಸ್ವಲ್ಪ ದಿವಸಗಳಲ್ಲಿಯೇ ಅವನು ಖಾನಾಸರ (ಕಾಶ್ಮೀರ) ರಾಜ್ಯವನ್ನು ತೆಗೆದುಕೊಂಡನು. ತಕ್ಷಶಿಲೆಯ ಬಂಡಾಯವನ್ನು ಮುರಿದ ಬಳಿಕ ಸ್ವಲ್ಪ ದಿವಸಗಳೊಳಗಾಗಿ ಅವನಿಗೆ ಉಜ್ಜನಿಯ ಸುಭೇದಾರಿಯ ಮೇಲೆ ಹೋಗಲಪ್ಪಣೆಯಾಯಿತು. ಆ ಪ್ರಕಾರ ಅವನು ಅಲ್ಲಿಗೆ ಹೋಗುತ್ತಿರಲು, ದಾರಿಯಲ್ಲಿ ಚೈತ್ಯಗಿರಿಯಲ್ಲಿ (ವಿಸನಗರ) ಉಳುಕೊಂಡನು. ಅಲ್ಲಿ ಒಬ್ಬ ವರ್ತಕನ ಸುಂದರಳಾದ ಮಗಳನ್ನು ಕಂಡು ಮೋಹಿಸಿ ಅವಳನ್ನು ತನ್ನ ರಾಣಿಯನ್ನಾಗಿ ಮಾಡಿಕೊಂಡನು (ಕ್ರಿ. ಶ. ಪೂ. ೨೭೪ನೆಯ ವರ್ಷ). ಇವಳಿಗೆ ಮಹೀಂದ್ರನೆಂಬ ಮಗನೂ ಸಂಗಮಿತ್ರೆ ಎಂಬ ಮಗಳೂ ಹುಟ್ಟಿದರು. ಈ ಮಕ್ಕಳು ಸಿಂಹಲದ್ವೀಪಕ್ಕೆ ಹೋಗಿ ಅಲ್ಲಿ ಬೌದ್ಧಧರ್ಮದ ಪ್ರಸಾರಮಾಡಿ, ಅಜರಾಮರವಾದ ಕೀರ್ತಿ ಪಡೆದ ಸಂಗತಿಯನ್ನು ಮುಂದೆ ವಿವರಿಸುವೆವು.

ಇತ್ತ ಅಶೋಕನು ಉಜ್ಜನಿಗೆ ಹೋದ ಬಳಿಕ, ತಕ್ಷಶಿಲೆಯ ಜನರು ಮರಳಿ ಬಂಡುಮಾಡಿದರು. ಅದನ್ನು ಮುರಿಯುವುದಕ್ಕೋಸ್ಕರ ರಾಜನು ತನ್ನ ಹಿರೆಯ ಮಗನಾದ ಸುಶೀಮನನ್ನು

Digitized by ROJA MUTHIAH RESEARCH LIBRARY

ಅಲ್ಲಿಗೆ ಕಳುಹಿದನು. ಸುಶೀಮನು ತಕ್ಷಶಿಲಾ ಪ್ರಾಂತಕ್ಕೆ ಹೋಗಿರಲು, ಇತ್ತ ಬಿಂದುಸಾರನು ಮರಣೋನ್ಮುಖನಾಗಿ ತನ್ನ ಹಿಂದೆ ಪಟ್ಟವನ್ನು ಯಾರಿಗೆ ಕೊಡಬೇಕೆಂಬ ಪ್ರಶ್ನೆಯು ಆತನ ಮನಸ್ಸಿನಲ್ಲಿ ಉತ್ಪನ್ನವಾಯಿತು. ಅಶೋಕನು ಕುರೂಪಿಯೂ, ಸ್ವೇಚ್ಛಾಚಾರಿಯೂ ಆಗಿದ್ದುದರಿಂದ ಬಿಂದುಸಾರನು ಅವನನ್ನು ಪ್ರೀತಿಸುತ್ತಿದ್ದಿಲ್ಲ; ಇದಲ್ಲದೆ ಸುಶೀಮನು ಸಹ ಕೆಲವು ಕಾರಣಗಳಿಂದ ರಾಜನಿಗೆ ಅಪ್ರಿಯನಾಗಿದ್ದನು. ಆದುದರಿಂದ ರಾಜನು ಈ ವಿಷಯದಲ್ಲಿ ಪ್ರಧಾನನ ಮತವನ್ನು ಕೇಳಿದನು. ಸುಶೀಮನು ಹಿಂದೆ ಒಂದು ಸಲ ಮಂತ್ರಿಗೆ ಅಪಮಾನ ಮಾಡಿದ್ದನು, ಅದರ ಕೋಪವನ್ನು ತೀರಿಸಿಕೊಳ್ಳುವುದಕ್ಕೆ ಇದೇ ತಕ್ಕ ಸಮಯವೆಂದರಿತು ಮಂತ್ರಿಯು ಅಶೋಕನಿಗೆ ಪಟ್ಟಗಟ್ಟ ಬೇಕೆಂದು ರಾಜನೊಡನೆ ವಿಜ್ಞಾಪಿಸಿದನು. ಆಗ ರಾಜನು ಅಮಾತ್ಯನ ಮಾತಿಗೆ ಮಾನ ಕೊಟ್ಟು, ಸುಶೀಮನು ತಕ್ಷಶಿಲೆಯ ಬಂಡಾಯವನ್ನು ಮುರಿದು ಬರುವ ವರೆಗೆ ಅಶೋಕನು ರಾಜ್ಯಕಾರ್ಯಭಾರವನ್ನು ನೋಡ ಬೇಕೆಂದೂ, ಸುಶೀಮನು ಬಂದ ಬಳಿಕ ರಾಜ್ಯವನ್ನು ಅವನಿಗೆ ಒಪ್ಪಿಸಬೇಕೆಂದೂ ನಿಶ್ಚಯಿಸಿದನು. ಈ ಪ್ರಕಾರ ವ್ಯವಸ್ಥೆಯನ್ನು ಮಾಡಿ ಬಿಂದುಸಾರನು ಮರಣಹೊಂದಿದನು. (ಕ್ರಿ. ಶ. ಪೂ. ೨೬೩). ಬಿಂದುಸಾರನ ಮರಣಾನಂತರದಲ್ಲಿ ಈ ವ್ಯವಸ್ಥೆಯು ಬಹಳ ದಿನ ನಡೆಯಲಿಲ್ಲ. ಅಶೋಕನೇ ರಾಜ್ಯವನ್ನಪಹರಿಸಿದನು.[೧೪] ಅಶೋಕನಿಗೆ ರಾಜ್ಯಪ್ರಾಪ್ತಿಯಾದ ೪ನೆಯ ವರ್ಷದಲ್ಲಿ ಆತನಿಗೆ ರಾಜ್ಯಾ

[೧೪] Cunningham's Bhilasa Topes—ಎಂಬೀ ಗ್ರಂಥದಲ್ಲಿ ಇದೇ ವಿಷಯವನ್ನು ಈ ಕೆಳಗಿನಂತೆ ಸ್ವಲ್ಪ ಹೆಚ್ಚುಕಡಮೆಯಾಗಿ ಹೇಳಿದೆ. "ತನ್ನ ಅಂತಕಾಲವು ಸಮೀಪಿಸಿತೆಂದು ಬಿಂದುಸಾರನಿಗೆ ತಿಳಿದು ಬಂದು, ಸುಶೀಮನನ್ನು ತಿರಿಗಿ ಕರೆಯಿಸುವಂತೆ ಆತನು ತನ್ನ ಮಂತ್ರಿಗೆ ಹೇಳಿದನು. ಆದರೆ ಪ್ರಧಾನನು ಮೋಸಮಾಡಿ ಆತನನ್ನು ಕರೆಯಿಸದೆ ಅಶೋಕನನ್ನು ಕರೆಯಿಸಿದನು. ಈ ರೀತಿಯಾಗಿ ಅಶೋಕನು ಬೇಗನೆ ಬಂದು ಮುಟ್ಟಿದನು. ಅಶೋಕನನ್ನು ನೋಡಿ ರಾಜನು ಕೋಪದಿಂದ ಅಧೀರನಾಗಿ, ಅದರ ಬೆಸೆಯಿಂದ ಆತನ ಶರೀರದೊಳಗಣ ಒಂದು ಧಮನಿಯು ತಟ್ಟನೆ ಒಡೆದು ತುಂಬಾ ರಕ್ತಸ್ರಾವವಾಯಿತು. ಇದರಿಂದ ಗ್ಲಾನಿಯುಂಟಾಗಿ ಬಿಂದುಸಾರನು ಕೂಡಲೇ ಮರಣ ಹೊಂದಿದನು."

Digitized by ROJA MUTHIAH RESEARCH LIBRARY



ಭಿಷೇಕವಾಯಿತು. ಈ ಅಭಿಷೇಕಕಾಲದ ವಿಷಯದಲ್ಲಿ ಪಂಡಿತರೊಳಗೆ ಮತಭೇದವುಂಟು. ಮಿ. ಹ್ರೀಸ್ ಡೇವಿಡ್ಸ್ ಸಾಹೇಬರ ಅಭಿಪ್ರಾಯದ ಪ್ರಕಾರ ಈ ಕಾಲವು ಕ್ರಿ. ಶ. ಪೂ. ೨೬೭ನೆಯ ವರ್ಷವೆಂತಲೂ, ಪಾಲಿ ಗ್ರಂಥಗಳಲ್ಲಿ ೨೭೨ನೆಯ ವರ್ಷವೆಂತಲೂ, ಪ್ರೊ. ಮೇಕ್ಸ್ ಮುಲರ್‌ರವರ ಅಭಿಪ್ರಾಯದಂತೆ ೨೬೬ನೆಯ ಅಥವಾ ೨೬೩ನೆಯ ವರ್ಷವೆಂತಲೂ, ಬಾಬು ಮನಮೋಹನ ಚಕ್ರವರ್ತಿಯವರ ಅಭಿಪ್ರಾಯದಂತೆ ೨೭೧ನೆಯ ವರ್ಷವೆಂತಲೂ, ಮಿ. ಸೇನಾರ್ಟ್ ಸಾಹೇಬರ ಅಭಿಪ್ರಾಯದಂತೆ ೨೬೯ನೆಯ ವರ್ಷವೆಂತಲೂ ತಿಳಿದುಬರುತ್ತಿದೆ.

ಬಿಂದುಸಾರನ ಮರಣದ ವಾರ್ತೆಯನ್ನು ಕೇಳಿದ ಕೂಡಲೇ ಸುಶೀಮನು ಪಾಟಲಿಪುತ್ರಕ್ಕೆ ಬರುವುದಕ್ಕೆ ಹೊರಟನು. ಆದರೆ ದಾರಿಯಲ್ಲಿಯೇ ಅವನಿಗೆ ಅಶೋಕನು ರಾಜವನ್ನಪಹರಿಸಿದನೆಂಬ ವಾರ್ತೆಯು ದೂತರ ಮುಖಾಂತರವಾಗಿ ತಿಳಿದುದರಿಂದ, ನಿರಾಶೆಯೂ ಸಂತಾಪವೂ ಉಂಟಾಗಿ, ಅವುಗಳ ಯೋಗದಿಂದ ಅವನ ತಲೆ ತಿರುಗಿದುದರಿಂದ, ಸ್ವಪರಬಲವನ್ನು ಲಕ್ಷಿಸದೆ, ಒಡನೆಯೇ ಪಾಟಲೀಪುತ್ರವನ್ನು ತೆಗೆದುಕೊಳ್ಳಬೇಕೆಂದು ನಿಶ್ಚಯಿಸಿ, ಸ್ವಲ್ಪ ಸೈನ್ಯವನ್ನು ಕೂಡಿಸಿಕೊಂಡು, ಆ ರಾಜಧಾನಿಯ ಮೇಲೆ ನಡೆದು ಹೋದನು. ಅಶೋಕನು ಸ್ವತಃ ಮಹಾಪರಾಕ್ರಮಿಯಾದುದರಿಂದಲೂ, ಅವನ ತಂದೆಯ ಸೈನ್ಯವು ಬಹಳವಾಗಿದ್ದುದರಿಂದಲೂ, ಆತನಿಗೆ ರಾಧಾಗುಪ್ತನಂತಹ ಚತುರ ಪ್ರಧಾನಿಯ ಪೂರ್ಣ ಸಹಾಯವಿದ್ದುದರಿಂದಲೂ, ಸುಶೀಮನನ್ನು ಜಯಿಸಲು ಅವನಿಗೆ ಯಾವ ಶ್ರಮವೂ ಬೇಕಾಗಲಿಲ್ಲ. ಸುಶೀಮನು ಅಥವಾ ಇತರ ಯಾವ ತನ್ನ ಬಾಧ್ಯಸ್ಥರಾದರೂ ಪುನಃ ತಲೆಯೆತ್ತಬಾರದೆಂದು ಅಶೋಕನು ತನ್ನ ಒಬ್ಬ ಸರದಾರನಿಗೆ 'ನೃಪೋದ್ಯಾನದಲ್ಲಿಯ ಸರ್ವ ವೃಕ್ಷಗಳನ್ನು ಸಮೂಲವಾಗಿ ಕಿತ್ತುಹಾಕಿಬಿಡು' ಎಂಬ ಸಂಕೇತದ ಆಜ್ಞೆಯನ್ನು ಮಾಡಿದನು. ಆದರೆ ಈ ಘೋರ ಕೃತ್ಯವನ್ನು ಮಾಡುವುದಕ್ಕೆ ಅವನು ಒಪ್ಪಿಕೊಳ್ಳದುದರಿಂದ ತಾನೇ ರಾಜವಂ

ಶದ ಸರ್ವ ಪುರುಷರನ್ನೂ ಬಾಲಕರನ್ನೂ ಸಂಹರಿಸಿ, ಇನ್ನು ನಿರ್ಭಯದಿಂದ ರಾಜ್ಯವಾಳುವುದಕ್ಕೆ ಏನೂ ಬಾಧಕವಿಲ್ಲವೆಂದು ಭಾವಿಸಿ, ಅವನು ವಿಲಾಸಗಾತ್ರಿಯರಾದ ಸ್ತ್ರೀಯರೊಂದಿಗೆ ಕ್ರೀಡಾರ್ಥವಾಗಿ ಕ್ರೀಡೋದ್ಯಾನಕ್ಕೆ ಹೋದನೆಂಬೀ ಸಂಗತಿಯು ಕೆಲವು ಗ್ರಂಥಗಳಲ್ಲಿ ಬರೆಯಲ್ಪಟ್ಟದೆ.[೧೫]

ಅಶೋಕನ ಕ್ರೂರತೆಯ ವಿಷಯದಲ್ಲಿ ಇನ್ನು ಅನೇಕ ಕಥೆಗಳನ್ನು ಹೇಳುವರು. ಕ್ಷಮೆ ಎಂಬೀಗುಣವು ಪೂರ್ವ ವಯಸ್ಸಿನಲ್ಲಿ ಅವನಿಗೆ ಕೇವಲ ಅಪರಿಚಿತವಾಗಿತ್ತು ಎಂದು ಕೆಲವರು ಹೇಳಿರುವರು. ಯಾವನೊಬ್ಬನು ಎಂತಹ ಕೀಳು ಅಪರಾಧ ಮಾಡಿದಾಗ್ಗೂ ಅವನಿಗೆ ಮರಣದ ಶಿಕ್ಷೆಯು ದೊರೆಯುತ್ತಿತ್ತು. ಹೀಗಾದುದರಿಂದ ಅಪರಾಧಮಾಡಿ ರಾಜನ ಕೈಯಲ್ಲಿ ಸಿಕ್ಕಿ ಬೀಳುವುದೂ ಪ್ರತ್ಯಕ್ಷ ಮೃತ್ಯುವಿನ ತುತ್ತಾಗುವುದೂ ಒಂದೇ ಎಂದು ಪ್ರತಿಯೊಬ್ಬನು ತಿಳಿದುಕೊಂಡಿದ್ದನು. ಅಶೋಕನ ಪ್ರೀತಿಯ ರಾಣಿಯರು ಸಹ ಅವನ ಸಿಟ್ಟಿನ ಕಾಲದಲ್ಲಿ ಜೀವಂತರಾಗಿ ಎಂದೂ ಪಾರಾಗಲಿಲ್ಲ. ಒಂದಾನೊಂದು ದಿನ ಅಂತಃಪುರದಲ್ಲಿ ಸ್ತ್ರೀಯರು ತಮ್ಮ ತಮ್ಮೊಳಗೆ ಸುಖದುಃಖಗಳ ಅನೇಕ ಸಂಗತಿಗಳನ್ನು ಮಾತಾಡುವ ಭರದಲ್ಲಿ, ಸಹಜವಾಗಿ ರಾಜನ ಕುರೂಪತೆಯ ವಿಷಯವಾಗಿ ಮಾತು ಹೊರಟಿತು. ಈ ಸಂಗತಿಯು ಅವನ ಕಿವಿಗೆ ಬಿದ್ದ ಕೂಡಲೇ ಅವರನ್ನು ಬಲವತ್ತಾಗಿ ಎಳೆದುತರಿಸಿ, ಅವರನ್ನು ಅಗ್ನಿಕುಂಡದಲ್ಲಿ ಸಜೀವವಾಗಿ ಸುಡಲು ಚಂಡಗರಿಕನೆಂಬ ದುಷ್ಟ ಸೇವಕನಿಗೆ ಅಪ್ಪಣೆ ಮಾಡಿದನು. ಅವನು ಒಡೆಯನ ಅಪ್ಪಣೆಯಂತೆ ವರ್ತಿಸಿದನೆಂಬುದನ್ನು ಪ್ರತ್ಯೇಕವಾಗಿ ಹೇಳುವ ಅವಶ್ಯವಿಲ್ಲ.[೧೬]

[೧೫] Nepalese Buddhist Literature p. 9. ಸಿಂಹಲದ್ವೀಪದ ಲೇಖದಲ್ಲಿ ಅಶೋಕನು ತನ್ನ ಸರ್ವ ಬಂಧುಗಳನ್ನು ಕೊಂದು ಪಟ್ಟವೇರಿದನೆಂದೂ, ತಿಷ್ಯನೆಂಬೊಬ್ಬ ತಮ್ಮನು ಮಾತ್ರ ಯತಿಯಾದುದರಿಂದ, ಅವನನ್ನು ಕೊಲ್ಲಲಿಲ್ಲವೆಂದೂ ಬರೆದಿದೆ. ಮಿ. ತಾರಾನಾಥರವರ ಅಭಿಪ್ರಾಯವು, ಇವನು ೬ ಮಂದಿ ತಮ್ಮಂದಿರನ್ನು ಮಾತ್ರ ಕೊಂದನೆಂದು ಆಗಿದೆ. ಆದರೆ ಇದೊಂದು ನಿಜವೆಂಬಂತೆ ತೋರುವುದಿಲ್ಲ. ಏಕೆಂದರೆ ಸ್ವತಃ ಅಶೋಕನ ಲೇಖದಲ್ಲಿ (ಧೌಲಿ ಮತ್ತು ಜೈಗಡದಲ್ಲಿಯ ಶಿಲಾಲೇಖ) ತನ್ನ ತಮ್ಮಂದಿರೂ, ತಂಗಿಯರೂ ಜೀವಂತರಾಗಿದ್ದರೆಂದು ಬರೆದಿದೆ. ಹ್ವೀಲರ್ ಸಾಹೇಬರು ತಮ್ಮ ಇತಿಹಾಸದಲ್ಲಿ, "ಸುಶೀಮನನ್ನು ಕೊಲ್ಲುವಾಗ ಅವನ ಹೆಂಡತಿಯು ಬಸುರಾಗಿದ್ದಳೆಂತಲೂ, ಅವಳು ಓಡಿಹೋಗಿ ಒಬ್ಬ ಚಾಂಡಾಲನನ್ನು ಆಶ್ರಯಿಸಿ ಅಲ್ಲಿಯೆ ಹಡೆದಳೆಂತಲೂ, ಮುಂದೆ ಅವಳ ಮಗನು ಬೌದ್ಧಭಿಕ್ಷುವಾಗಿ, ತನ್ನ ಕಕ್ಕನ ಅಪರಾಧಗಳನ್ನೆಲ್ಲಾ ಮರೆತು, ಅವನಿಗೆ ಬೌದ್ಧಧರ್ಮದ ಧೀಕ್ಷೆಯನ್ನು ಕೊಟ್ಟನೆಂತಲೂ," ಬರೆದಿರುವರು. "ಮಹಾವಂಶ"ದಲ್ಲಿ ಸಹ ಇದೇ ಸಂಗತಿಯು ಉಲ್ಲೇಖವಿದೆ.



ಇಂತಹ ಕ್ರೂರಕೃತ್ಯಗಳು ಅವನ ರಾಜ್ಯದಲ್ಲಿ ನಿರಂತರ ನಡೆಯುತ್ತಿದ್ದುದರಿಂದ ಜನರು ಅವನಿಗೆ ಬಹಳವಾಗಿ ಹೆದರುತ್ತಿದ್ದರು. ಅವನ ಮಾಂಡಲೀಕರು ಸಹ ಅವನಿಗೆ ಅಂಜಿ ನಡೆಯುತ್ತಿದ್ದುದರಿಂದ, ಅವನಿಗೆ ತನ್ನ ಅಧಿಕಾರದ ವಿಷಯದಲ್ಲಿ ಅತ್ಯಧಿಕವಾದ ಗರ್ವವುಂಟಾಯಿತು. ಅವನು ತಾನು ದೇವರೆಂದು ತಿಳಿದುಕೊಂಡನು. ತನ್ನ ಐಶ್ವರ್ಯವೂ, ಅಧಿಕಾರವೂ, ಸಾಮರ್ಥ್ಯವೂ, ಇಂದ್ರನ ಐಶ್ವರ್ಯ, ಅಧಿಕಾರ, ಸಾಮರ್ಥ್ಯಗಳಿಗಿಂತ ಕಡಮೆಯಲ್ಲವೆಂತಲೂ ತನ್ನ ರಾಜಧಾನಿಯಾದ ಪಾಟಲಿಪುತ್ರ ನಗರವು ಪ್ರತ್ಯಕ್ಷ ಇಂದ್ರಪುರವೆಂತಲೂ ತಿಳಿದನು. ಆದರೆ ದೇವರ ರಾಜ್ಯದಲ್ಲಿ ದುಷ್ಕೃತ್ಯಗಳನ್ನು ಮಾಡುವ ಪಾಪಿಗಳಿಗೆ ನರಕವೆಂಬ ದಂಡಸ್ಥಾನವು ಸ್ವತಂತ್ರವಾಗಿ ಇದ್ದಂತೆ, ತನ್ನ ರಾಜ್ಯದಲ್ಲಿ ಇಲ್ಲವೆಂಬುದಿಷ್ಟೇ ದೇವತೆಗಳಿಗೂ ತನಗೂ ಇರುವ ಭೇದವೆಂದು ಆತನು ತಿಳಿದು, ಅವನು ಆ ಹೆಚ್ಚುಕಡಮೆಯನ್ನು ಸಹ ತೆಗೆದು ಹಾಕ ಬೇಕೆಂದಾಲೋಚಿಸಿ, ಒಂದು ಮಹಾ ಭಯಂಕರವಾದ ನರಕಸ್ಥಾನವನ್ನು ಸ್ಥಾಪಿಸುವಂತೆ ಅಪ್ಪಣೆ ಮಾಡಿದನು.[೧೭] ಒಂದು ವಿಸ್ತೀರ್ಣವಾದ ಬಯಲಿನ ಸುತ್ತುಮುತ್ತು ಭದ್ರವಾದ ಗೋಡೆಗಳನ್ನು ಕಟ್ಟಿಸಿ, ಅದರೊಳಗೆ ಘೋರಯಾತನೆಯ ಉಪಕರಣಗಳನ್ನು ಎಂದರೆ—

[೧೬] ಅಶೋಕ ಅವದಾನದಲ್ಲಿ ಇದೇ ಸಂಗತಿಯನ್ನು ಸ್ವಲ್ಪ ಬೇರೆ ರೀತಿಯಿಂದ ಬರೆದಿರುತ್ತಾರೆ. ರಾಜನ ಕುರೂಪತೆಯ ವಿಷಯವಾಗಿ ಮಾತಾಡಿದ ಬಗ್ಗೆ ಅಲ್ಲ; ರಾಜೋದ್ಯಾನದಲ್ಲಿ ಅಶೋಕವೃಕ್ಷದ ಟೊಂಗೆಗಳನ್ನು ಕಡಿದುದಕ್ಕಾಗಿ ಅವರಿಗೆ ದೇಹಾಂತಪ್ರಾಯಶ್ಚಿತ್ತವು ದೊರೆಯಿತೆಂದು ಆ ಗ್ರಂಥದಲ್ಲಿ ಬರೆದಿದೆ.

[೧೭] ಅಶೋಕನು ಉಜ್ಜನಿಯ ಸುಭೇದಾರನಿದ್ದಾಗ ಅಲ್ಲಿಯೂ ಅವನು ಇದೇ ಪ್ರಕಾರದ ಒಂದು ನರಕವನ್ನು ಸ್ಥಾಪಿಸಿದ್ದನೆಂದು Cunningham's "Bhilasa Topes" ಎಂಬ ಗ್ರಂಥದಲ್ಲಿ ಬರೆದಿದೆ. ಪುಟ ೯೬.



Digitized by ROJA MUTHIAH RESEARCH LIBRARY

ಶಸ್ತ್ರಗಳನ್ನೂ, ಚಕ್ರಗಳನ್ನೂ, ತಪ್ತತೈಲದ ಕೊಪ್ಪರಿಗೆಗಳನ್ನೂ, ಲೋಹಶೂಲ ಮುಂತಾದುವುಗಳನ್ನೂ ಆಯಾಯ ಸ್ಥಳಗಳಲ್ಲಿ ಇಡಿಸಿದ್ದನು. ಮೊತ್ತಮೊದಲು ಅಪರಾಧಿಗಳನ್ನು ಮಾತ್ರವೇ ಅಲ್ಲಿಗೆ ಕಳುಹಿಸಿ ಶಿಕ್ಷೆಕೊಡುತ್ತಿದ್ದರು; ಕೊಂಚಕಾಲದ ತರುವಾಯ ಯಾರು ಬಂದರೂ ಅವರನ್ನು ವಿಚಾರವಿಲ್ಲದೆ ಎತ್ತಿ ಆ ನರಕದೊಳಗೆ ಹಾಕಿ ಕೊಲ್ಲುವ ಕ್ರಮವು ನಡೆಯಿತು.[೧೮] ಈ ಪ್ರಕಾರ ಹೀಗೆ ಈ ಕ್ರಮವು ನಿರಂತರ ನಡೆದಿರಲು, ಒಂದು ದಿನ ಒಂದು ಚಮತ್ಕಾರಿಕವಾದ ಸಂಗತಿಯು ಸಂಭವಿಸಿತು. ಅದೇನೆಂದರೆ:—ಒಬ್ಬ ಭಿಕ್ಷುವು (ಬೌದ್ಧಯತಿಯು) ಭಿಕ್ಷೆ ಬೇಡುತ್ತ ಬೇಡುತ್ತ ಆ ಸ್ಥಳಕ್ಕೆ ಬಂದನು. ಮತ್ತು ಆ ರಮ್ಯಸ್ಥಾನವನ್ನೂ ಸ್ವಚ್ಛೋದಕವನ್ನೂ ನೋಡಿ ಒಳಕ್ಕೆ ಹೋದನು. ಕೂಡಲೇ ದ್ವಾರಪಾಲಕನು ಅವನ ಕೈಕಾಲುಗಳನ್ನು ಕಟ್ಟಿ, ಯಮಯಾತನೆಯ ಅನುಭವವನ್ನು ತೆಗೆದುಕೊಳ್ಳುವುದಕ್ಕೋಸ್ಕರ, ಅವನನ್ನು ಒಳಗೆ ಮೇಲಧಿಕಾರಿಗಳ ಬಳಿಗೆ ಕಳುಹಿದನು. ಆಗ ಭಿಕ್ಷುವು ಅಂತ್ಯಸಮಯದಲ್ಲಿ ದೇವರ ಸ್ಮರಣೆಮಾಡುವುದಕ್ಕಾಗಿ ಸ್ವಲ್ಪ ಸಮಯ ಕೊಡಬೇಕೆಂದು ಬಹು ಪರಿಯಿಂದ ಹೇಳಿಕೊಳ್ಳಲು, ನಾಲ್ಕು ಗಳಿಗೆ ಅವಧಿಯು ಅವನಿಗೆ ದೊರೆಯಿತು. ಮಧ್ಯಂತರದಲ್ಲಿ ಎರಡನೆಯವನೊಬ್ಬನು ಇದೇ ಪ್ರಕಾರ ಒಳಗೆ ಬಂದಿದ್ದು, ಅವನನ್ನು ಎಳೆದುಕೊಂಡು ತಂದಿದ್ದರು. ನರಕಾಧಿಪತಿಯು ಅವನ ತಲೆಯನ್ನು ಚಕ್ರದಲ್ಲಿ ಸಿಲುಕಿಸಿ ಒತ್ತಿದ ಕೂಡಲೇ ಅದರಿಂದ ಹಾರಿದ ರುಧಿರಪ್ರವಾಹವನ್ನೂ ಅಂತ್ಯಕಾಲದ

[೧೮] Beal's Si-yw-ki p. 46. ಎರಡನೆಯ ಗ್ರಂಥದಲ್ಲಿ (Legge's translation of Fa-Hien's Travels p. 91) ಹೀಗೆ ಬರೆದಿರುವುದು. ಈ ನರಕಸ್ಥಾನದ ಬಾಹ್ಯಭಾಗವು ಉದ್ಯಾನಗಳಿಂದಲೂ ಕಾರಂಜಿಗಳಿಂದಲೂ ನಿರ್ಝರೋದಕದ ಪುಷ್ಕರಣಿಗಳಿಂದಲೂ, ಲತಾಮಂಟಪಗಳಿಂದಲೂ ಅತಿ ಮನೋಹರವಾಗಿರುತ್ತಿದ್ದುದರಿಂದ ಅದನ್ನು ನೋಡಿದ ಪ್ರತಿಯೊಬ್ಬನಿಗೆ ಸಹಜವಾಗಿಯೇ ಅಲ್ಲಿ ಸ್ವಲ್ಪ ಹೊತ್ತಿನ ಮಟ್ಟಿಗಾದರೂ ವಿಶ್ರಾಂತಿಯನ್ನು ತೆಗೆದುಕೊಳ್ಳಬೇಕೆಂಬ ಬುದ್ಧಿಯು ಉತ್ಪನ್ನವಾಗುತ್ತಿತ್ತು. ಇದಲ್ಲದೆ ಅಲ್ಲಿಗೆ ಹೋಗುವುದಕ್ಕೆ ಯಾವ ಪ್ರತಿಬಂಧವೂ ಇಲ್ಲದುದರಿಂದ ಅನೇಕರು ಒಳಕ್ಕೆ ಹೋಗುತ್ತಿದ್ದರು. ಆದರೆ ಒಮ್ಮೆ ಒಳಗೆ ಹೋದ ಮನುಷ್ಯನು ಎಂದೂ ಹೊರಗೆ ಬರುತ್ತಿದ್ದಿಲ್ಲ. ಈ ಮೇರೆಗೆ ವಂಚಿಸಿ ಮನುಷ್ಯವಧೆ ಮಾಡುವುದರಲ್ಲಿ ಅಶೋಕನಿಗೆ ಒಂದು ರೀತಿಯಾದ ಆನಂದವಾಗುತ್ತಿತ್ತು.



ಭಯಂಕರ ವೇದನಾಯುಕ್ತವಾದ ಕೂಗನ್ನೂ ಕೇಳಿ, ಆ ಭಿಕ್ಷುವಿನ ಎದೆಯೊಡೆದು ನೀರಾಯಿತು. ಮನುಷ್ಯಜೀವಿತದ ಕ್ಷಣಭಂಗುರತ್ವವೂ, ಜಡದೇಹದ ನಶ್ವರತ್ವವೂ ಅವನ ಹೃತ್ಪಟಲದಲ್ಲಿ ಚೆನ್ನಾಗಿ ಬಿಂಬಿಸಿದುದರಿಂದ, ಅವನು ಒಡನೆಯೇ 'ಅರ್ಹತ್' ಎಂಬ ಶ್ರೇಷ್ಠ ಪದವಿಯನ್ನೈದಿದನು. ನಾಲ್ಕು ಗಳಿಗೆಗಳಾದ ಬಳಿಕ ದೂತರು ಭಿಕ್ಷುವನ್ನು ಎಳೆದೊಯ್ದು ತಪ್ತತೈಲದ ಕೊಪ್ಪರಿಗೆಯಲ್ಲಿ ನೂಕಿದರು. ಆದರೆ—ಪರಮಾಶ್ಚರ್ಯ!—ಅಗ್ನಿಯು ತನ್ನ ಧರ್ಮವನ್ನು ತ್ಯಜಿಸಿ ಶಾಂತವಾಯಿತು; ಎಣ್ಣೆಯು ತಣ್ಣಗಾಯಿತು; ಮತ್ತು ಆ ಭಿಕ್ಷುಕನ ಮೋರೆಯ ಮೇಲೆ ಆನಂದವು ಸುಳಿದಾಡಹತ್ತಿತು. ಈ ಸಂಗತಿಯನ್ನು ಸೇವಕರು ರಾಜನಿಗೆ ಅರುಹಲು, ಅದು ಅವನಿಗೆ ನಿಜವಾಗಿ ತೋರದುದರಿಂದ ಆತನು ತಾನೇ ಬಂದು ಆ ಚಮತ್ಕಾರವನ್ನು ಕಣ್ಣಾರೆ ಕಂಡು ವಿಸ್ಮಿತನಾದನು. ಒಡನೆಯೇ ಆ ಭಿಕ್ಷುವನ್ನು ಆ ಕಟಾಹದಿಂದ ಹೊರಗೆ ತೆಗೆಯಿಸಿ ಅವನ ಬದಲು ಆ ನರಕಾಧಿಪತಿಯನ್ನು ಆ ತಪ್ತತೈಲದಲ್ಲಿ ಕೆಡವಿದನು; ಮತ್ತು ಕೂಡಲೇ ಆ ನರಕಸ್ಥಾನವನ್ನು ನಾಶಮಾಡಿಸಿದನು. ಬಳಿಕ ಆ ಭಿಕ್ಷುವನ್ನು ಬಹು ಸನ್ಮಾನದೊಡನೆ ರಾಜಮಂದಿರಕ್ಕೆ ಕರೆದೊಯ್ದು ಅಶೋಕನು ಅವನಿಂದ ಧರ್ಮೋಪದೇಶವನ್ನು ತೆಗೆದುಕೊಂಡನು. ಆ ಧರ್ಮೋಪದೇಶವನ್ನು ಕೇಳಿ ರಾಜನು ತುಂಬಾ ಪಶ್ಚಾತ್ತಾಪಪಟ್ಟನು. ಬುದ್ಧನಲ್ಲಿ ಆತನಿಗೆ ಪೂರ್ಣ ವಿಶ್ವಾಸವು ಹುಟ್ಟಿದುದರಿಂದ, ಅಂದಿನಿಂದ ಅವನು ಬೌದ್ಧಧರ್ಮದ ಸಂರಕ್ಷಕನೂ, ಪ್ರಚಾರಕನೂ, ಪ್ರತಿಪಾಲಕನೂ ಆಗ ಬೇಕೆಂದು ಸಂಕಲ್ಪ ಮಾಡಿದನು.[೧೯] ಅವನು ಕುಕ್ಕುಟೋದ್ಯಾನದಲ್ಲಿ ಒಂದು ಚೈತ್ಯವನ್ನು ನಿರ್ಮಾಣ ಮಾಡಿಸಿದನು. ಮತ್ತು ೮೪,೦೦೦ ಸ್ತೂಪ

[೧೯] ಈ ಚಮತ್ಕಾರವಾದ ವೃತ್ತಾಂತವು ಅಶೋಕ ಅವದಾನದಲ್ಲಿಯೂ, ಫಾಹಯಾನ್ ಎಂಬುವನ ಪ್ರವಾಸವೃತ್ತದಲ್ಲಿಯೂ, ನಿಯೂಕೀ ಇತ್ಯಾದಿ ಗ್ರಂಥಗಳಲ್ಲಿಯೂ ಬಹಳ ಮಟ್ಟಿಗೆ ಒಂದೇ ತೆರನಾಗಿ ಹೇಳಿದೆ. ಇದರಿಂದ ಅಶೋಕನ ಕಾಲದಲ್ಲಿ ಅವನ ಸ್ವಭಾವ ಪರಿವರ್ತನ ಸಂಬಂಧವಾಗಿ ಎಲ್ಲಾ ಜನರ ಅಭಿಪ್ರಾಯವು ಇದೇ ಪ್ರಕಾರವಾಗಿತ್ತೆಂದು ತಿಳಿಯಲು ಅಡ್ಡಿ ಇಲ್ಲ.

Digitized by ROJA MUTHIAH RESEARCH LIBRARY

ಗಳನ್ನು ಕಟ್ಟಿಸಬೇಕೆಂದು ನಿಶ್ಚಯಿಸಿದನು.[೨೦] ಈ ಧರ್ಮಕೃತ್ಯಗಳ ಪೆಸೆಯಿಂದ ಜನರು ಅವನನ್ನು ಧರ್ಮಾಶೋಕನೆಂದು ಕರೆಯತೊಡಗಿದರು.

ಅಶೋಕನು ಬೌದ್ಧಧರ್ಮದ ಉಪದೇಶವನ್ನು ಸ್ವೀಕರಿಸುವ ಮೊದಲು ಅವನ ಧರ್ಮವು ಯಾವುದಾಗಿತ್ತೆಂಬುದು ಸ್ಪಷ್ಟವಾಗಿ ತಿಳಿಯುವುದಿಲ್ಲ. ಕೆಲವರು ಅವನು ಜೈನಧರ್ಮದವನಾಗಿದ್ದನೆನ್ನುವರು. ಆದರೆ ಡಾ॥ ರಾಜೇಂದ್ರಲಾಲಮಿತ್ರರು ಅವನು ಹಿಂದೂ ಧರ್ಮದವನಾಗಿದ್ದನೆನ್ನುವರು. ಇದು ಅಧಿಕ ಸಯುಕ್ತಿಕವಾಗಿ ತೋರುತ್ತಿದೆ.[೨೧] ಅವನು ಪೂರ್ವ ವಯದಲ್ಲಿ ಬೌದ್ಧರನ್ನು ಬಹಳವಾಗಿ ಪೀಡಿಸುತಿದ್ದನೆಂದೂ, ಅವನಾಜ್ಞೆಯಿಂದಲೇ ಬುದ್ಧಗಯೆಯೊಳಗಿನ ಬೌದ್ಧವೃಕ್ಷವನ್ನು ಕಡಿಸಿದರೆಂದೂ, (Beal's Si-yu-ki Vol. II p. 117) ಅವನ ಅಪ್ಪಣೆಯಿಂದಲೇ ಬುದ್ಧನ ಜನ್ಮಸ್ಥಾನವಾದ ಕಪಿಲವಸ್ತು ನಗರದ ಬಳಿಯಲ್ಲಿರುವ ರಾಮಪುರವೆಂಬ ಗ್ರಾಮದಲ್ಲಿ ಬುದ್ಧಸ್ಮರಣಾರ್ಥವಾಗಿ ಕಟ್ಟಿಸಿದ ೮ ಸ್ತೂಪಗಳಲ್ಲಿ ೭ ಸ್ತೂಪಗಳನ್ನು ಕೆಡವಿದರೆಂದೂ, ಬೌದ್ಧ ದಂತಕಥೆಯುಂಟು. ಒಂದು ಶಿಲಾಲೇಖದಲ್ಲಿ ಹೀಗೆ ಬರೆದಿರುವರು—"ದೇವರಿಗೆ ಪ್ರಿಯನಾದ ಪ್ರಿಯದರ್ಶಿರಾಜನ ಪಾಕಶಾಲೆಯಲ್ಲಿ ಸ್ವಾದಿಷ್ಟವಾದ ಪಕ್ವಾನ್ನಗಳನ್ನು ಸಿದ್ಧಮಾಡುವುದಕ್ಕೋಸ್ಕರ ಪ್ರತಿದಿನವೂ ಅನೇಕ ಪ್ರಾಣಿಗಳ ಸಂಹಾರವಾಗುತ್ತಿತ್ತು" (Epigraphica Indica Vol. II p. 448-9). ಇದರಿಂದ ಅವನು ಜೈನಧರ್ಮದವನಾ

೨೦ ಮನುಷ್ಯ ಶರೀರದೊಳಗಿನ ಎಲುಗಳ ಸಂಖ್ಯೆಯು ೮೪೦೦೦ ಆಗಿದೆಯೆಂದು ತಿಳಿದಿರುವರು. ಆದುದರಿಂದ ಬುದ್ಧನ ಶರೀರದ ಪ್ರತಿಯೊಂದು ಎಲುವಿಗೆ ಒಂದೊಂದರಂತೆ ೮೪,೦೦೦ ಸ್ತೂಪಗಳನ್ನು ಕಟ್ಟಿಸ ಬೇಕೆಂದು ಅಶೋಕನು ನಿಶ್ಚೈಸಿದ್ದನೆಂದು, ಡಾ॥ ರಾಜೇಂದ್ರಲಾಲಮಿತ್ರರು ಬರೆಯುತ್ತಾರೆ. ತಕ್ಷಶಿಲೆಯ ಜನರ ಹೇಳಿಕೆಯಂತೆ ಅಶೋಕನು ೩,೫೧,೦೦,೦೦,೦೦೦ ಸ್ತೂಪಗಳನ್ನು ಕಟ್ಟಿಸಿದನೆಂದು ಅಶೋಕ ಅವಧಾನವೆಂಬ ಗ್ರಂಥದಲ್ಲಿ ಬರೆದಿದೆ. ಆದರೆ ಇದು ಅತಿಶಯೋಕ್ತಿ ಎಂಬಂತೆ ತೋರುತ್ತಿದೆ.

೨೧ ಅವನು ಅಗ್ನಿ, ಇಂದ್ರ, ಸೂರ್ಯ, ವಾಯು ಮುಂತಾದುವುಗಳ ಆರಾಧಕನಾಗಿ, ಬ್ರಾಹ್ಮಣ್ಯಕ್ಕೆ ಗೌರವವನ್ನು ತೋರಿಸಿ, 60,000 ಬ್ರಾಹ್ಮಣರಿಗೆ ದಿನಂಪ್ರತಿ ಅನ್ನವಿಕ್ಕುತ್ತಿದ್ದನು.—(Bhilasa Topes).



ಗಿರಲಿಲ್ಲವೆಂಬುದು ವ್ಯಕ್ತವಾಗುತ್ತಿದೆ. ಏಕೆಂದರೆ, ಜೈನಧರ್ಮದಲ್ಲಿ ಹಿಂಸಾವರ್ಜ್ಯವಿದೆ ಎಂಬುದು ಸುಪ್ರಸಿದ್ಧವಾದ ವಿಷಯವಾಗಿದೆ.

ಪೂರ್ವವಯದಲ್ಲಿ ಅಶೋಕನ ಸ್ವಭಾವ ಮತ್ತು ವರ್ತನಗಳ ವಿಷಯದಲ್ಲಿ ಮೇಲಣ ಕಥೆಗಳಲ್ಲಿ ಅತಿಶಯೋಕ್ತಿಯು ಕಂಡುಬರುತ್ತಿದೆ. ಆದರೂ ಅವನು ಪರಾಕ್ರಮಿಯೂ, ಸ್ವೇಚ್ಛಾಚಾರಿಯೂ, ದೃಢನಿಶ್ಚಯಿಯೂ, ಶೀಘ್ರಕೋಪಿಯೂ, ನಿಷ್ಠುರನೂ ಆಗಿದ್ದನೆಂದೆನ್ನಲು ತೊಡಕಿಲ್ಲ. ಅವನು ಹಾಗಿದ್ದುದಕ್ಕಾಗಿ ವಿಶೇಷ ಆಶ್ಚರ್ಯಪಡಲು ಕಾರಣವಿಲ್ಲ. ಚಿಕ್ಕಂದಿನಿಂದಲೇ ಕುರೂಪನೆಂದು ಅವನ ತಂದೆಯು ಅವನ ಗೋಜಿಗೆ ಹೋಗುತ್ತಿದ್ದಿಲ್ಲ. ಬಾಲ್ಯದಲ್ಲಿ ದೊರೆಯಬೇಕಾದ ಆಜ್ಞಾಧಾರಕತ್ವದ, ಮತ್ತು ಸದಾಚರಣೆಯ ಶಿಕ್ಷಣವು ಅವನಿಗೆ ಏನೂ ದೊರೆತಿರಲಿಲ್ಲ. ತಾಯಿಯ ಹೊರತು ಮಿಕ್ಕವರಾರೂ ಅವನ ವರ್ತನದಕಡೆಗೆ ಲಕ್ಷ್ಯಕೊಡದ ಕಾರಣ ಅವನಿಗೆ ವಿಲಾಸದ ಮತ್ತು ಸ್ವೇಚ್ಛಾಚಾರದ ರುಚಿಯು ಹತ್ತಿತು. ತಾರುಣ್ಯದಲ್ಲಿ ತಂದೆಯ ಶಿಕ್ಷಣದೊಳಗಿರಬೇಕು. ಆದರೆ ತಂದೆಯೇ ಬೇಸರಗೊಂಡು ಅವನೊಬ್ಬನನ್ನೇ ತಕ್ಷಶಿಲೆಗೆ ದೊಡ್ಡ ಅಧಿಕಾರದ ಮೇಲೆ ಕಳುಹಿದನು. ಆ ಕಾಲದಲ್ಲಿ ದೊಡ್ಡ ಅಧಿಕಾರವು ಪ್ರಾಪ್ತವಾದುದರಿಂದ ಅವನ ದುರಾಚರಣೆಗಳಿಗೂ ಉನ್ನತ ಸ್ವಭಾವಕ್ಕೂ ಜೋಡಾಯಿತು. ತಕ್ಷಶಿಲೆಯ ಬಂಡಾಯವನ್ನು ಮುರಿಯುವ ಪ್ರಸಂಗದಲ್ಲಿ ನಡದ ಪ್ರಾಣನಾಶವನ್ನು ನೋಡಿ ಅವನ ಮನಸ್ಸು ಗಟ್ಟಿಯಾಗಿತ್ತು. ಆದುದರಿಂದ ಮುಂದೆ ರಾಜ್ಯಾಭಿಷೇಕವಾದ ಬಳಿಕ ಬಂಧುಬಾಂಧವರನ್ನು ಶಿಕ್ಷಿಸುವುದಕ್ಕೋಸ್ಕರ ಅವನು ಹೆಚ್ಚು ದುಷ್ಟಕೃತ್ಯಗಳನ್ನು ಮಾಡಿದುದಕ್ಕೂ, ಆ ಬಳಿಕ ಬೇಗನೆ ಕಲಿಂಗ[೨೨] ದೇಶದ ಮೇಲೆ ದಂಡೆತ್ತಿ ಹೋಗಿ

೨೨ ಈ ಕಲಿಂಗವಿಜಯದ ವಿಷಯದಲ್ಲಿ ಅಶೋಕನ ಶಿಲಾಲೇಖದಲ್ಲಿ ಒಂದು ಸ್ಥಲದಲ್ಲಿ ಹೀಗೆ ಬರೆದಿರುವರು:— ದೇವಪ್ರಿಯನಾದ ಪ್ರಿಯದರ್ಶಿ ರಾಜನು ಪಟ್ಟವೇರಿದ ೮ನೆಯ ವರ್ಷದಲ್ಲಿ ಕಲಿಂಗ ದೇಶವನ್ನು ಗೆದ್ದನು. ಆಗ್ಗೆ ಒಂದು ಲಕ್ಷ ಐವತ್ತು ಸಾವಿರ ಜನರನ್ನು ಸೆರೆ ಹಿಡಿದು ತಂದರು, ಒಂದು ಲಕ್ಷ ಜನರು ಯುದ್ಧದಲ್ಲಿ ಮಡಿದರು, ಮತ್ತು ಅನೇಕರು ನಾಶ ಹೊಂದಿದರು (Epigraphica Indica Vol. II p. 466).

Digitized by ROJA MUTHIAH RESEARCH LIBRARY

ಆ ದೇಶವನ್ನು ಜಯಿಸುವಾಗ ಅನನ್ವಿತಕ್ರೂರತೆಯನ್ನು ತೋರಿಸಿದುದಕ್ಕೂ ಆಶ್ಚರ್ಯಪಡಲು ಕಾರಣವಿಲ್ಲ. ಈ ಪ್ರಕಾರ ಯಾವನು ಮೊದಲು ದುರ್ವರ್ತನದಲ್ಲಿ ಒಂದೊಂದು ಹೆಜ್ಜೆಯನ್ನು ಮುಂದಿಡುತ್ತ ಹೋದನೋ ಅವನೇ ಒಮ್ಮಿಂದೊಮ್ಮೆ ಸತ್ಯಶೀಲನೂ, ಸದಾಚಾರಿಯೂ, ಧಾರ್ಮಿಕನೂ ಆದುದಲ್ಲದೆ, ಜನರು ಅವನನ್ನು ದೇವರಂತೆ ಭಾವಿಸ ಹತ್ತಿದರೆಂಬುದು ಜಗತ್ತಿನ ಇತಿಹಾಸದಲ್ಲಿ ವಿಲಕ್ಷಣವಾದ ಚಮತ್ಕಾರದ ಸಂಗತಿ ಎಂದೆನ್ನಬೇಕಾಗಿದೆ. ಚರಿತ್ರೆಯಲ್ಲಿ ನೋಡಿದರೆ ಪ್ರಸಿದ್ಧ ಕ್ರಿಸ್ತಭಕ್ತನಾದ ಅಗಸ್ಟಿನ್ ಎಂಬುವನೊಬ್ಬನೇ ಇವನಿಗೆ ಸಮಾನನು. ಸ್ವಧರ್ಮದ ಮಹತ್ವವನ್ನು ಹೆಚ್ಚಿಸುವುದಕ್ಕಾಗಿಯೇ ಬೌದ್ಧಲೇಖಕರು ಅಶೋಕನ ದುಷ್ಟಸ್ವಭಾವದ ವರ್ಣನೆಗಳನ್ನು ಬರೆದಿರುವರೆಂದು ಹಲವು ಗ್ರಂಥಕರ್ತರ ಅಭಿಪ್ರಾಯವಿದೆ.[೨೩] ಆದರೆ ಹಾಗೆ ಮಾಡಲು ನಿಜವಾದ ಕಾರಣವಿದ್ದಿಲ್ಲ; ಏಕೆಂದರೆ— ಅಶೋಕನಂತಹ ಧರ್ಮಪರಾಙ್ಮುಖನಾದ ರಾಜನನ್ನು ಸಹ ಬೌದ್ಧಧರ್ಮವು ಸುಶೀಲನನ್ನಾಗಿ ಮಾಡಿತು. ಇದಕ್ಕೂ ಹೆಚ್ಚಾಗಿ ಅದರ ಮಹತ್ವವನ್ನೇನೆಂದು ಹೇಳಬೇಕು? ಸಾರಾಂಶ—ಬೌದ್ಧಧರ್ಮದ ಮಹತ್ವವನ್ನು ಹೆಚ್ಚಿಸುವುದಕ್ಕೋಸ್ಕರ ಅಶೋಕನ ಪೂರ್ವಸ್ವಭಾವಕ್ಕೆ ಕೃಷ್ಣಸ್ವರೂಪವನ್ನು ಬೇಕೆಂದು ಕೊಡಲು ಎಷ್ಟು ಮಾತ್ರವೂ ಕಾರಣವಿಲ್ಲ.

ಅಶೋಕನ ವೃತ್ತಿಪರಿವರ್ತನದ ವಿಷಯದಲ್ಲಿ ಅನೇಕರು ಅನೇಕ ಕಾರಣಗಳನ್ನು ಹೇಳಿರುವರು. ಕೆಲವರು, ಯೌವನಾವಸ್ಥೆಯು ಹೋಗಿ ಪ್ರೌಢಾವಸ್ಥೆಯ ಛಾಯೆಯು ಬೀಳ ಹತ್ತಿದ ಹಾಗೆ, ಅವನ ಬುದ್ಧಿಯು ಪರಿಪಕ್ವವಾಗಿ, ಪೂರ್ವದ ಕೃತಿಗಳಿಗಾಗಿ ಅವನಿಗೆ ಪಶ್ಚಾತ್ತಾಪ ಉಂಟಾಯಿತೆಂದೂ; ಹಲವರು, ತಕ್ಷಶಿಲೆಯು

[೨೩] These stories are absolutely unfounded and were invented to heighten the merit of the Buddhist religion by blackening the character of Asoka before his conversion to that creed. (R. C. Dutt's History of civilization in Ancient India Vol. II p. 3).



ಪಂಜಾಬ ಪ್ರಾಂತದಲ್ಲಿದ್ದು ಅಲ್ಲಿಯ ಜನರು ಮೂಲತಃ ದುಷ್ಟರೂ, ನಿಷ್ಠುರರೂ ಆಗಿದ್ದುದರಿಂದ, ಅಶೋಕನು ಅಲ್ಲಿ ಇರುವ ವರೆಗೆ ಅವನ ಮನಸ್ಸಿನ ಮೇಲೆ ಆ ಕಡೆಯ ಸಂಸ್ಕಾರವಿತ್ತು; ಆದರೆ ಅವನು ಮರಳಿ ಮಗಧ ಪ್ರಾಂತಕ್ಕೆ ಬಂದ ಬಳಿಕ, ಅವನ ಸ್ವಭಾವದ ನೈಸರ್ಗಿಕವಾದ ಕೋಮಲತೆಯು ಪುನಃ ಪ್ರಾದುರ್ಭವಿಸಿತೆಂದೂ; ಕೆಲವರು, ಕಲಿಂಗ ದೇಶವನ್ನು ಜಯಿಸುವಾಗ ಆದ ಅಸಂಖ್ಯ ಮಾನವಜೀವನಾಶವನ್ನೂ ಇಷ್ಟು ಜನರಿಗೆ ಭೋಗಿಸಬೇಕಾಗಿ ಬಂದ ಭಯಂಕರಯಾತನೆಯನ್ನು ನೋಡಿ ಅಶೋಕನಿಗೆ ಉಪರತಿಯುಂಟಾಯಿತೆಂದೂ ಹೇಳುವರು. ಬೌದ್ಧದಂತಕಥೆಗಳಲ್ಲಿ ಇದಕ್ಕೆ ಆಚಾರ್ಯನಾದ ಉಪಗುಪ್ತನ ಧರ್ಮೋಪದೇಶವೇ ಕಾರಣವೆಂದು ಬರೆದಿದೆ.[೨೪] ಈ ಎಲ್ಲಾ ಕಾರಣಗಳು ಸ್ವಲ್ಪ ಸ್ವಲ್ಪವಾಗಿ ಅಶೋಕನ ವೃತ್ತಿಪರಿವರ್ತನಕ್ಕೆ ಕಾರಣೀಭೂತವಾದುವೆಂದು ನಮಗೆ ತೋರುತ್ತಿದೆ. ಮತ್ತು ಕಡೆಯ ಕಾರಣಗಳಲ್ಲಿ ಹೇಳಿದ ದಂತಕಥೆಯು ನಿಜವೆಂದು ಗ್ರಹಿಸಿದರೆ, ಆಚಾರ್ಯನಾದ ಉಪಗುಪ್ತನ ಉಪದೇಶವು ವೃತ್ತಿಪರಿವರ್ತನಕ್ಕೆ ಆಗ್ಗೆ ನಿಮಿತ್ತ ಮಾತ್ರವಾಗಿರಬಹುದೆಂದು ಹೇಳಬಹುದು.

ಆಚಾರ್ಯನಾದ ಉಪಗುಪ್ತನ ವಿಷಯವಾಗಿ ಐತಿಹಾಸಿಕ ಪ್ರಮಾಣಗಳು ಏನೂ ದೊರೆಯುವುದಿಲ್ಲ. ಆದರೂ ಅವನ ಸಂಬಂಧವಾಗಿ ಬೌದ್ಧಗ್ರಂಥಗಳಲ್ಲಿ ದೊರೆಯುವ ಒಂದೆರಡು ದಂತಕಥೆಗಳ ಮೇಲಿಂದ ಅವನು ಮಥುರಾ ಪಟ್ಟಣದವನೆಂದೂ, ಜಾತಿಯಲ್ಲಿ ವೈಶ್ಯನೆಂದೂ, ಗೊತ್ತಾಗುತ್ತಿದೆ. ಅವನು ತನ್ನ ೧೭ನೆಯ ವರ್ಷದಲ್ಲಿಯೇ ಭಿಕ್ಷುವಾಗಿ ೨೦ನೆಯ ವರ್ಷದಲ್ಲಿ 'ಅರ್ಹತ್' ಎಂಬ ಪದವಿಯನ್ನೈದಿದನು. ಇವನು ಬಹುಶಃ ಪರ್ವತಗುಹೆಗಳಲ್ಲಿ ವಾಸ ಮಾಡಿ ಧ್ಯಾನಮಗ್ನನಾಗಿರುತ್ತಿದ್ದನು. ಪ್ರಸಿದ್ಧ ಚೀನದೇಶದ ಪ್ರವಾಸಿಯಾದ ಹುಯನತ್ಸಾಂಗನು, ಆ ಕಾಲದಲ್ಲಿ ಉಪಗುಪ್ತನು ಕುಳಿತುಕೊಂಡಿರತಕ್ಕ ಸ್ಥಳಗಳೆಂದು ಪ್ರಸಿದ್ಧವಾಗಿದ್ದ

[೨೪] Beal's Si-yu-ki Vol. ii p. 88—90.

Digitized by ROJA MUTHIAH RESEARCH LIBRARY

ಸ್ಥಳಗಳನ್ನು ತಾನು ಪ್ರತ್ಯಕ್ಷವಾಗಿ ನೋಡಿರುವೆನೆಂದು ತನ್ನ ಪ್ರವಾಸವೃತ್ತದಲ್ಲಿ ಬರೆದಿರುವನು.[೨೫] ಮುಂದೆ ಅಶೋಕನಿಗೂ ಉಪಗುಪ್ತನಿಗೂ ಗಂಟುಬಿದ್ದ ಬಳಿಕ ಅಶೋಕನು ಉಪಗುಪ್ತನಿಗೆ ರಾಜಧಾನಿಯಲ್ಲಿ ಸುಂದರವಾದ ರಾಜಗೃಹದಲ್ಲಿರುವಂತೆ ಬಹಳವಾಗಿ ಬಿನ್ನಹಮಾಡಿಕೊಂಡನು. ಅವನು ಅದಕ್ಕೆ 'ನಮ್ಮ ಗುಹೆಯೇ ಚೆನ್ನಾಗಿದೆ' ಎಂದು ಉತ್ತರಕೊಟ್ಟನು. ಆಗ ರಾಜನು ತನ್ನ ರಾಜಧಾನಿಯಲ್ಲಿಯೇ ಅವನಿಗೋಸ್ಕರ ಒಂದು ಪ್ರಸ್ತರಮಯವಾದ ಗುಹೆಯನ್ನು ಕಟ್ಟಿಸಿಕೊಟ್ಟನು.[೨೬] ಆಚಾರ್ಯನಾದ ಉಪಗುಪ್ತನು ಜಿತೇಂದ್ರಿಯನೂ, ಪರೋಪಕಾರಿಯೂ ಆದ ಸಾಧುಪುರುಷನು. ಅವನ ಸಂಬಂಧವಾದ ಒಂದು ಅಪೂರ್ವ ಕಥೆಯು ಬೌದ್ಧ ಗ್ರಂಥಗಳಲ್ಲುಂಟು. ಅದನ್ನು ಇದರಡಿ ಕೊಡುವೆವು.

ಮಥುರಾ ಪಟ್ಟಣದಲ್ಲಿ ವಾಸವದತ್ತೆ ಎಂಬೊಬ್ಬ ಗಣಿಕೆಯಿದ್ದಳು. ಒಂದು ದಿನ ಅವಳ ದಾಸಿಯು ಉಪಗುಪ್ತನ ಅಂಗಡಿಗೆ ಬಂದು (ಉಪಗುಪ್ತನು ಮೊದಲು ವೈಶ್ಯನಾಗಿದ್ದನೆಂಬುದನ್ನು ಮೇಲೆಯೇ ವಿವರಿಸಿರುವೆವು) ಸುಗಂಧ ದ್ರವ್ಯಗಳನ್ನು ತೆಗೆದುಕೊಂಡು ಮರಳಿ ಮನೆಗೆ ಹೋದಳು. ದಾಸಿಯು ವಾಸವದತ್ತೆಗೆ ಉಪಗುಪ್ತನ ಸೌಂದರ್ಯಾದಿಗುಣಗಳನ್ನು ಹೇಳಲಾಗಿ ಅವಳು ಅವನನ್ನು ನೋಡಲು ಅತ್ಯಾತುರಳಾದಳು. ವಾಸವದತ್ತೆಯು ತನ್ನ ದಾಸಿಯೊಂದಿಗೆ ಪ್ರೇಮಪತ್ರಿಕೆಯನ್ನು ಕಳುಹಿ "ತಮ್ಮ ದರ್ಶನ, ಸಹವಾಸಗಳ ಲಾಭವಾಗಬೇಕೆಂದು ಈ ಬಡದಾಸಿಯು ಇಚ್ಛಿಸುವಳು" ಎಂದು ತಿಳಿಸಿದಳು. ಇದಕ್ಕೆ ಅವನು "ನಾನು ದರಿದ್ರನು. ನನ್ನನ್ನು ನೋಡುವುದರಿಂದ ನಿನಗಾಗುವ ಲಾಭವೇನು? ನನ್ನನ್ನು ನೋಡುವಂತಹ ದಿವಸವು ಮುಂದೆ ಬರಬಹುದು" ಎಂದು ಹೇಳಿ ಕಳುಹಿದನು. ಇದಕ್ಕೆ ಅವಳು ಪುನಃ—"ತಮ್ಮಿಂದ ಒಂದು ಕವಡೆ ಸಹ

---

[೨೫] Si-yu-ki Vol. ii p. 93.

[೨೬] Si-yu-ki Vol. ii p. 181-2. ಈ ಗುಹೆಗೆ ವೇಣುವನವೆನ್ನುತ್ತಾರೆಂಬಂತೆ ತೋರುತ್ತಿದೆ. ಈ ವೇಣುವನದ ಉಲ್ಲೇಖವು ಅಶೋಕ ಅವದಾನವೆಂಬ ಗ್ರಂಥದಲ್ಲಿ ಇದೆ.



ದೊರೆಯಬೇಕೆಂಬ ಆಶೆ ನನಗಿಲ್ಲ. ಆದರೆ ಕೇವಲ ದರ್ಶನವೂ ಸಂಗತಿಸುಖವೂ ಬೇಕು. ಎರಡನೆಯದೇನೂ ಬೇಡ" ಎಂದು ತಿಳಿಸಿದಳು. ಇದಕ್ಕೂ ಅವನು ಮೊದಲಿನಂತೆಯೇ ಉತ್ತರವನ್ನು ಕಳುಹಿದನು. ಮುಂದೆ ಕೆಲವು ದಿವಸಗಳ ಮೇಲೆ ಒಂದು ಅಕಲ್ಪಿತ ಸಂಗತಿಯು ಸಂಭವಿಸಿತು. ವಾಸವದತ್ತೆಯು ತನ್ನ ಒಬ್ಬ ತರುಣ ಯಜಮಾನನೊಂದಿಗೆ ತನ್ನ ಮಂದಿರದಲ್ಲಿ ನಿದ್ರಾವಶಳಾಗಿ ಇರಲು ಯಾವನೋ ಒಬ್ಬ ಅವನ ವೈರಿಯು ಅವನನ್ನು ಕೊಂದನು. ಮರುದಿನ ರಾಜದೂತರು ವಿಚಾರ ಮಾಡುವುದಕ್ಕೆ ಬಂದರು. ಅವರು ಶೋಧಾಂತ್ಯದಲ್ಲಿ, ವಾಸವದತ್ತೆಯೇ ದ್ರವ್ಯಲೋಭಕ್ಕಾಗಿ, ಯಜಮಾನನು ಮಲಗಿರಲು ಅವನನ್ನು ಕೊಲ್ಲಿಸಿದಳೆಂದು ನಿಶ್ಚಯಿಸಿದರು. ಕೂಡಲೇ ರಾಜದೂತರು ಅವಳನ್ನು ರಾಜನೆಡೆಗೆ ಎಳೆದೊಯ್ದರು. ಅಲ್ಲಿಯೂ ಅದರಂತೆಯೇ ನಿರ್ಣಯವಾಗಿ ಅವಳ ಕೈ, ಕಾಲು, ಮೂಗು, ಕಿವಿಗಳನ್ನು ಕತ್ತರಿಸಿ, ಅವಳನ್ನು ಸ್ಮಶಾನದಲ್ಲಿ ಬಿಟ್ಟುಬಿಡಬೇಕೆಂಬ ಶಿಕ್ಷೆಯು ವಿಧಿಸಲ್ಪಟ್ಟಿತು; ಮತ್ತು ಕೂಡಲೇ ಅದರಂತೆಯೆ ಮಾಡಿದರು. ಅವಳ ದಾಸಿಯೊಬ್ಬಳು ಮಾತ್ರ ಪೂರ್ವದ ಉಪಕಾರವನ್ನು ನೆನಸಿ ಅಂತಹ ಸ್ಥಿತಿಯಲ್ಲಿ ಕೂಡ ಅವಳ ಸೇವೆಯನ್ನು ಮಾಡಿಕೊಂಡಿದ್ದಳು. ಇತ್ತ, ಉಪಗುಪ್ತನಿಗೆ ಈ ವೃತ್ತಾಂತವು ತಿಳಿಯಿತು. ಅವನು ಒಬ್ಬ ಸೇವಕನೊಂದಿಗೆ ಅವಳಿದ್ದ ರುದ್ರಭೂಮಿಗೆ ಹೋದನು. ದಾಸಿಯು ಅವನನ್ನು ನೋಡಿದ ಕೂಡಲೇ ತನ್ನ ಒಡತಿಗೆ ಇಂತಹವರು ಬಂದಿರುವರೆಂದು ಹೇಳಿದಳು. ಇಂತಹ ಛಿನ್ನವಿಚ್ಛಿನ್ನವಾದ ದೇಹಸ್ಥಿತಿಯಲ್ಲಿ ತಾನು ಅವನ ದೃಷ್ಟಿಗೆ ಬೀಳಬೇಕಾದುದಕ್ಕಾಗಿ ಅವಳು ಲಜ್ಜಿತಳೂ ದುಃಖಿತಳೂ ಆದಳು. ಉಪಗುಪ್ತನು ಅವಳ ಬಳಿಗೆ ಹೋಗಿ ಕುಳಿತುಕೊಳ್ಳಲಾಗಿ ಅವಳು—'ಸ್ವಾಮಿ! ಈ ದೇಹವು ನವವಿಕಸಿತಕುಸುಮದೋಪಾದಿಯಲ್ಲಿ ತಾರುಣ್ಯದಿಂದ ಪ್ರಫುಲ್ಲಿತವಾಗಿಯೂ, ಬಹು ಮೌಲ್ಯದ ವಸ್ತ್ರಾಲಂಕಾರಗಳಿಂದ ವಿಭೂಷಿತವಾಗಿಯೂ, ಕಾಮುಕರ ಮನಸ್ಸುಗಳನ್ನು ಸೆಳೆದುಕೊಳ್ಳುತ್ತಿರುವಾಗ

Digitized by ROJA MUTHIAH RESEARCH LIBRARY

ನಾನು ನಾನಾ ರೀತಿಯಾಗಿ ಬಿನ್ನಹಮಾಡಿಕೊಂಡರೂ ತಮ್ಮ ದರ್ಶನವಾಗಲಿಲ್ಲ. ಅಯ್ಯೋ! ಈಗ ಇಂತಹ ಕಷ್ಟಮಯದೆಸೆಯು ದುರ್ದೈವದಿಂದ ನನಗೆ ಪ್ರಾಪ್ತವಾಯಿತು! ಆನಂದ, ಸುಖ, ಸೌಂದರ್ಯ ಮೊದಲಾದುವುಗಳು ನಷ್ಟವಾದುವು. ಇಂತಹ ನನ್ನ ಹೀನ ಸ್ಥಿತಿಯಲ್ಲಿ ಈ ಛಿನ್ನವಿಚ್ಛಿನ್ನವೂ ತಿರಸ್ಕರಣೀಯವೂ ಆದ ನನ್ನ ಶರೀರವನ್ನು ನೋಡಲು ಏಕೆ ಬಂದಿರಿ?' ಎಂದಳು. ಈ ಮರ್ಮಭೇದಕವೂ ಹೃದಯದ್ರಾವಕವೂ ಆದ ವಾಕ್ಯವನ್ನು ಕೇಳಿ ಅವನು—'ವಾಸವದತ್ತೇ, ಇದೇ ನಿಜವಾಗಿ ನೋಡ ಬೇಕಾದ ಸಮಯವು. ಮನುಷ್ಯನ ಐಹಿಕಸುಖಗಳು ಹೇಗೆ ನಶ್ವರವೆಂಬುದನ್ನು ನೋಡುವುದಕ್ಕಾಗಿಯೇ ನಾನು ಇಲ್ಲಿಗೆ ಬಂದಿರುವೆನು' ಎಂದು ಅವನು ಮರಣೋನ್ಮುಖಳಾದ ಆ ಗಣಿಕೆಗೆ ಧರ್ಮೋಪದೇಶವನ್ನು ಮಾಡಿದನು. ದುಃಖವೇಗದಿಂದ ಅಸ್ವಸ್ಥವಾದ ಅವಳ ಮನಕ್ಕೆ ಇದರಿಂದ ಶಾಂತಿಯುಂಟಾಯಿತು. ಮತ್ತು ಅವಳು ಬುದ್ಧಧರ್ಮಸಂಘಗಳನ್ನು ಆಶ್ರಯಿಸಿ ಪ್ರಾಣವನ್ನು ಬಿಟ್ಟಳು.[೨೭]

---

[೨೭] ಈ ಧರ್ಮೋಪದೇಶದ ಭಾವಾರ್ಥವನ್ನು ಮಿ. ಪಾಲ್‌ಕಾರಸ್ ಸಾಹೇಬರು ತಮ್ಮ 'Gospel of Buddha' ಎಂಬ ಗ್ರಂಥದಲ್ಲಿ ಕೆಳಗೆ ಬರೆದಂತೆ ಕೊಟ್ಟಿರುವರು :—

I have seen with mine eyes the Tathagata walking upon earth and teaching his wonderful doctrine. But you would not have listened to the words of righteousness while surrounded with temptations, while under the spell of passion and yearning wordly pleasures. You would not have listened to the words of the Tathagata, for your heart was wayward and you set your trust on the charm of transient forms. The charms of a lovely form are treacherous and quickly lead into temptations which have proved too strong for you. But there is a beauty which will not fade, and if you but listen to the doctrine of our Lord Buddha, you will find that peace which you would never have found in the restless world of sinful pleasures."

## ೫ನೆಯ ಪ್ರಕರಣ.

### ಬೌದ್ಧ ಧರ್ಮ—ರಾಷ್ಟ್ರೀಯ ಮತ.

ರಾಜನ ವೃತ್ತಿಪರಿವರ್ತನದಿಂದ ಜನಗಳಿಗೆ ಒಂದು ಕಡೆಯಿಂದ ಆನಂದವಾಯಿತು. ಆದರೆ ಅವರು ಧರ್ಮಾಂತರವನ್ನು ಮಾಡಿದುದನ್ನೂ, ವಿಶೇಷತಃ ಬೌದ್ಧಧರ್ಮಕ್ಕೆ ರಾಷ್ಟ್ರೀಯ ಸ್ವರೂಪಕೊಟ್ಟುದನ್ನೂ ನೋಡಿ, ಹಿಂದೂ ಪ್ರಜೆಗಳು ಬಹಳ ವ್ಯಸನಪಟ್ಟರು. ಅಶೋಕನು ಪ್ರತಿದಿನ ಬೋಧಿವೃಕ್ಷದ ಕೆಳಗೆ ಕುಳಿತು ಧ್ಯಾನಮಗ್ನನಾಗುತ್ತಿದ್ದನು; ಇದು ಕೂಡ ಅವನ ರಾಣಿಯಾದ ತಿಷ್ಯರಕ್ಷಿತೆಗೆ ಸಹಿಸದೆ, ಒಂದು ದಿನ ಅವಳು ಆ ಗಿಡವನ್ನು ಒಬ್ಬರಿಗೂ ತಿಳಿಯದಂತೆ ಕಿತ್ತುಹಾಕಿಸಿದಳು. ಎಂದಿನಂತೆ ರಾಜನು ಮಾರನೆಯ ದಿನ ಅಲ್ಲಿಗೆ ಕುಳಿತುಕೊಳ್ಳ ಹೋಗಲು, ಕಿತ್ತುಹಾಕಿದ ಮರವು ಅವನ ಕಣ್ಣಿಗೆ ಬಿದ್ದಿತು. ಅಶೋಕನು ತನ್ನ ಪೂರ್ವ ವೃತ್ತಿಯಲ್ಲಿದ್ದರೆ ಈಗ ಈ ಅಪರಾಧಕ್ಕಾಗಿ ರಾಜಮಂದಿರದೊಳಗಿನ, ಪ್ರತಿಯೊಬ್ಬನನ್ನು ಬಹುಕ್ರೂರತೆಯಿಂದ ಹಿಂಸೆಪಡಿಸಿ ಕೊಲ್ಲಿಸುತ್ತಿದ್ದನು. ಆದರೆ ಆಚಾರ್ಯನಾದ ಉಪಗುಪ್ತನ ಧರ್ಮೋಪದೇಶದಿಂದ ಅವನ ಮನಸ್ಸು ಅತಿಶಾಂತವಾಗಿದ್ದುದರಿಂದ, ಆ ಸಂಬಂಧವಾಗಿ ಅವನು ಯಾರೊಡನೆಯೂ ಏನನ್ನೂ ಮಾತನಾಡಲಿಲ್ಲ; ಆದರೆ ಮನಸ್ಸಿನಲ್ಲಿ ಮಾತ್ರ ಬಹು ಕ್ಲೇಶಪಟ್ಟನು. ಆ ವೃಕ್ಷಕ್ಕೆ ಪುನಃ ಟೊಂಗೆಗಳು ಒಡೆಯುವ ವರೆಗೆ ಅವನು ಉಪವಾಸ ಮಾಡಿದನೆಂದು ಕೆಲವರು ಹೇಳುತ್ತಾರೆ. ಅದು ಹಾಗಿರಲಿ. ಹೇಗೂ ಧರ್ಮವಾಸನೆಯ ಯೋಗದಿಂದ ಅವನ ವೃತ್ತಿಯಲ್ಲಿ ಉಂಟಾದ ಅಂತರವು ಲಕ್ಷ್ಯದಲ್ಲಿಡತಕ್ಕ ಸಂಗತಿಯಾಗಿದೆ.

ಅಶೋಕನು ದೇಶದೇಶಗಳಿಗೆ ಪ್ರಸಿದ್ಧ ಪತ್ರಿಕೆಗಳನ್ನು ಕಳುಹಿಸಿ ಬೌದ್ಧಧರ್ಮಕ್ಕೆ ರಾಷ್ಟ್ರೀಯ ಸ್ವರೂಪವನ್ನು ಕೊಟ್ಟನು. ಇಷ್ಟೇ ಅಲ್ಲದೆ ಆ ಧರ್ಮವನ್ನು ಪ್ರಸಾರ ಮಾಡುವುದಕ್ಕಾಗಿ ಕಂಕಣಬದ್ಧನಾದನು. ಬೌದ್ಧಭಿಕ್ಷು ಭಿಕ್ಷುಣಿಯರ ವಿಷಯದಲ್ಲಿ

Digitized by ROJA MUTHIAH RESEARCH LIBRARY

ಅವನು ವಿಶೇಷವಾದ ಆದರವನ್ನೂ ವಿಶ್ವಾಸವನ್ನೂ ತೋರಿಸಿದು
ದಲ್ಲದೆ, ಅವರಿಗೆ ದ್ರವ್ಯದ್ವಾರಾ ಸಹಾಯ ಮಾಡಿ, ಅವರಿಂದ ಧರ್ಮ
ಪ್ರಸಾರ ಮಾಡಿಸ ತೊಡಗಿದನು. ರಾಜನ ಉದಾಹರಣವನ್ನು
ನೋಡಿ ಅನೇಕ ಶ್ರೀಮಂತರಿಗೂ ಅವನನ್ನು ಅನುಸರಿಸ ಬೇಕೆಂಬ
ಇಚ್ಛೆಯುಂಟಾಯಿತು. ದಿನಕ್ರಮವಾಗಿ ಬ್ರಾಹ್ಮಣರ ಮಹತ್ವವು
ಕಡಮೆಯಾಗ ತೊಡಗಿದುದರಿಂದ, ಅವರ ಆದಾಯವೂ ಕಡಮೆ
ಯಾಗುತ್ತ ಹೋಯಿತು. ಹೀಗಾದರೆ ಇನ್ನು ಮುಂದೆ ತಮ್ಮ ಪರಿ
ಣಾಮವಾಗಲಾರದೆಂದರಿತು, ಧೂರ್ತರಾದ ಬ್ರಾಹ್ಮಣರಲ್ಲಿ ಅನೇ
ಕರು ಮೆಲ್ಲಮೆಲ್ಲನೆ ಸ್ವಧರ್ಮದ ವಿಷಯದಲ್ಲಿ ಶಿಥಿಲತೆಯನ್ನೂ,
ಬೌದ್ಧಧರ್ಮದ ವಿಷಯದಲ್ಲಿ ಆದರವನ್ನೂ ತೋರಿಸಲಾರಂಭಿಸಿ
ದರು. ಹಲವರು ಕಾಷಾಯ ವಸ್ತ್ರಗಳನ್ನು ಧರಿಸಿ ಭಿಕ್ಷುಗಳೆಂದು
ಬೌದ್ಧವಿಹಾರಗಳಲ್ಲಿ ಮೆಲ್ಲನೆ ಪ್ರವೇಶ ಮಾಡಿದರು; ಮತ್ತು ನವಿ
ಲುಗರಿಗಳನ್ನು ಹಚ್ಚಿಕೊಂಡು ನವಿಲೆಂದು ಕುಣಿದಾಡುವ ಹೊಲೆ
ಗಾಗೆಯಂತೆ, ಬೌದ್ಧ ಭಿಕ್ಷುಗಳೊಳಗೆ ಬ್ರಾಹ್ಮಣ ಭಿಕ್ಷುಕರು ಸೇರಿ,
ಬೌದ್ಧಧರ್ಮದಂತೆ ಎಲ್ಲವನ್ನೂ ಆಚರಿಸಹತ್ತಿದರು. ಇತ್ತ, ಬೌದ್ಧ
ಭಿಕ್ಷುಗಳಲ್ಲಿಯೂ ಎಷ್ಟೋ ಅನಾಚಾರಗಳು ಪ್ರವೇಶಿಸಿದ್ದುವು.
ಅವರಿಗೆ ಶಾಸನ ಮಾಡತಕ್ಕ ಒಡೆಯನು ಯಾರೊಬ್ಬನೂ ಇದ್ದಿಲ್ಲ.
ಮೊಗ್ಗಲೀಪುತ್ರ ತಿಷ್ಯನೆಂಬ ಬೌದ್ಧಭಿಕ್ಷುಗಳ ಸಭಾಪತಿಯು ಹೆಸ
ರಿಗೆ ಮಾತ್ರ ಇದ್ದನು. ಅವನನ್ನು ಯಾರೂ ಲೆಕ್ಕಿಸದೆ ಹೋದ
ಕಾರಣ ಅವನೂ ಅರಣ್ಯಕ್ಕೆ ಹೋಗಿನಿಂತವನಾದನು. ಈ ಸಂಗ
ತಿಗಳೆಲ್ಲಾ ಅಶೋಕನಿಗೆ ತಿಳಿದ ಕೂಡಲೇ ಅವನು ಒಬ್ಬ ಅಧಿಕಾ
ರಿಯ ಕಡೆಯಿಂದ "ಈ ತೊಂದರೆಗಳನ್ನು ನಿವಾರಿಸುವುದಕ್ಕೋ
ಸ್ಕರ ಕ್ಷಿಪ್ರದಲ್ಲಿಯೆ ಸಭೆಕೂಡಿಸತಕ್ಕುದಿದೆ. ವಾದವಿವಾದಗಳನ್ನು
ಮಾಡುವ ಇಚ್ಛೆಯುಳ್ಳವರು ಸಿದ್ಧರಾಗಿ ಬರಬೇಕು" ಎಂಬ ನಿರೂ
ಪವನ್ನು ಕಳುಹಿಸಿದನು. ಆದರೆ ಆ ಅಧಿಕಾರಿಯು ಆ ನಿರೂಪ
ವನ್ನು ತಿಳುಹಿಸುವಾಗ್ಗೆ, "ರಾಜನ ಈ ಆಜ್ಞೆಯನ್ನು ಉಲ್ಲಂಘಿಸಿದ
ವರ ಶಿರಚ್ಛೇದ ಮಾಡುವ ಅಧಿಕಾರವು ನಮಗೆ ಕೊಡಲ್ಪಟ್ಟಿದೆ."



ಎಂಬ ಶಬ್ದಗಳನ್ನು ತನ್ನ ಕೈಯಿಂದ ಸೇರಿಸಿ ಹೇಳಿದನು. ಇದನ್ನು
ಕೇಳಿ ಕೋಪಶೀಲನಾದ ಒಬ್ಬ ಭಿಕ್ಷುವು ಚುಚ್ಚುಮಾತುಗಳನ್ನಾ
ಡಲು, ಮಾತಿನ ಮೇಲೆ ಮಾತು ಬಂದು, ಕ್ರೋಧವಶನಾದ ಆ
ಅಧಿಕಾರಿಯು ಅವನ ಶಿರಚ್ಛೇದವನ್ನು ಮಾಡಿದನು. ವಾದವಿವಾ
ದವು ಅಷ್ಟರಲ್ಲಿಯೆ ಉಳಿಯಿತು. ಆದರೆ ನಡುವೆ ಇಲ್ಲದ ವಿಘ್ನ
ವೊಂದು ಮಾತ್ರ ಉಪಸ್ಥಿತವಾಯಿತು.

ಈ ವಾರ್ತೆಯನ್ನು ಕೇಳಿ ಅಶೋಕನಿಗೆ ಬಹಳ ದುಃಖವಾ
ಯಿತು. ಮತ್ತು ಈ ಹತ್ಯದ ವಾಚಕವು ತನ್ನ ತಲೆಯ ಮೇಲೆ
ಬಂತೆಂದು ತಿಳಿದು, ತನ್ನನ್ನು ತಾನೇ ದೂಷಿಸಿಕೊಳ್ಳಲಾರಂಭಿಸಿ
ದನು. ಅವನು ದೊಡ್ಡ ದೊಡ್ಡ ಪಂಡಿತರಾದ ಭಿಕ್ಷುಗಳ ಸಭೆಗೂ
ಡಿಸಿ, ಇದಕ್ಕೆ ಪ್ರಾಯಶ್ಚಿತ್ತವೇನೆಂದು ಕೇಳಿದನು. ಆಗ ಅವರಲ್ಲಿ
ಯೂ ಮತಭೇದವುಂಟಾಗಿ, ಕೆಲವರು ರಾಜನು ದೋಷರಹಿತ
ನೆಂತಲೂ, ಇನ್ನು ಕೆಲವರು ದೋಷಿಯೆಂತಲೂ ನಿಶ್ಚೈಸಿದರು.
ಇವರಿಂದ ಏನೂ ನಿರ್ಣಯವಾಗದೆ ಹೋದ ಕಾರಣ, ರಾಜನು
ಮೊಗ್ಗಲೀಪುತ್ರ ತಿಷ್ಯನನ್ನು ಬಹು ವಿಭವದೊಡನೆ ಕರೆಯಿಸಿ,
ಅವನ ಕಾಲಿಗೆ ಬಿದ್ದು ವಂದಿಸಿ, ಕೃತಾಂಜಲೀಪುಟನಾಗಿ, ಈ ಸಂ
ಗತಿಗೆ ಪ್ರಾಯಶ್ಚಿತ್ತವೇನೆಂದು ವಿನಯದಿಂದ ಕೇಳಿದನು. ಅದಕ್ಕೆ
ಆ ಯತಿಯು ವಿಷಯವನ್ನೆಲ್ಲಾ ಕೇಳಿ ತಿಳಿದು—"ಶಿರಚ್ಛೇದನ
ವನ್ನು ಮಾಡುವ ವಿಷಯದಲ್ಲಿ ದಿಟವಾಗಿ ರಾಜಾಜ್ಞೆಯಿಲ್ಲದುದರಿಂ
ದಲೂ, ಆ ಅಧಿಕಾರಿಯನ್ನು ಕಳುಹುವುದರಲ್ಲಿ ರಾಜನ ಉದ್ದೇ
ಶವು ಶುದ್ಧವೂ ಸರಳವೂ ಆಗಿದ್ದುದರಿಂದಲೂ, ರಾಜನು ಆ ವಿಷ
ಯದಲ್ಲಿ ದೋಷಾರ್ಹನಾಗುವುದಿಲ್ಲ. ಪ್ರತಿಯೊಂದು ಧರ್ಮಾಧ
ರ್ಮದ ವಿಚಾರವು ಮನಸ್ಸಿನ ಉದ್ದೇಶದ ಮೇಲೆ ಬಹಳ ಮಟ್ಟಿಗೆ
ಅವಲಂಬಿಸಿರುವುದರಿಂದ, ಪಾಪಪುಣ್ಯದ ವಿಚಾರವನ್ನು ಮಾಡು
ವಾಗ ಮೊದಲು ಉದ್ದೇಶವನ್ನು ಪರೀಕ್ಷಿಸಬೇಕು" ಎಂದು ಹೇಳಿ
ದನು. ಈ ನಿರ್ಣಯವು ಎಲ್ಲರಿಗೂ ಮಾನ್ಯವಾಗದೆ ಹೋದರೂ,
ಮೊಗ್ಗಲೀಪುತ್ರನ ವಿರುದ್ಧವಾಗಿ ಮಾತಾಡುವಷ್ಟು ಸಾಹಸವು ಯಾ

Digitized by ROJA MUTHIAH RESEARCH LIBRARY

ರಿಗೂ ಇಲ್ಲದೆ ಹೋದುದರಿಂದ, ಎಲ್ಲರೂ ಸುಮ್ಮನಾಗಿ ಅದಕ್ಕೆ ಸಮ್ಮತಿಕೊಟ್ಟರು.

ಈ ಸಂಗತಿ ನಡೆದ ಏಳು ದಿವಸಗಳ ತರುವಾಯ (ಕ್ರಿ. ಶ. ಪೂ. ೨೪೧ ವರ್ಷ) ಬುದ್ಧ ಮಹಾ ಸಭೆಯು ಕೂಡಿತು. ಮೊಗ್ಗಲೀಪುತ್ರ ಶಿಷ್ಯನು ಇಳಿದುಕೊಂಡ ಗಂಗಾತೀರದ ಉದ್ಯಾನದಲ್ಲಿಯೆ ಒಂದು ವಿಸ್ತೀರ್ಣವಾದ ಮಂಟಪವನ್ನು ಕಟ್ಟಿಸಿ, ಅದರಲ್ಲಿ ಸಭಾಸದರ ಯೋಗ್ಯತೆಯ ಪ್ರಕಾರ ಆಸನಗಳನ್ನು ಹಾಕಿ, ಒಂದು ಪಕ್ಕದಲ್ಲಿ ರಾಜನಿಗಾಗಿ ಸಿಂಹಾಸನವನ್ನು ಇಟ್ಟದ್ದರು. ಮೊಗ್ಗಲೀಪುತ್ರ ಶಿಷ್ಯನನ್ನು ಸಭಾಪತಿಯನ್ನಾಗಿ ನೇಮಿಸಿದುದರಿಂದ, ಅವನು ಮುಖ್ಯಾಸನದಲ್ಲಿ ಕುಳಿತುಕೊಂಡಿದ್ದನು. ಭಿಕ್ಷುಗಳನ್ನು ಪರೀಕ್ಷಿಸುವುದೇ ಈ ಸಭೆಯ ಮುಖ್ಯ ವಿಷಯವಾಗಿತ್ತು. ಒಬ್ಬೊಬ್ಬರಾಗಿ ಭಿಕ್ಷುಗಳು ಸಭಾಪತಿಯ ಬಳಿಗೆ ಹೋಗಲು, ಸಭಾಪತಿಯು ಅವರಿಗೆ ಧರ್ಮಸಂಬಂಧವಾಗಿ ಕೆಲವು ಪ್ರಶ್ನೆಮಾಡಿ ತ್ರಿಪೀತಕ ಗ್ರಂಥದ ವಿರುದ್ಧವಾಗಿ ಅವರು ಉತ್ತರ ಕೊಟ್ಟರೆ, ಒಡನೆಯೆ ಅವರನ್ನು ಸಭೆಯ ಹೊರಗೆ ಹಾಕಿ, ಅವರ ಕಾಷಾಯವಸ್ತ್ರಗಳನ್ನು ಸೆಳೆದುಕೊಂಡು ಅವರಿಗೆ ಶ್ವೇತವಸ್ತ್ರಗಳನ್ನು ಕೊಟ್ಟು, ಮರಳಿ ಬ್ರಾಹ್ಮಣ ಸಮಾಜಕ್ಕೆ ಕಳುಹುತ್ತಿದ್ದರು. ಈ ಪ್ರಕಾರ ೬೦,೦೦೦ ಭಿಕ್ಷುಗಳನ್ನು ಬೌದ್ಧ ಸಮಾಜದಿಂದ ಹೊರಗೆ ಹಾಕಿದರು. ರಾಜನು ಇದನ್ನೆಲ್ಲಾ ಸುಮ್ಮನೆ ನೋಡುತ್ತಿದ್ದನು. ಈ ರೀತಿಯಾಗಿ ಈ ಸಭೆಯವರು ತಮ್ಮೊಳಗಿನ ಹೊಲೆಗಾಗೆಗಳನ್ನೆಲ್ಲಾ ಹೊರಗೆ ಹಾಕಿ, ನಿಜವಾದ ಧರ್ಮಶ್ರದ್ಧೆಯುಳ್ಳ ಬೌದ್ಧಭಿಕ್ಷುಗಳನ್ನು ಮಾತ್ರ ಆರಿಸಿ ತೆಗೆದರು. ಆ ಬಳಿಕ ಸಭೆಯವರು, ಬೌದ್ಧ ಧರ್ಮಕ್ಕೆ "ಸ್ಥಿರತೆ ಪ್ರಾಪ್ತವಾಗುವುದಕ್ಕೆ ಮಾಡತಕ್ಕ ಉಪಾಯಗಳು" ಎಂಬ ಎರಡನೆಯ ವಿಷಯವನ್ನು ಕೈಗೆ ತೆಗೆದುಕೊಂಡರು. ಇದಕ್ಕೋಸ್ಕರ ಸಭಾಪತಿಯು ವಿದ್ವಾಂಸರಾದ ಒಂದು ಸಾವಿರ ಭಿಕ್ಷುಗಳನ್ನು ಆರಿಸಿ, ಅವರ ಸಹಾಯದಿಂದ ತ್ರಿಪೀತಕವೆಂಬ ಶಾಸ್ತ್ರಗ್ರಂಥದ ಶೋಧನೆ ಮಾಡುವ ಕಾರ್ಯವನ್ನು ಕೈಕೊಂಡನು. ತ್ರಿಪೀತಕ



ವೆಂದರೆ ಮೂರು ಗ್ರಂಥಗಳ ಸಮುದಾಯವು. ಬುದ್ಧನ ಮರಣಾನಂತರದಲ್ಲಿ ಮಹಾಕಾಶ್ಯಪನೆಂಬುವನು ಸಭೆಗೂಡಿಸಿ ನಿಶ್ಚೈಸಿದ ಸೂತ್ರಗಳು, ವಿನಯ, ಅಭಿಧರ್ಮ, ಎಂಬ ಈ ಮೂರು ಧರ್ಮಗ್ರಂಥಗಳಿಗೂ ಕೂಡಿ ತ್ರಿಪೀತಕವೆಂಬ ಹೆಸರು ಸಲ್ಲುವುದು. ಈ ಶಾಸ್ತ್ರಸಂಶೋಧನ ಕಾರ್ಯವನ್ನು ಅವರು ಒಂಭತ್ತು ತಿಂಗಳವರೆಗೆ ಶ್ರಮಪಟ್ಟು ಕೊನೆಗಾಣಿಸಿದರು.[೨೮]

ಅಶೋಕನ ಕಾಲದಲ್ಲಿ ಬೌದ್ಧಧರ್ಮದ ಅನೇಕ ಪಂಥಗಳ ಸಂಶೋಧನವಾಗಿ, ಸರ್ವಾನುಮತದಿಂದ ಸ್ಥಿರವಾದ ಧರ್ಮವೇ ಈಗಲೂ ಸಿಂಹಲದ್ವೀಪದಲ್ಲಿ ನಡೆಯುತ್ತಿದೆ. ಅಶೋಕನು ಸತ್ತ ತರುವಾಯ ಅವನ ರಾಜ್ಯದ ಸ್ಥಿತಿಯಾದಂತೆಯೇ ಧರ್ಮಮತದ ಸ್ಥಿತಿಯೂ ಆಗಿ, ಪುನಃ ಅನೇಕ ಪಂಥಗಳೂ ವಿಚಾರಗಳೂ ಉತ್ಪನ್ನವಾದುವು. ಬೌದ್ಧಧರ್ಮದ ಈ ವಿಕೃತ ಸ್ವರೂಪವನ್ನು ಈಗಲೂ, ಚೀನ, ತಿಬೇತು, ಜಪಾನ, ತಾರ್ತರಿ ಮುಂತಾದ ದೇಶಗಳಲ್ಲಿ ನೋಡಬಹುದು.

ಬ್ರಹ್ಮದೇಶ, ಸಯಾಮ, ಸಿಂಹಲದ್ವೀಪ, ಈ ದೇಶಗಳಲ್ಲಿ ಈಗಲೂ ನಡೆಯುವ ಬೌದ್ಧಧರ್ಮವೇ ಅಶೋಕನಿಂದ ಸಂಶೋಧಿತವಾದ ಧರ್ಮವು. ಕಾಲಗತಿಯಿಂದ ಧರ್ಮದಲ್ಲಿ ಭಿನ್ನಭಿನ್ನ ಆಚಾರವಿಚಾರಗಳೂ ಮತಗಳೂ ಸೇರಿ, ಅಶುದ್ಧವಾದ ಧರ್ಮವನ್ನು ನೋಡಬೇಕಾದರೆ ತಿಬೇತು, ನೇಪಾಳ, ಜಪಾನ ಮುಂತಾದ ದೇಶಗಳಲ್ಲಿ ತೊಡಕಿಲ್ಲದೆ ನೋಡಬಹುದು.

ಮಹಾಸಭೆಯವರು ಧರ್ಮಸಂಶೋಧನೆಯ ಹೊರತು, ಧರ್ಮಪ್ರಸಾರಕ್ಕೋಸ್ಕರ ಬೇರೆ ಬೇರೆ ದೇಶಗಳಿಗೆ ಧರ್ಮೋಪದೇಶಕರನ್ನು ಕಳುಹಿಸಿ, ಅವರ ದ್ವಾರಾ ಧರ್ಮ ಪ್ರಸಾರಗೊಳಿಸಬೇಕೆಂಬ ಎರಡನೆಯ ಉಪಾಯವನ್ನು ಸೂಚಿಸಿದ್ದರು. "ದೀಪ

[೨೮] ವಿನಯಪೀತಕದಲ್ಲಿ ಭಿಕ್ಷು ಭಿಕ್ಷುಣಿಯರ ನಿತ್ಯಾಚಾರವನ್ನು ವರ್ಣಿಸಿದೆ. ಸೂತ್ರಪೀತಕದಲ್ಲಿ ಉಪಾಸಕರಿಗೆ ಸಂಬಂಧಪಟ್ಟ ಸೂತ್ರಗಳುಂಟು; ಮತ್ತು ಅಭಿಧರ್ಮಪೀತಕದಲ್ಲಿ ಬೌದ್ಧದರ್ಶನವಿದೆ Philosophy of Buddhism.



Digitized by ROJA MUTHIAH RESEARCH LIBRARY

ವಂಶ” ಎಂಬ ಬೌದ್ಧಗ್ರಂಥದ ೮ನೆಯ ಅಧ್ಯಾಯದಲ್ಲಿಯೂ “ಮಹಾವಂಶ”ದ ೧೨ನೆಯ ಅಧ್ಯಾಯದಲ್ಲಿಯೂ, ಅಶೋಕನು ಧರ್ಮಪ್ರಸಾರಕ್ಕೋಸ್ಕರ ನಾನಾ ದೇಶಗಳಿಗೆ ಕಳುಹಿಸಿದ ಧರ್ಮೋಪದೇಶಕರ ಹೆಸರುಗಳನ್ನು ಈ ಕೆಳಗೆ ಬರೆದಂತೆ ಕೊಟ್ಟದೆ.

| ದೇಶಗಳು. | ಧರ್ಮೋಪದೇಶಕರ ಹೆಸರುಗಳು. |
|---|---|
| ಕಾಶ್ಮೀರ ಮತ್ತು ಗಾಂಧಾರ ....... (ಕಾಬೂಲು ನದಿಯ ದಕ್ಷಿಣತೀರ). | ಮಜ್‌ಝೊಂತಿಕಾ. |
| ಮಹೀಶ (ಮೈಸೂರು) ........... | ಮಹಾದೇವ. |
| ವನವಾಸಿ[೧] ................ | ರಕ್ಷಿತ. |
| ಅಪರಸ್ತಕ ಅಥವಾ ಅಪರಾಂತಕ[೨]..... | ಧರ್ಮರಕ್ಷಿತ, (ಇವನು ಬ್ಯಾಕ್ಟ್ರಿಯಾದಲ್ಲಿರುತ್ತಿದ್ದನು.) |
| ಮಹಾರಾಷ್ಟ್ರ ................ | ಮಹಾಧರ್ಮರಕ್ಷಿತ. |
| ಯೋನ (ಸಿರಿಯಾ ಮುಂತಾದ ಗ್ರೀಕರಾಷ್ಟ್ರಗಳು) ................ | ಮಹಾರಕ್ಷಿತ. |
| ಹಿಮವಂತ (ಹಿಮಾಲಯದ ತಪ್ಪಲ ಸೀಮೆ) ................ | ಮಜ್‌ಝಿಮ್, ದುರಭಿಸಾರ, ಸಹದೇವ ಮತ್ತು ಮೂಲಕದೇವ. |
| ಸುವರ್ಣಭೂಮಿ (ಬ್ರಹ್ಮದೇಶ)...... | ಸೋನ ಮತ್ತು ಉತ್ತರ. |
| ಸಿಂಹಲದ್ವೀಪ (ಸಿಲೋನ್)........ | ಮಹೇಂದ್ರ (ಮಹಿಂದ) ಇತ್ಯಾದಿ. |

ಧರ್ಮೋಪದೇಶಕರನ್ನು ಕಳುಹಿಸಿ, ಧರ್ಮಪ್ರಸಾರ ಮಾಡಿಸುವ ಕಲ್ಪನೆಯ ಉತ್ಪಾದಕನು ಬುದ್ಧನೆಂಬುದು ಇದರಿಂದ ವ್ಯಕ್ತವಾಗುತ್ತದೆ. ಜನರಲ್ ಕನಿಂಗಹ್ಯಾಮ್‌ರೆಂಬ ವಿದ್ವಾನ್ ಕ್ರಿಸ್ತಧರ್ಮೋಪದೇಶಕರು ಸಹ ಈ ಸಂಗತಿಯನ್ನು ನಿರಭಿಮಾನ

[೧] ವನವಾಸಿ ಎಂಬ ಪ್ರದೇಶವು ರಜಪೂತಸ್ಥಾನದೊಳಗಿನ ಬೈಲಿನ ಸೀಮೆಯ ಭಾಗವಾಗಿರಬಹುದೆಂದು, ಮಿ. ಹ್ರಿಸ್ ಡೆವಿಡ್ಸ್ ಸಾಹೇಬರ ಅಭಿಪ್ರಾಯವಿದೆ.

[೨] ಪಂಜಾಬಿನ ಪಶ್ಚಿಮ ಕಡೆಯ ಪ್ರದೇಶವು (ಅಪರಾಂತ = ಕೊಂಕಣಪಟ್ಟಿ. ರಘು. ೪ ಶ್ಲೋಕ ೫೩, ೫೮).



ದಿಂದ ಒಪ್ಪಿಕೊಂಡಿರುತ್ತಾರೆ. ಕನಿಂಗಹ್ಯಾಮರು ಹೀಗೆ ಬರೆಯುವರು:—[೩] “ಅಶೋಕನ.................ಮುಂದೆ ಮುನ್ನೂರು ವರ್ಷಗಳ ಬಳಿಕ ಕ್ರಿಸ್ತರು ತಮ್ಮ ಧರ್ಮೋಪದೇಶಕರನ್ನು ಕಳುಹಿಸ ತೊಡಗಿದರೆಂಬೀ ಸಂಗತಿಯನ್ನು ಈಗಿನ.........‘ಕ್ರಿಸ್ತ ಮಿಶನರಿಗಳು’ ಲಕ್ಷ್ಯದಲ್ಲಿಟ್ಟುಕೊಳ್ಳುವುದು ಯೋಗ್ಯವಾಗಿದೆ.”

[೩] Bhilsa Topes P. 123.



Digitized by ROJA MUTHIAH RESEARCH LIBRARY

## ೬ನೆಯ ಪ್ರಕರಣ.

### ಮಹಿಂದ, ಸಂಗಮಿತ್ರೆ, ಕುನಾಲ.

ರಾಮಾಯಣದಲ್ಲಿ ಉಲ್ಲೇಖಿಸಿರುವ ಲಂಕೆ ಎಂಬ ನಡುಗಡ್ಡೆ
ಯು, ಸಿಂಹಲದ್ವೀಪವೇ ಎಂದಾದರೆ, ಅತಿ ಪ್ರಾಚೀನ ಕಾಲದಿಂದ
ಹಿಂದುಸ್ಥಾನಕ್ಕೂ ಅದಕ್ಕೂ ಸಂಬಂಧವಿತ್ತೆನ್ನ ಬೇಕಾಗುವುದು.
"ದೀಪವಂಶ" ಎಂಬ ಗ್ರಂಥದಲ್ಲಿ, ಈ ದ್ವೀಪದೊಳಗೆ ರಾಕ್ಷಸರು
ಇರುತ್ತಿದ್ದರೆಂದು ಬರೆದಿದೆ. ಇದರಿಂದ ಇದೇ ಲಂಕಾಪಟ್ಟಣವೆಂದು
ತೋರುವುದು. ಆದರೂ ಹಲವು ಪಂಡಿತರು ಇದನ್ನು ಒಪ್ಪದುದ
ರಿಂದ ಈ ವಾದಗ್ರಸ್ತ ವಿಷಯವನ್ನು ಬಿಟ್ಟು, ನಾವು ಅದರ ಅರ್ವಾ
ಚೀನ ಇತಿಹಾಸವನ್ನು ಕುರಿತು ವಿಚಾರಮಾಡುವ. ಈ ನಡು
ಗಡ್ಡೆಯ ಮೂಲನಿವಾಸಿಗಳು, ರಾಮಾಯಣದಲ್ಲಿ ವರ್ಣಿಸಿದ ರಾ
ಕ್ಷಸರೇ ಆಗಿರಲಿ, ಅಥವಾ ಆಫ್ರಿಕಾ ಖಂಡದೊಳಗಿನ ನಿಗ್ರೋ,
ಸ್ವಾಲಿ ಮುಂತಾದ ಜಾತಿಯವರೇ ಆಗಿರಲಿ; ಅಂತೂ ಅವರು
ಮೊದಲು ಕಾಡುಸ್ಥಿತಿಯಲ್ಲಿದ್ದರು ಎಂಬುದರಲ್ಲಿ ಸಂದೇಹವಿಲ್ಲ. ಈ
ಕಾಡುಜನರನ್ನು ಹಿಂದುಸ್ಥಾನದ ರಾಜನೊಬ್ಬನು ಗೆದ್ದು, ಆ ನಡು
ಗಡ್ಡೆಯ ಸ್ವಾಮಿತ್ವವನ್ನು ಸೆಳೆದುಕೊಂಡನೆಂಬ ಸಂಗತಿಯು
ಯಥಾರ್ಥವಾಗಿದೆ. ಅಶೋಕನ ಕಾಲದಲ್ಲಿ ಈ ದ್ವೀಪವನ್ನು ತಿಷ್ಯ
ನೆಂಬ ರಾಜನು ಆಳುತ್ತಿದ್ದನು. ಅವನು ಅಶೋಕನ ಕೀರ್ತಿಯನ್ನು
ಕೇಳಿ, ತಾನೂ ಅವನಂತೆಯೇ ಆಗಬೇಕೆಂದು ಈರ್ಷೆಯಿಂದ
ಅಶೋಕನಂತೆ 'ದೇವಾನಾಂಪ್ರಿಯ' ಎಂಬ ಬಿರುದನ್ನು ಇಟ್ಟು
ಕೊಂಡನು. ಅಶೋಕನು ಧರ್ಮೋಪದೇಶಕರನ್ನು ನಾನಾ
ದೇಶಗಳಿಗೆ ಕಳುಹಿದನೆಂಬುದನ್ನೂ, ಮಹಿಂದನೆಂಬುವನನ್ನು
(ಮಹೇಂದ್ರ) ಸಿಂಹಲ ದ್ವೀಪಕ್ಕೆ ಕಳುಹಿದನೆಂಬುದನ್ನೂ ಮೇಲೆ
ಯೇ ಹೇಳಿರುವೆವು. ಈ ಮಹಿಂದನು ಅಶೋಕನ ಮಗನು.
ಅಶೋಕನು ಪಟ್ಟವೇರಿದ ೬ನೆಯ ವರ್ಷದಲ್ಲಿ, ಈ ರಾಜಪುತ್ರನ
ಮನಸ್ಸು ಐಹಿಕ ವಿಷಯಗಳನ್ನು ಬಿಟ್ಟು, ಪಾರಮಾರ್ಥಿಕ ವಿಷಯ



ಗಳ ಕಡೆಗೆ ತಿರುಗಿದುದರಿಂದ, ಅವನು ಭಿಕ್ಷುವ್ರತವನ್ನು ಸ್ವೀಕರಿ
ಸಿದನು. ಅಶೋಕನ ವಿಷಯದಲ್ಲಿಯೂ, ಬೌದ್ಧಧರ್ಮದ ವಿಷಯ
ದಲ್ಲಿಯೂ, ಸಿಂಹಲ ದ್ವೀಪದ ರಾಜನಾದ ತಿಷ್ಯನ ಮನಸ್ಸಿನಲ್ಲಿ
ತುಂಬಾ ಆದರಬುದ್ಧಿ ಇತ್ತು.[೩೦] ಹೀಗಾದುದರಿಂದ ಅವನು
ಮಹಿಂದನನ್ನು ಚೆನ್ನಾಗಿ ಸತ್ಕರಿಸಿದನು. ಮಹಿಂದನು ತನ್ನೊಂದಿಗೆ
ಇನ್ನು ಅನೇಕ ಭಿಕ್ಷುಗಳನ್ನೂ, ಪಾಟಲೀಪುತ್ರದ ಮಹಾಸಭೆ
ಯವರು ಶೋಧಿಸಿ ಹೊಸತಾಗಿ ಸಿದ್ಧಗೊಳಿಸಿದ ತ್ರಿಪೀತಕ ಗ್ರಂಥ
ವನ್ನೂ, ಅದರ ಭಾಷ್ಯಗ್ರಂಥಗಳನ್ನೂ ತೆಗದುಕೊಂಡು ಬಂದನು.
ಸಿಂಹಲಾಧಿಪನಾದ ತಿಷ್ಯನು ಮಹಿಂದನಿಂದ ಬೌದ್ಧಧರ್ಮದ ದೀಕ್ಷೆ
ಯನ್ನು ತೆಗೆದುಕೊಂಡು, ತನ್ನ ರಾಜ್ಯದಲ್ಲಿ ಅಲ್ಲಲ್ಲಿ ಸುಂದರವಾದ
ವಿಹಾರಗಳನ್ನೂ* ಸ್ತಂಭಗಳನ್ನೂ ಕಟ್ಟಿಸಿದನು. ಅನುರಾಧಾಪು
ರದ ಬಳಿಯಲ್ಲಿಯೇ ಮಹಿಂದನಿಗಾಗಿ ಒಂದು ವಿಹಾರವನ್ನು ಕಟ್ಟಿಸಿ
ದ್ದನು. ಅದರ ಅವಶಿಷ್ಟ ಭಾಗವು ಈಗಲೂ ಅಸ್ತಿತ್ವದಲ್ಲಿದೆ. ಈ
ಸ್ಥಳವು ಬಹಳ ರಮ್ಯವಾಗಿದೆ. ನಾಲ್ಕು ಮಗ್ಗುಲಲ್ಲಿಯೂ ಉನ್ನತ
ವಾದ ಪರ್ವತಗಳಿದ್ದು, ನಡುವೆ ದಟ್ಟವಾದ ಅರಣ್ಯವಿರುವುದರಿಂದ
ಈ ಸ್ಥಳವು ಏಕಾಂತವಾಸಕ್ಕೆ ಬಹು ಯೋಗ್ಯವಾಗಿದ್ದು, ಈ ಸ್ಥಳ
ದಲ್ಲಿಯೇ ಮಹಿಂದನು ಧ್ಯಾನಧಾರಣೆ ಮಾಡುತ್ತಿದ್ದನು. ಇದೇ
ಸ್ಥಳದಲ್ಲಿ ಮಹಿಂದನ ದೇಹಾವಸಾನವಾಯಿತು; ಮತ್ತು ಇಲ್ಲಿಯೇ
ಅವನ ಬೂದಿಯನ್ನು ಅವನ ಶಿಷ್ಯರು ಜತನವಾಗಿ ಕಾದಿಟ್ಟರು
ವರು. ಮುಸಲಮಾನರು ಹಿಂದುಸ್ಥಾನದಲ್ಲಿ ದಾಳಿಗಳನ್ನು ಮಾಡಿ,
ಅನೇಕ ದೇವಾಲಯಗಳನ್ನೂ ಆಶ್ರಮಗಳನ್ನೂ ಸಮಾಧಿಗಳನ್ನೂ
ನಾಶಮಾಡಿದರು. ಆದರೆ ಈ ದ್ವೀಪದಲ್ಲಿ ಅವರು ಪ್ರವೇಶಿಸದೆ

---

[೩೦] ಈ ಮೊದಲೇ ಅಶೋಕ, ತಿಷ್ಯರೊಳಗೆ ಪರಸ್ಪರ ಪತ್ರವ್ಯವಹಾರ ನಡೆದಿತ್ತೆಂದೂ, ಒಬ್ಬರ ರಾಯಭಾರಿಗಳು ಇನ್ನೊಬ್ಬರ ಆಸ್ಥಾನದಲ್ಲಿದ್ದರೆಂದೂ, ತಿಷ್ಯರಾಜನು ಅಶೋಕನ ರಾಯಭಾರಿಯಿಂದಲೇ ರಾಜ್ಯಾಭಿಷೇಕವನ್ನು ಮಾಡಿಸಿಕೊಂಡನೆಂದೂ, ಮಿಸ್ಟರ್ ಹ್ರಿಸ್ ಡೆವಿಡ್ಸ್ ಸಾಹೇಬರು ಬರೆದಿರುವರು.

* ಬೌದ್ಧಯತಿಗಳಿಗಾಗಿ ಕಟ್ಟಿಸಿದ ದೊಡ್ಡ ದೊಡ್ಡ ಮಂದಿರಗಳಿಗೆ ವಿಹಾರವೆಂಬ ಹೆಸರು ಸಲ್ಲುವುದು.

Digitized by ROJA MUTHIAH RESEARCH LIBRARY

ಹೋದುದರಿಂದ, ಎರಡು ಸಾವಿರ ವರ್ಷಗಳ ಪೂರ್ವದಲ್ಲಿದ್ದ, ಕಾಲಗತಿಯ ದೆಸೆಯಿಂದ ನಾಶವಾಗದೆ ಉಳಿದಿರುವ ಬೌದ್ಧವಿಹಾರಗಳೂ, ಸ್ತೂಪಗಳೂ, ಸಮಾಧಿಗಳೂ ಈಗಲೂ ಮೊದಲಿನಂತೆ ಇವೆ. ಸಿಂಹಲೇಶ್ವರನಾದ ತಿಷ್ಯನು ಬೌದ್ಧಧರ್ಮವನ್ನು ಸ್ವೀಕರಿಸಿದ ಬಳಿಕ, ಅವನ ರಾಣಿಯಾದ ಅನುಲೆಯೂ[೩೧] ಅವಳ ಸಖಿಯರೂ ತಾವೂ ಭಿಕ್ಷುಣಿಯರಾಗುವ ಇಚ್ಛೆಯನ್ನು ತೋರಿಸಿದರು. ಅದಕ್ಕೆ ಮಹಿಂದನು—"ಸ್ತ್ರೀಯರಿಗೆ ದೀಕ್ಷೆಯನ್ನು ಕೊಡುವ ಅಧಿಕಾರವು ನನಗೆ ಇಲ್ಲ. ಇದಕ್ಕಾಗಿ ನನ್ನ ತಂಗೆಯಾದ ಸಂಗಮಿತ್ರೆಯನ್ನು ಕರೆಯಿಸುತ್ತೇನೆ. ಅವಳು ನಿಮ್ಮ ಇಚ್ಛೆಯನ್ನು ಪೂರೈಸುವಳು" ಎಂದನು. ಕೂಡಲೇ ತಿಷ್ಯನು ತನ್ನ ಸೇವಕರನ್ನು ಕಳುಹಿಸಿ ಸಂಗಮಿತ್ರೆಯನ್ನೂ, ಅವಳ ಸಖಿಯರಾದ ಉತ್ತರಾ, ಹೇಮಾ, ಮಾಲಾಗಲ್ಲಾ, ಅಗ್ನಿಮಿತ್ರಾ, ತಪಾ, ಪರ್ವತ ಚಿನ್ನಾ, ಮಲ್ಲಾ, ಧರ್ಮದಾಸಿ ಮುಂತಾದ ಭಿಕ್ಷುಣಿಯರನ್ನು ಕರೆಯಿಸಿದನು. ಸಂಗಮಿತ್ರೆಯು ತಿಷ್ಯನ ರಾಣಿಗೂ, ಇತರ ಸ್ತ್ರೀಯರಿಗೂ ದೀಕ್ಷೆ ಕೊಟ್ಟು, ಅವರ ಆ ಇಚ್ಛೆಯನ್ನು ಪೂರೈಸಿದಳು.[೩೨]

ಮಹಿಂದನ ಪ್ರಯತ್ನಕ್ಕೆ ಇಷ್ಟು ಜಯವು ಪ್ರಾಪ್ತವಾಗಲು ಅವನ ತಂದೆಯ ಹೆಸರುವಾಸಿಯೂ, ಸಿಂಹಲೇಶ್ವರನಾದ ತಿಷ್ಯನ ಮನಸ್ಸಿನಲ್ಲಿ ಅಶೋಕನ ವಿಷಯವಾಗಿ ಇರುತ್ತಿದ್ದ ಪೂಜ್ಯಬುದ್ಧಿ

---

೩೧ ಅನುಲೆಯು ತಿಷ್ಯರಾಜನ ಹೆಂಡತಿಯ ತಂಗೆಯೆಂದು ಡಾ॥ ಕೋಪಲ್‌ಸ್ಟನ್ ಸಾಹೇಬರು ತಮ್ಮ "Buddhism Primitive and Present in Magadha and Ceylon" ಎಂಬ ಗ್ರಂಥದಲ್ಲಿ ಬರೆದಿರುವರು.

೩೨ ಪ್ರೊ॥ ಓಲ್ಡನ್‌ಬರ್ಗ್ ಸಾಹೇಬರು ವಿನಯಪಿತಕದ ಪ್ರಸ್ತಾವನೆಯಲ್ಲಿ ಹೀಗೆ ಬರೆದಿರುವರು:—"ಮಹೇಂದ್ರನೂ, ಅವನ ತಂಗಿಯಾದ ಸಂಗಮಿತ್ರೆಯೂ ಸಿಂಹಲದ್ವೀಪಕ್ಕೆ ಹೋಗಿ ಅಲ್ಲಿ ಬೌದ್ಧಧರ್ಮವನ್ನು ಪ್ರಸಾರ ಮಾಡಿದರೆಂಬೀ ಸಂಗತಿಯು ಎಂದೆಂದೂ ನಿಜವಲ್ಲ. ಆದರೆ ಅದು ಸ್ವಾಭಾವಿಕವಾಗಿ ಹಬ್ಬುತ್ತ ಹಬ್ಬುತ್ತ, ಅಲ್ಲಿಗೆ ಹೋಯಿತು." ಡಾ॥ ಕೋಪಲ್‌ಸ್ಟನ್ ಸಾಹೇಬರ ಮತವು ಇದಕ್ಕೆ ವಿರುದ್ಧವಾಗಿದೆ. ಇವರು ತಮ್ಮ ಮತವನ್ನು ಪುಷ್ಟೀಕರಿಸುವುದಕ್ಕಾಗಿ ಅನೇಕ ಆಧಾರಗಳನ್ನು ಕೊಟ್ಟಿರುತ್ತಾರೆ. ಅವುಗಳನ್ನು ಅವರ ಗ್ರಂಥದಲ್ಲಿ (ಪುಟ ೩೨೩ — ೪) ನೋಡ ಬಹುದು.



ಯೂ, ಮಾತ್ರವೇ ಕಾರಣವಾಗಿರಲಿಲ್ಲ. ಆದರೆ ರಾಜಪುತ್ರನಾಗಿದ್ದು ಕೂಡ ಅವನು ಧರ್ಮ ವಿಷಯದಲ್ಲಿ ತೋರಿಸಿದ ನಿಸ್ಸೀಮವಾದ ಭಕ್ತಿಯೂ, ಅದಕ್ಕೋಸ್ಕರ ಅವನು ಮಾಡಿದ ಸ್ವಾರ್ಥತ್ಯಾಗವೂ, ಅವನ ಶಾಂತವೂ ಗಂಭೀರವೂ ಆದ ವೃತ್ತಿಯೂ, ವಿಲಕ್ಷಣವಾದ ಬುದ್ಧಿಯೂ, ಅತರ್ಕಿತವಾದ ಸ್ಮರಣಶಕ್ತಿಯೂ, ಜ್ಞಾನಲಾಲಸೆಯೂ, ಸದಾಚರಣ ತತ್ಪರತೆಯೂ ಮುಂತಾದ ಈ ಗುಣಗಳೇ ಜನರ ಮನಸ್ಸಿನಲ್ಲಿ ಬೌದ್ಧಧರ್ಮವು ದೃಢವಾಗಿ ನಿಲ್ಲುವುದಕ್ಕೆ ಕಾರಣೀಭೂತವಾದುವು. ಈ ಗುಣಗಳು ಅವನಲ್ಲಿರದೆ ಹೋಗಿದ್ದರೆ, ಕೇವಲ ತಂದೆಯ ಮಹತ್ವದಿಂದಾಗಲೀ ತಿಷ್ಯನ ಮಧ್ಯಸ್ಥಿಕೆಯಿಂದಾಗಲೀ ಕಾರ್ಯವು ಇಷ್ಟು ಚೆನ್ನಾಗಿ ಎಂದೂ ಆಗುತ್ತಿದ್ದಿಲ್ಲ.[೩೩] ಈ ಕಾಲದಲ್ಲಿ ಮಹಿಂದನೂ ಸಂಗಮಿತ್ರೆಯೂ ಕ್ರಮವಾಗಿ ೨೦ ಮತ್ತು ೧೮ ವರ್ಷ ವಯಸ್ಸಿನವರಾಗಿದ್ದರು. ಇಷ್ಟು ಅಲ್ಪ ವಯಸ್ಸಿನಲ್ಲಿ ಅವರು ಧರ್ಮ ವಿಷಯದಲ್ಲಿ ತೋರಿಸಿದ ಆಸ್ಥೆಯೂ, ಸ್ವಾರ್ಥತ್ಯಾಗಬುದ್ಧಿಯೂ ಅಲೌಕಿಕವಾಗಿದ್ದುವೆಂದು ಹೇಳಲೇ ಬೇಕಾಗಿರುವುದು. ಇಂತಹ ಮನೋಹರವಾದ ಮೂರ್ತಿಗಳ ಮುಖಗಳಿಂದ ಹೊರಡುವ ಶೀತಲವಾದ, ಮಧುರವಾದ, ಭಕ್ತಿರಸದಿಂದ ತುಂಬಿ ತುಳುಕುವ ಉಪದೇಶಾಮೃತವನ್ನು ಆಕಂಠ ಪಾನಮಾಡಿ, ತೃಪ್ತರಾಗ ಬೇಕೆಂಬ ಸದಿಚ್ಛೆಯು ಯಾರಿಗೆ ತಾನೇ ಉತ್ಪನ್ನವಾಗಲಿಕ್ಕಿಲ್ಲ? ಆ ಬಂಧುಭಗಿನಿಯರನ್ನು ನೋಡಿ, ಪರಮೇಶ್ವರನು ಕೇವಲ ತನ್ನ ದೂತರನ್ನೇ ಮಾನವಜಾತಿಯ ಉದ್ಧಾರಕ್ಕೋಸ್ಕರ ಈ ಲೋಕಕ್ಕೆ ಕಳುಹಿದನೆಂದು ಜನರು ತಿಳಿದುದರಲ್ಲಿ ವಿಶೇಷ

---

೩೩ This Mahinda must have been a man of extraordinary power. He must have combined the tone and deportment of the calm hermit, the prodigious memory of the trained student, and the active capacities of a statesman. The ideal of Buddhism was embodied in him, as tradition represents him, and, if our history is trustworthy at all, he must have really embodied it in no small degree, or he could not have won so rapid and complete a success—Dr. Copleston's Buddhism Primitive, and Present p. 327.

Digitized by ROJA MUTHIAH RESEARCH LIBRARY

ವೇನೂ ಇಲ್ಲ. ಇಪ್ಪತ್ತು ವರ್ಷ ವಯಸ್ಸಿನ ಒಬ್ಬ ತರುಣನೂ, ಅದೇ ವಯಸ್ಸಿನ ತನ್ನ ತಂಗೆಯು ಸಹಾಯದಿಂದ ಸಿಂಹಲದ್ವೀಪದಂತಹ ಬಹು ದೂರ ಪ್ರದೇಶಕ್ಕೆ ಹೋಗಿ, ಅಲ್ಲಿ ಎರಡು ನೂರು ಲಕ್ಷ ಪರಧರ್ಮಾವಲಂಬಿಗಳು ಕೇವಲ ಉಪದೇಶದ ಬಲದಿಂದಲೇ, ಎಷ್ಟೋ ವರ್ಷಗಳ ವರೆಗೆ ಅತಿ ಪ್ರೀತಿಯಿಂದ ಹಿಂಬಾಲಿಸಿದ ತಮ್ಮ ಧರ್ಮವನ್ನು ಬಿಟ್ಟು, ಹೊಸ ಧರ್ಮವನ್ನು ಸ್ವೀಕರಿಸುವಂತೆ ಪ್ರೇರಣೆ ಮಾಡಿದ ಈ ಸಂಗತಿಯು ಸಾಮಾನ್ಯವಲ್ಲ. ಇದು ಜಗತ್ತಿನೊಳಗಿನ ಅತ್ಯದ್ಭುತ ಚಮತ್ಕಾರಗಳಲ್ಲಿ ಒಂದಾಗಿ ಎಣಿಸಲ್ಪಡುವಷ್ಟು ಯೋಗ್ಯತೆಯುಳ್ಳದಾಗಿದೆ ಎಂದೆನ್ನಲು ವಿಚಾರಶೀಲರಾದವರು ಸಂದೇಹಿಸಬಹುದೆಂದು ನಮಗೆ ತೋರುವುದಿಲ್ಲ.

ಸಂಗಮಿತ್ರೆಯು ತನ್ನೊಂದಿಗೆ ಇನ್ನೊಂದು ಅಮೌಲ್ಯವಾದ ಪದಾರ್ಥವನ್ನು ಸಿಂಹಲದ್ವೀಪಕ್ಕೆ ತೆಗೆದುಕೊಂಡು ಹೋದಳು. ಬುದ್ಧಗಯೆಯಲ್ಲಿ ಯಾವ ಅಶ್ವತ್ಥ ವೃಕ್ಷದ ಕೆಳಗೆ ಶಾಕ್ಯಗೌತಮನಿಗೆ (ಬುದ್ಧ) ದಿವ್ಯಜ್ಞಾನವು ಪ್ರಾಪ್ತವಾಯಿತೋ, ಮತ್ತು ಅಂದಿನಿಂದ ಯಾವುದಕ್ಕೆ 'ಬೋಧಿವೃಕ್ಷ' ಅಥವಾ 'ಜ್ಞಾನವೃಕ್ಷ' ಎಂಬ ಹೆಸರು ದೊರೆಯಿತೋ, ಆ ವೃಕ್ಷದ ಒಂದು ಟೊಂಗೆಯನ್ನು ಅವಳು ತನ್ನೊಂದಿಗೆ ತೆಗೆದುಕೊಂಡಿದ್ದಳು. ಈ ಟೊಂಗೆಯಿಂದ ಉತ್ಪನ್ನವಾದ ಪ್ರಚಂಡವೃಕ್ಷವು ಈಗ ಎರಡು ಸಾವಿರ ವರ್ಷಗಳ ಮೇಲೆಯೂ ಅಸ್ತಿತ್ವದಲ್ಲಿದೆ. ಪೃಥ್ವಿಯಲ್ಲೆಲ್ಲಾ ಇದರಷ್ಟು ಪ್ರಾಚೀನ ವೃಕ್ಷವಿಲ್ಲ. ಕ್ರಿ. ಶ. ಪೂ. ೨೪೫ನೆಯ ವರ್ಷದಲ್ಲಿ ಸಂಗಮಿತ್ರೆಯು ಈ ಗಿಡವನ್ನು ನೆಟ್ಟಿದ್ದಳು; ಹೀಗಾದುದರಿಂದ ಈಗ ಆ ಗಿಡವು ೨೧೪೭ ವರ್ಷ ವಯಸ್ಸಿನದಾಗಿರುವುದು. ಆ ಗಿಡವು ಇಷ್ಟು ಹಳೆಯದಾದರೂ ಆ ಮರವು ಇನ್ನೂ ಬೆಳೆಯುತ್ತಿರುವುದಂತೆ. ಈ ವೃಕ್ಷದ ಸಂಬಂಧವಾಗಿ ಸರ್ ಇಮರ್ಸನ್ ಟೆನೆಂಟ್ ಸಾಹೇಬರು ಹೀಗೆ ಬರೆದಿರುವರು:—

"ಸೆನೆಗಾಲ್ ದೇಶದ 'ಬೆವೊಬೆಬ್' ಮರಕ್ಕೂ, ಟಾಸ್ಮೆನಿಯ ದೇಶದ 'ಯುಕೆಲಿಪ್ಟಸ್' ಮರಕ್ಕೂ, ಒರೊಟಾವಾ ದೇಶದ 'ಡ್ರೆಗನ್' ವೃಕ್ಷಕ್ಕೂ,



ಕೆಲಿಫೊರ್ನಿಯದ 'ವೆಲ್ಲಿಂಗ್‌ಟೊನಿಯ' ಎಂಬ ಮರಕ್ಕೂ, ಒಂದು ಸಾವಿರದಿಂದ ನಾಲ್ಕು ಸಾವಿರಗಳ ವರೆಗಿನ ವರ್ಷ ಪ್ರಾಯವೆಂದು ಭಾವಿಸಿರುವರು. ಇದು ಬರಿಯ ಊಹನೆಯೇ ಹೊರತು ಬೇರೆ ಅಲ್ಲ; ಆದರೆ ಬೋಧಿವೃಕ್ಷದ ಪ್ರಾಯವು ತಕ್ಕ ಆಧಾರಗಳಿಂದ ನಿರ್ಧರಿಸಿರುವುದಲ್ಲದೆ, ಪರಂಪರೆಯ ಪ್ರತಿತಲಾಂತರದವರು ಅದನ್ನು ಸುರಕ್ಷಿತವಾಗಿ ಇರಗೊಡಿಸುವುದಕ್ಕೆ ಆಸಕ್ತಿಯನ್ನು ತೋರಿಸಿರುತ್ತಾರೆ; ಅದರ ಪರಿವರ್ತನಗಳ ಕಥನವು ಮಾನುಷವರ್ಗದ ಹಸ್ತದಿಂದ ದತ್ತವಾದುವುಗಳೊಳಗೆ ಅತ್ಯಂತ ವಿಶ್ವಸನೀಯವಾದ ಇತಿಹಾಸಗಳಲ್ಲಿ ಭದ್ರವಾಗಿದೆ. ಎಲ್ಲರ್‌ಸ್ಲಿಯ 'ಓಕ್' ವೃಕ್ಷವು, ಇದರೊಡನೆ ಸರಿಹೋಲಿಸುವಾಗ, ಬರಿಯ ಸಸಿಯಾಗಿರುವುದು; ಮತ್ತು ವಿಂಡ್ಸರ್ ಕಾಡಿನಲ್ಲಿದ್ದ 'ಕೊಂಕರರ್ ಓಕ್' ವೃಕ್ಷಕ್ಕೆ ಈ ಬೋಧೀ ವೃಕ್ಷದ ಅರ್ಧ ವಯಸ್ಸಾಗಲಿಕ್ಕಿಲ್ಲ; ಇವುಗಳಲ್ಲಿ ಅತಿ ಹಳೆಯ ಮರಗಳಿಗಿಂತ ಬೋಧೀ ವೃಕ್ಷವು ಒಂದು ಶತಮಾನಕ್ಕಾದರೂ ಮುದಿಯಾಗಿರುವುದು. ಮತ್ತು ಆ ವೃಕ್ಷವು ಎಂದಿಗೂ ಹಸುರೇ ಆಗಿ ಪ್ರಬಲಿಸುವುದೆಂದು ಆ ಕಾಲದಲ್ಲಿ ಮಾಡಿದ ಪ್ರವಾದನೆಯನ್ನು ಅದು ಸಮರ್ಥಿಸುವುದು."[೩೪]

---

[೩೪] "Ages varying from one to four thousand years have been assigned to the Baobabs of Senegal, the Eucalyptus of Tasmania, the Dragon tree of Orotava, the Wellingtonia of California, and the Chestnut of Mount Etna. But all these estimates are matter of conjecture; whereas the age of the Bo-tree is a matter of record, its conservancy has been an object of solicitude to successive dynasties, and the story of its vicissitudes has been preserved in a series of continuous chronicles, among the most authentic that have been handed down by mankind. Compared with it the oak of Ellerslie is but a sapling, and the Conqueror's oak in Windsor forest barely numbers half its years........The Bo-tree is older than the oldest of these by a century, and would almost seem to varify the prophecy pronounced when it was planted that it would flourish and be green for ever. (Ceylon II. p. 613 et Seq.)

Digitized by ROJA MUTHIAH RESEARCH LIBRARY

ಭಕ್ತರಾದ ಬೌದ್ಧ ಗ್ರಂಥಕಾರರು, ಈ ವೃಕ್ಷವು ಚಿರಕಾಲ ಬಾಳುವುದೆಂದು ಅಲಂಕಾರವನ್ನಿಟ್ಟು ಬರೆದಿರುವರು. ಈ ಬೋಧೀ ವೃಕ್ಷವು ಬೌದ್ಧಧರ್ಮದ ನಿದರ್ಶಕವೆಂದೂ, ತದ್ವಾರಾ ಬೌದ್ಧ ಧರ್ಮವು ಅವಿನಾಶವಾದುದೆಂದೂ, ಅವರ ಈ ಅಲಂಕಾರದ ಧ್ವನಿಯಾಗಿದೆ. ಸಿಂಹಲ ದ್ವೀಪದ ಮಟ್ಟಿಗೆ ವಿಚಾರ ಮಾಡಿದರೆ ಇದರೊಳಗಣ ಸ್ಪಷ್ಟಾರ್ಥವೂ, ಧ್ವನ್ಯರ್ಥವೂ, ಎರಡೂ ನಿಜವಾಗಿರುವಂತೆ ತೋರುತ್ತಿದೆ. ಏಕೆಂದರೆ—ಸಂಗಮಿತ್ರೆಯು ಸಿಂಹಲ ದ್ವೀಪಕ್ಕೆ ಒಯ್ದ ಬೋಧೀ ವೃಕ್ಷದ ಶಾಖೆಯು ಹೇಗೆ ಬೆಳೆಯುತ್ತ ಈಗಲೂ ಪೂರ್ವದಂತೆಯೇ ಇರುವುದೋ, ಹಾಗೆಯೇ ಮಹಿಂದನು ಒಯ್ದ ಬೌದ್ಧಧರ್ಮದ ಶಾಖೆಯೂ ಅಲ್ಲಿ ಸ್ಥಿರವಾಗಿ ನಿಂತಿದೆ. ಹಿಂದುಸ್ಥಾನದ ವಿಷಯದಲ್ಲಿ ಮಾತ್ರ ಇದರ ಸತ್ಯತೆಯು ಯಾವ ಬಗೆಯಿಂದಲೂ ಕಂಡು ಬರುವುದಿಲ್ಲ. ನಮ್ಮ ದೇಶದಲ್ಲಿ ಬೌದ್ಧ ಧರ್ಮವೂ ಉಳಿಯಲಿಲ್ಲ; ಮಾತ್ರವಲ್ಲದೆ ಮೊದಲಿನ ಬೋಧೀ ವೃಕ್ಷವು ಸಹ ೧೮೫೫ನೇ ಇಸವಿಯಲ್ಲಿ ನಷ್ಟವಾಯಿತೆಂದು ಹೇಳುವರು.[೩೫] ಚೀನೀ ಪ್ರವಾಸಿಗಳು ಈ ಮೊದಲನೆಯ ವೃಕ್ಷದ ವರ್ಣನೆಯನ್ನು ಬರೆದು ಇಟ್ಟಿರುವರು. ಇದೇ ವೃಕ್ಷದ ಒಂದು ಶಾಖೆಯನ್ನು ಬ್ರಹ್ಮ ದೇಶದ ರಾಜನು ೧೮೪೪ನೆಯ ಇಸವಿಯಲ್ಲಿ ತನ್ನ ದೇಶಕ್ಕೆ ತರಿಸಿಕೊಂಡನೆಂದು ಹೇಳುವರು. ಈ ಮೂಲಬೋಧೀವೃಕ್ಷದ ದರ್ಶನಕ್ಕಾಗಿ ಬೌದ್ಧರಾಜರು ತುಂಬಾ ಪೂಜ್ಯತಾಭಾವವನ್ನುಳ್ಳವರಾಗಿ, ಸಾವಿರಾರು ಹರದಾರಿ ದೂರದಿಂದ ಬಂದು, ಅದರ ಮೇಲೆ ಮಣುವಿನ ಮೇಲೆ ಮಣು ಹಾಲಿನ, ಮತ್ತು ಅತ್ತರೇ ಮೊದಲಾದ ಸುಗಂಧದ್ರವ್ಯಗಳ ಕೊಡಗಳನ್ನು ಸುರಿಸುತ್ತಿದ್ದರು. ಈ ದೇಶದಲ್ಲಿ ಬೌದ್ಧಧರ್ಮವು ಲೋಪವಾಗಲು, ಈ ವೃಕ್ಷವು ಸಹ ವಿಪನ್ನಾವಸ್ಥೆಗೆ ಬೇಸತ್ತು, ತನ್ನ ಜಡ ದೇಹವನ್ನು ಬಿಟ್ಟಿತೋ ಏನೋ ಎಂಬಂತೆ ತೋರುತ್ತಿದೆ. ಈಚೆಗೆ ಕೆಲವು ವರ್ಷಗಳ ಪೂರ್ವದಲ್ಲಿ ಅದೇ ಸ್ಥಳದಲ್ಲಿ ಒಂದು ಹೊಸದಾದ ಟೊಂಗೆಯನ್ನು ನೆಟ್ಟಿದ್ದರು.

[೩೫] ಬಾಬು ಶ್ರೀಕೃಷ್ಣ ವಿಹಾರೀ ಸೇನ ಪ್ರಣೀತ ಅಶೋಕ ಚರಿತ್ರ ಪು. ೭೬.



ಅದು ಈಗ ಬೆಳೆದು ದೊಡ್ಡದಾಗಿ ತೋರುತ್ತಿದೆ. ಆದರೆ ಈ ವೃಕ್ಷವು ಪ್ರಾಚೀನಕಾಲದ ಬೋಧೀ ವೃಕ್ಷವಲ್ಲವೆಂಬುದನ್ನು ನಮ್ಮ ವಾಚಕರಿಗೆ ಹೇಳುವ ಆವಶ್ಯಕತೆಯಿಲ್ಲ.

ಅಶೋಕನಿಗೆ ಬಹಳ ಮಕ್ಕಳಿದ್ದರೆಂದು ಅವನ ಸ್ತಂಭಲೇಖಗಳಿಂದ ತಿಳಿದು ಬರುತ್ತಿದೆ. ಏಕೆಂದರೆ—ಆ ಲೇಖಗಳಲ್ಲಿ ಒಂದು ಕಡೆ 'ಬಾಲಕಾನಾಮಪಿಚಮೇ' (ನನ್ನ ಮಕ್ಕಳದೂ) ಎಂಬ ಬಹುವಚನದ ಶಬ್ದಗಳಿವೆ. ನಮ್ಮ ಪುರಾಣ ಗ್ರಂಥಗಳಲ್ಲಿ ಅಶೋಕನ ತರುವಾಯ ಅವನ ಮಗನಾದ ಸುಯಶನೆಂಬುವನು ಪಟ್ಟಕ್ಕೆ ಬಂದನೆಂದು ಬರೆದಿದೆ. ಅಶೋಕನ ಧರ್ಮವರ್ಧನನೆಂಬ ಮಗನು ಆ ಗಾಂಧಾರದ (ಕಂದಹಾರ) ಮುಖ್ಯಾಧಿಕಾರಿಯಾಗಿ ಹೋಗಿದ್ದನೆಂದು ಹುಯನ್‌ತ್ಸಾಂಗನು ಬರೆದಿರುವನು. ದೀಪವಂಶ, ಮಹಾವಂಶ ಗ್ರಂಥಗಳಲ್ಲಿ ಪುತ್ರನಾದ ಮಹಿಂದನೂ, ಕನ್ಯೆಯಾದ ಸಂಗಮಿತ್ರೆಯೂ ಬೌದ್ಧಧರ್ಮದ ದೀಕ್ಷೆಯನ್ನು ಸ್ವೀಕರಿಸಿ, ಸಿಂಹಲ ದ್ವೀಪದಲ್ಲಿ ಆ ಧರ್ಮವನ್ನು ಪ್ರಸಾರ ಮಾಡಿದರೆಂದು ಬರೆದಿದೆ. ಆದರೆ ಮಹಿಂದನು ಅಶೋಕನ ಮಲತಮ್ಮನೆಂದು ಹುಯನ್‌ನು ಹೇಳಿರುವನು.[೩೬] ಅಶೋಕ ಅವದಾನವನ್ನು ನೋಡಲಾಗಿ ಅವನಿಗೆ ಕುನಾಲನೆಂಬ ಒಬ್ಬ ಮಗನಿದ್ದನೆಂದು ತೋರುತ್ತಿದೆ. ಒಂದು ಸ್ಥಲದಲ್ಲಿ ಕುನಾಲನ ವೃತ್ತಾಂತವನ್ನು ಈ ಕೆಳಗಿನಂತೆ ಕೊಟ್ಟಿರುವರು:—[೩೭]

ಈ ಬಾಲಕನ ಕಣ್ಣುಗಳು ಕುನಾಲ ಪಕ್ಷಿಯ ಕಣ್ಣುಗಳಂತೆ ಹೊಳಪು ಉಳ್ಳವುಗಳಾಗಿಯೂ ಕಪ್ಪಾಗಿಯೂ ಇದ್ದುದರಿಂದ, ಅವನಿಗೆ ಕುನಾಲನೆಂಬ ಹೆಸರು ಬಂದಿತ್ತು. ಅವನು ಕಾಂಚನಮಾಲೆ ಎಂಬ ಕುಮಾರಿಯನ್ನು ಲಗ್ನಮಾಡಿಕೊಂಡಿದ್ದನು. ಆದರೆ ಚಿಕ್ಕಂದಿನಿಂದಲೂ ತಂದೆಯ ಮುಖಾಂತರವಾಗಿ ಅವನಿಗೆ

[೩೬] Beal's Si-yu-Ki Vol II pp. 91-3; et 246-7.

[೩೭] ಮೌರ್ಯಸಮ್ರಾಟ ೯ ಅಶೋಕ— ಸುಹಿತ್ಯ (ಬಂಗಾಲೀ ಮಾಸಿಕ ಪುಸ್ತಕ); ಅಶೋಕ ಅವದಾನದಲ್ಲಿಯೂ ಸಾಧಾರಣವಾಗಿ ಇದೇ ವೃತ್ತಾಂತವುಂಟು.

Digitized by ROJA MUTHIAH RESEARCH LIBRARY

ಧರ್ಮಶಿಕ್ಷಣವು ದೊರೆಯುತ್ತಿದ್ದ ಕಾರಣ, ಮುಂದೆ ಅವನು
ಸಂಸಾರದ ಮೇಲಣ ತನ್ನ ಲಕ್ಷ್ಯವನ್ನು ತಪ್ಪಿಸಿ ವಿರಕ್ತನಾದನು.
ಆತನ ಸ್ವಭಾವವು ಅತಿ ಸೌಮ್ಯವಾಗಿದ್ದುದರಿಂದ, ಆತನು ರಾಜ್ಯಕಾ
ರಭಾರವೇ ಮೊದಲಾದ ವಿಷಯಗಳಲ್ಲಿ ಈಷತ್ತಾದರೂ ಕೈಹಾಕದೆ,
ಯಾವಾಗಲೂ ಧರ್ಮಚಿಂತನೆಯಲ್ಲಿಯೂ ಧರ್ಮಚರ್ಚೆಯ
ಲ್ಲಿಯೂ ಮಗ್ನನಾಗಿ ಇರುತ್ತಿದ್ದನು. ಇವನ ಮಲತಾಯಿಯಾದ
ತಿಷ್ಯರಕ್ಷಿತೆಯ ಕಣ್ಣು ಇವನ ಮೇಲೆ ಬಿದ್ದು, ಅವಳು ಇವನ
ಸೌಂದರ್ಯವನ್ನು ನೋಡಿ, ಕಾಮವಾಸನಾ ಪೀಡಿತೆಯಾದಳು.
ಅವಳು ಅವನ ಮನಸ್ಸನ್ನು ಆಕರ್ಷಿಸಿಕೊಳ್ಳುವುದಕೋಸ್ಕರವಾಗಿ
ಅನೇಕ ಉಪಾಯಗಳನ್ನು ಮಾಡಿದರೂ ಅವುಗಳಿಂದ ಏನೂ
ಉಪಯೋಗವಾಗದುದರಿಂದ, ಕೊನೆಗೆ ಕ್ರೋಧಗೊಂಡು ಅವ
ನನ್ನು ಕೊಲ್ಲುವ ಆಲೋಚನೆಯನ್ನು ಮಾಡ ತೊಡಗಿದಳು.
ಅವಳು ಅವನ ವಿಷಯವಾಗಿ ರಾಜನಿಗೆ ಇಲ್ಲದ ಸಲ್ಲದ ದೂರುಗ
ಳನ್ನು ಹೇಳಿ, ಅವನನ್ನು ತಕ್ಷಶಿಲೆಯ "ಸುಭೆ"ಯ ಮೇಲೆ ಕಳುಹಿ
ದಳು. ತರುವಾಯ ಕೆಲವು ದಿವಸಗಳಾದ ಬಳಿಕ, ಒಂದು ದಿನ
ವಿನೋದವಾಗಿ ಮಾತನಾಡುತ್ತ ಅವಳು ರಾಜನ ಕೈಯಿಂದ ರಾಜ
ಮುದ್ರೆಯನ್ನು ಉಪಾಯವಾಗಿ ತೆಗೆದುಕೊಂಡು, ತಕ್ಷಶಿಲೆಯ
ಒಬ್ಬ ಅಧಿಕಾರಿಗೆ ರಾಜನ ಹೆಸರಿನಿಂದ "ರಾಜಪುತ್ರ ಕುನಾಲನ
ಎರಡೂ ಕಣ್ಣುಗಳನ್ನು ಕಿತ್ತು, ಅವನನ್ನು ತಕ್ಷಶಿಲೆಯಿಂದ ಹೊರಗೆ
ಹಾಕ ಬೇಕು" ಎಂದು ರಾಜಮುದ್ರೆಯನ್ನು ಹಾಕಿ ರಾಯಸವನ್ನು
ಬರೆದಳು. ಇತ್ತ ಕುನಾಲನು ಸುಸ್ವಭಾವದವನಾದುದರಿಂದ,
ಪ್ರಜೆಗಳಿಗೂ ತನ್ನ ಕೈಕೆಳಗಿನ ಅಧಿಕಾರಿಗಳಿಗೂ ಅತ್ಯಂತ ಪ್ರಿಯ
ನಾಗಿದ್ದನು. ಹೀಗಾದುದರಿಂದ ಇಂತಹ ವಿಲಕ್ಷಣವಾದ ಈ
ರಾಜಾಜ್ಞೆಯನ್ನು ನೋಡಿ ಅವರಿಗೆ ಹೇಳಲಾರದಷ್ಟು ಆಶ್ಚರ್ಯ
ವುಂಟಾಯಿತು. ರಾಜಾಜ್ಞೆ ಬಂದಿದ್ದರೂ ಅದನ್ನು ಪಾಲಿಸಲು
ಅವರಿಗೆ ಧೈರ್ಯವಾಗಲಿಲ್ಲ. ಕುನಾಲನನ್ನು ಕಷ್ಟಪಡಿಸಲು
ಅವರ ಕೈ ಏಳದೆ ಹೋಗುವುದಾಯಿತು. ಕಡೆಗೆ ಕುನಾಲನೇ



ಪಿತ್ರಾಜ್ಞೆಯನ್ನು ಮನ್ನಿಸಿ ಅದನ್ನು ಕೊನೆಗಾಣಿಸುವವರಿಗೆ ಬಹು
ಮಾನವನ್ನು ಕೊಡುವೆನೆಂದು ಸಾರಿಸಿದನು. ಆದರೂ ಒಳ್ಳೆಯ
ವರಾದ ಯಾರೂ ಸಿದ್ಧರಾಗಲಿಲ್ಲ. ಕಡೆಗೆ ಬಹುಮಾನದ ಆಶೆ
ಗಾಗಿ ಚಾಂಡಾಲನೊಬ್ಬನು ಈ ಕಾರ್ಯವನ್ನು ಮಾಡಲು ಸಿದ್ಧ
ನಾದನು. ಸುತ್ತುಮುತ್ತು ಪ್ರಜೆಗಳೆಲ್ಲಾ ಕ್ಲೇಶಪಡುತ್ತ ಕಣ್ಣೀರ
ನ್ನೊರಸುತ್ತ ನಿಂತಿರಲು, ಕುನಾಲನು ಗಂಭೀರತೆಯಿಂದ ಚಾಂಡಾ
ಲನಿಗೆ ತನ್ನ ಕಣ್ಣುಗಳನ್ನು ಕೀಳಲು ಅಪ್ಪಣೆ ಮಾಡಿದ ಈ ದೃಶ್ಯವು
ಹೃದಯದ್ರಾವಕವಾಗಿತ್ತು. ಒಂದು ಕಣ್ಣನ್ನು ಕೀಳಲು ಅದನ್ನು
ಕೈಯಲ್ಲಿ ತೆಗೆದುಕೊಂಡು, ಜನರ ಕಡೆಗೆ ತಿರುಗಿ ಕುನಾಲನು
ಅದನ್ನು'ಉದ್ದೇಶಿಸಿ—"ಎಲೈ ಹತಭಾಗ್ಯವಾದ ಮಾಂಸಪಿಂಡವೇ!
ಈ ವರೆಗೆ ನೋಡುತ್ತಿದ್ದ ಸುಂದರವಾದ ಮೂರ್ತಿಗಳು ಈಗ
ಲಿನ್ನು ಮರಳಿ ನಿನ್ನ ದೃಷ್ಟಿಗೆ ಬೀಳುವುವೇ? ವ್ಯರ್ಥವಾಗಿ ನಾನು
'ನನ್ನದು, ನನ್ನದು' ಎಂದು ಹಂಬಲಿಸಿದೆನು! ಅಯ್ಯೋ!!
ನನ್ನಂತಹ ಮೂಢರು ಯಾರೂ ಇಲ್ಲ!" ಇಷ್ಟರಲ್ಲಿ ಎರಡನೆಯ
ಕಣ್ಣು ತೆಗೆದರು. ಆಗ ಕುನಾಲನು ಇಂತೆಂದನು—"ಎಲ್ಲಾ ಪಾ
ಪವೂ ಕಣ್ಣುಗಳಿಂದಲೇ ಉಂಟಾಗುವುದು. ಆದುದರಿಂದ ಅವು
ಹೋದುದಕ್ಕಾಗಿ ಸಂತೋಷ ಪಡುವುದೇ ಒಳ್ಳೆಯದು. ಚರ್ಮ
ಚಕ್ಷುಗಳು ಹೋಗಿ ಅವುಗಳ ಬದಲಾಗಿ ಜ್ಞಾನಚಕ್ಷುಗಳು
ಬಂದುವು. ಇದೇನು ಸಾಮಾನ್ಯವಾದ ಲಾಭವೋ? ರಾಜನು
ನನ್ನನ್ನು ತ್ಯಜಿಸಿದನು; ಆದರೆ ಧರ್ಮರಾಜನು ನನ್ನನ್ನು ಪುತ್ರ
ನನ್ನಾಗಿ ತಿಳಿದು ಆಲಿಂಗಿಸಿರುವನು. ಈ ಕಷ್ಟಮಯವಾದ ರಾಜ್ಯ
ದೊಳಗಣ ಉಚ್ಚಪದವಿಯಿಂದ ನಾನು ಭ್ರಷ್ಟನಾದೆನು; ಆದರೆ
ಅತ್ಯಾನಂದಮಯವಾದ ಧರ್ಮರಾಜ್ಯದಲ್ಲಿ ಪ್ರವೇಶವನ್ನು ಮಾ
ಡಿದೆನು."

ತರುವಾಯ ಕುನಾಲನು ತನ್ನ ಮಡದಿಯೊಂದಿಗೆ ಭಿಕ್ಷೆ
ಬೇಡುತ್ತಬೇಡುತ್ತ ಪಾಟಲೀಪುತ್ರಕ್ಕೆ ಬರಲು ಹೊರಟು, ವೀಣೆ

Digitized by ROJA MUTHIAH RESEARCH LIBRARY

ಯನ್ನು ಬಾರಿಸುತ್ತಲೂ, ಭಕ್ತಿಪರವಾದ ಹಾಡುಗಳನ್ನು ಹಾಡು
ತ್ತಲೂ, ತನ್ನ ತಂದೆಯ ರಾಜಧಾನಿಯಲ್ಲಿ ಅರಮನೆಯ ಸಮೀಪಕ್ಕೆ
ಬಂದನು. ರಾಜಗೃಹದ ಮುಂದೆ ಹಾಡುತ್ತಿರಲು ರಾಜನು ಆ
ವೀಣಾವಾದನವನ್ನೂ ಸಂಗೀತವನ್ನೂ ಕೇಳಿ, ಮುದಿತನಾಗಿ ಅವ
ನನ್ನು ಒಳಕ್ಕೆ ಕರೆಯಿಸಿದನು. ಆದರೆ ಅವನು ತನ್ನ ಮಗನಾದ
ಕುನಾಲನೆಂದು ರಾಜನು ಗುರುತು ಹಿಡಿಯಲಾರದೆ ಹೋದನು.
ರಾಜನು, "ನೀನು ಯಾರು? ಎಲ್ಲಿಯವನು? ಇಲ್ಲಿಗೆ ಏಕೆ ಬಂದಿ
ರುವೆ?" ಮುಂತಾದ ಪ್ರಶ್ನೆಗಳನ್ನು ಮಾಡಲು, ಅವನು ಹಿಂದೆ
ನಡೆದ ಎಲ್ಲಾ ಸಂಗತಿಗಳನ್ನು ತಿಳುಹಿಸಿದನು. ಅದನ್ನು ಕೇಳಿ
ರಾಜನು ಸಂತಪ್ತನಾಗಿ ಕೂಡಲೇ ತಿಷ್ಯರಕ್ಷಿತೆಯನ್ನು ಸಂಹರಿಸು
ವಂತೆ ಆಜ್ಞೆ ಮಾಡಿದನು. ಅದನ್ನು ಕೇಳಿ, ಕುನಾಲನು ಸಾಷ್ಟಾಂಗ
ವೆರಗಿ, ಅತಿ ನಮ್ರನಾಗಿ ಇಂತೆಂದನು—"ಪ್ರಭೋ, ಸ್ತ್ರೀವಧೆ
ಮಾಡುವುದು ಸರ್ವಥಾ ನ್ಯಾಯವಲ್ಲ. ಸ್ತ್ರೀಹತ್ಯವು ಭಯಂಕ
ರವಾದ ಪಾಪಗಳಲ್ಲಿ ಒಂದಾಗಿದೆ. ಅಪರಾಧಿಗಳ ಮೇಲೆ ದಯ
ಮಾಡುವುದಕ್ಕಿಂತ ಹೆಚ್ಚಾದ ಎರಡನೆಯ ಔದಾರ್ಯವಿಲ್ಲವೆಂದು
ತಥಾಗತನಾದ ಧೈರ್ಯನ ವಚನವುಂಟು," ಮತ್ತೆ ಪಿತನ
ಕಾಲಿನ ಮೇಲೆ ತಲೆಯನ್ನಿಟ್ಟು ನಮಸ್ಕರಿಸಿ ಕುನಾಲನು—"ಮಹಾ
ರಾಜರೇ, ಕಣ್ಣು ಹೋದುದಕ್ಕಾಗಿ ನನಗೆ ಲೇಶವಾದರೂ ಕ್ಲೇಶ
ವುಂಟಾಗುವುದಿಲ್ಲ. ಇದಲ್ಲದೆ ನನಗೆ ಅದರಿಂದ ಯಾತನೆಯೂ
ಉಂಟಾಗುವುದಿಲ್ಲ. ಆದುದರಿಂದ ದಯವಿಟ್ಟು ನನಗಾಗಿ ಮಾ
ತೆಯ ಮೇಲೆ ಸಿಟ್ಟು ಮಾಡಬೇಡಿರಿ. ನನ್ನ ದೈವದಲ್ಲಿದ್ದಂತೆ
ಆಯಿತು. ಪೂರ್ವ ಜನ್ಮದಲ್ಲಿ ನಾನು ಪಾಪ ಮಾಡಿರಬಹುದು,
ಆದುದರಿಂದಲೇ ಈ ಜನ್ಮದಲ್ಲಿ ನನಗೆ ಅದರ ಪ್ರಾಯಶ್ಚಿತ್ತವನ್ನು
ಭೋಗಿಸ ಬೇಕಾಯಿತು. ಒಡೆಯರೇ, ನಾನು ದಿಟವಾಗಿ ಹೇಳು
ವೆನು. ನನ್ನ ಮಾತಿನ ಮೇಲೆ ತಮಗೆ ವಿಶ್ವಾಸವಿಲ್ಲದಿದ್ದರೆ—'ಎಲೈ
ಕಣ್ಣುಗಳೇ! ನೀವು ಪೂರ್ವವತ್ತಾಗಿರಿ!'" ಎಂದ ಕೂಡಲೇ ಅವು



ಮೊದಲಿನಂತಾದುವು.[೩೮] ಈ ಚಮತ್ಕಾರವನ್ನು ನೋಡಿ, ಅಶೋ
ಕನ ತಮ್ಮನಾದ ವೀತಾಶೋಕನಿಗೆ ಪಶ್ಚಾತ್ತಾಪ ಉಂಟಾಗಿ,
ಅವನು ಆಚಾರ್ಯನಾದ ಉಪಗುಪ್ತನ ಮಠಕ್ಕೆ ಹೋಗಿ ಅಲ್ಲಿಯೇ
ನಿಂತನು. ಮುಂದೆ ಗುಣಾಕರನೆಂಬ ಯತಿಯಿಂದ ದೀಕ್ಷೆಯನ್ನು
ತೆಗೆದುಕೊಂಡನು. ಈ ಕಾಲದಲ್ಲಿ ನಿರ್ಗ್ರಂಥನೆಂಬ ಎರಡನೆಯ
ಧರ್ಮಪಂಥವು ಇದ್ದಿತು. ಇದರೊಳಗಿನವನೊಬ್ಬನು ಬೌದ್ಧ
ಧರ್ಮವನ್ನು ನಿಂದಿಸ ತೊಡಗಿದ್ದನು. ತಾನು ಸಿಂಹಾಸನದ ಮೇಲೆ
ಕುಳಿತಂತೆಯೂ, ಬುದ್ಧನು ತನ್ನ ಕಾಲುಗಳ ಮೇಲೆ ಹೊರಳಾಡು
ತ್ತಿರುವಂತೆಯೂ ಚಿತ್ರವನ್ನು ಬರೆಯಿಸಿ, ಅವನು ಅದನ್ನು ಪಂಡು
ವರ್ಧನ ಪ್ರಾಂತದಲ್ಲಿ ಪ್ರಸಿದ್ಧಗೊಳಿಸಿದ್ದನು. ಇದರಿಂದ ಅಶೋಕ
ನಿಗೆ ಸಿಟ್ಟು ಬಂದು, ಅವನು ಆ ನಿರ್ಗ್ರಂಥಿಯನ್ನು ಹಿಡಿದು ಕೊಟ್ಟ
ವರಿಗೆ ಬಹುಮಾನ ಕೊಡುವೆನೆಂದು ಡಂಗುರವನ್ನು ಸಾರಿಸಿದ್ದನು.
ಬಹುಮಾನದ ಆಶೆಗಾಗಿ ಒಬ್ಬ ಅಹೀರನು ವೀತಾಶೋಕನೇ
ನಿರ್ಗ್ರಂಥಿಯೆಂದು ತಿಳಿದು, ಅವನನ್ನು ಕೊಂದು, ಅವನ ತಲೆ

---

೩೮ Burnouf's introduction p. 403 et seq. ಮೌರ್ಯಸಮ್ರಾಟ್
ಅಶೋಕ ಪು. ೯ ಅಂಕ ೧೨. "Buddhist poetry has nowhere glori-
fied in more beautiful fashion, forgiveness, and the love of
enemies, than in the narrative of Kunal" [Oldenberg's Buddha
p. 294]. ಸೇನಪ್ರಣೀತ ಅಶೋಕ ಚರಿತ್ರ ಪುಟ ೭೭. ಧರ್ಮ ವಿಷಯದಲ್ಲಿ ಆಸ್ಥೆ
ಯೂ, ಸ್ವಧರ್ಮಪ್ರಸಾರಕ್ಕೋಸ್ಕರ ಮನಮುಟ್ಟಿ ಮಾಡಿದ ಪರಿಶ್ರಮವೂ ಈ ಎರಡು ಸಂಗ
ತಿಗಳಲ್ಲಿ ಅಶೋಕನ ತುಲನೆಯನ್ನು ಪ್ರಸಿದ್ಧ ಕ್ರಿಸ್ತ ಬಾದಶಹನಾದ ಕಾನ್‌ಸ್ಟಂಟೈನ್
ನೊಂದಿಗೆ ಮಾಡಿರುವರು. ಇಷ್ಟೇ ಅಲ್ಲದೆ ಗೃಹಸಂಬಂಧವಾದ ಸುಖದುಃಖಗಳಲ್ಲಿ ಸಹ
ಇವರೊಳಗೆ ಸಾಮ್ಯವಿತ್ತೆಂದು ಜನರಲ್ ಕನ್ನಿಂಗ್‌ಹ್ಯಾಮ್ ಸಾಹೇಬರು ಅಭಿಪ್ರಾಯ ಪಡು
ವರು. ತಿಷ್ಯರಕ್ಷಿತೆಯಂತೆಯೇ ಕಾನ್‌ಸ್ಟಂಟೈನ್‌ನ ರಾಣಿಯು ತನ್ನ ಮಲಮಗನ ಮೇಲೆ
ಪಾಪದೃಷ್ಟಿಯನ್ನಿಟ್ಟಿದ್ದಳು. ಆದರೆ ಅಶೋಕನು ಬಹು ಪುಣ್ಯಶಾಲಿಯಾದುದರಿಂದ ತಿಷ್ಯ
ರಕ್ಷಿತೆಯ ಕಡೆಯಿಂದ ಪಾಪದೃಷ್ಟಿಯ ಹೊರತು ಹೆಚ್ಚಿನ ಪಾಪ ನಡೆಯಲಿಲ್ಲ. ರೋ
ಮನ್ ಬಾದಶಹನು ಇಂತಹ ಭಾಗ್ಯಶಾಲಿಯಾಗಿರಲಿಲ್ಲ. (Bhilsa-Topes p. 124).

Digitized by ROJA MUTHIAH RESEARCH LIBRARY

ಯನ್ನು ರಾಜನ ಮುಂದೆ ಕಾಣಿಕೆಯಾಗಿ ಇಟ್ಟನು. ಅದನ್ನು ನೋಡಿ ಅಶೋಕನಿಗೆ ಬಹಳ ದುಃಖವುಂಟಾಯಿತು. ಅವನ ಪ್ರಾಣವು ತಳಮಳಗೊಂಡಿತು. ಕೊನೆಗೆ ಉಪಗುಪ್ತನು ಧರ್ಮೋಪದೇಶವನ್ನು ಮಾಡಿ, ಅವನ ಮನಸ್ಸನ್ನು ಸಮಾಧಾನಗೊಳಿಸಿದನೆಂಬ ಕಥೆಯು ಅಶೋಕ ಅವದಾನದಲ್ಲಿ ಹೇಳಿದೆ.

---

## ೭ನೆಯ ಪ್ರಕರಣ.

### ಧರ್ಮಕೃತ್ಯಗಳು.

ಬೌದ್ಧಧರ್ಮದ ಬೆಳೆವಣಿಗೆಗಾಗಿ ಅಶೋಕನು ಮಾಡಿದ ಪ್ರಯತ್ನಗಳಲ್ಲಿ, ಅವನು ಅನೇಕ ದೇಶಗಳನ್ನು ತಿರುಗಿ ಬೌದ್ಧ ತೀರ್ಥಸ್ಥಾನಗಳ ದರ್ಶನವನ್ನು ತೆಗೆದುಕೊಂಡು, ಆಯಾ ಸ್ಥಳಗಳಲ್ಲಿ ಹೊಸ ಸ್ತೂಪಗಳನ್ನು ಕಟ್ಟಿಸಿ, ಹಳೆಯ ಸ್ತೂಪಗಳನ್ನು ಜೀರ್ಣೋದ್ಧಾರ ಮಾಡಿಸಿದುದು ಬಹಳ ಮಹತ್ವದ ಸಂಗತಿಯಾಗಿದೆ. ನಿಗ್ಲೀವ್[೩೯] ಮತ್ತು ಪಡೇರಿಯಾದಲ್ಲಿನ[೪೦] ಸ್ತಂಭಲೇಖಗಳಿಂದ ಈ ವಿಷಯವು ವಿದಿತವಾಗುತ್ತಿದೆ. ಅಶೋಕನು ತನ್ನ ರಾಜ್ಯದಲ್ಲಿ ೮೪,೦೦೦ ಸ್ತೂಪಗಳನ್ನು ಕಟ್ಟಿಸಿದನೆಂದು ದಂತಕಥೆಯುಂಟು.[೪೧] ಅಶೋಕನು ಕಟ್ಟಿಸಿದ ಸ್ತಂಭಗಳೂ, ಮಂಟಪಗಳೂ ಕೆಲವು ಕಡೆಯಲ್ಲಿ ಈಗಲೂ ಕಂಡುಬರುತ್ತಿವೆ. ಬುದ್ಧಗಯೆಯಲ್ಲಿನ ಬೋಧಿವೃಕ್ಷ ಮತ್ತು ವಜ್ರಾಸನಗಳ ಸುತ್ತುಮುತ್ತಿನ ಕಟ್ಟೆಯನ್ನೂ, ಅವುಗಳ ರಕ್ಷಣಾರ್ಥವಾಗಿ ಭದ್ರವಾದ ಗೋಡೆಗಳನ್ನೂ, ಅಶೋಕನೇ ಕಟ್ಟಿಸಿದನೆಂದು ಹೇಳುವರು. ಇವುಗಳಲ್ಲಿ ಆ ಕಟ್ಟೆಯನ್ನು ಮಾತ್ರ ಈಗಲೂ ಜೀರ್ಣಾವಸ್ಥೆಯಲ್ಲಿ ನೋಡಬಹುದೆಂದು ಹೇಳುವರು.[೪೨] ಇವುಗಳ ಹೊರತು ಬೌದ್ಧಭಿಕ್ಷುಗಳ ಮತ್ತು ಭಿಕ್ಷುಣಿಯರುಗಳಿಗಾಗಿ ಆತನು ಎಷ್ಟು ಧರ್ಮಶಾಲೆಗಳನ್ನು ಕಟ್ಟಿಸಿದನೋ ಅವನ್ನು ಲೆಕ್ಕ ಮಾಡಿ ಹೇಳಲು ಬರುವುದಿಲ್ಲ.

ಅಶೋಕನು ನೋಡಿದ ಅನೇಕ ಪವಿತ್ರ ಸ್ಥಳಗಳಲ್ಲಿ ಮುಖ್ಯ ಮುಖ್ಯ ಸ್ಥಳಗಳ ಹೆಸರುಗಳನ್ನು ಇಲ್ಲಿ ಕೊಡುವೆವು. ಬುದ್ಧಜನ್ಮಸ್ಥಾನವಾದ ಲುಂಬಿನಿ ಎಂಬ ಉದ್ಯಾನವನ; ಬುದ್ಧನ ತಂದೆಯ

---

[೩೯] ನಿಗ್ಲೀವ (Epigraphica Indica Vol. V pp. 5-6.)

[೪೦] ಪಡೇರಿಯಾ (Epigraphica Indica Vol. I p. 4.)

[೪೧] Beal's Si-yu-ki Vol. II p. 89-90; Legge's Translation of Fa-Haien's Record p. 69.

[೪೨] Dr. Rajendra Lal Mitra's Buddh-Gaya pp. 71-72.



Digitized by ROJA MUTHIAH RESEARCH LIBRARY

ರಾಜಧಾನಿಯಾದ ಕಪಿಲವಸ್ತುವೆಂಬ ಪಟ್ಟಣ; ಸಂಸಾರದ ವಿಷಯದಲ್ಲಿ ವಿರಕ್ತಿಯುತ್ಪನ್ನವಾಗಿ, ರಾಜಮಂದಿರದಿಂದ ಕಗ್ಗತ್ತಲೆಯಲ್ಲಿ ಹೊರಟು, ಊರ ಹೊರಗೆ ಬಂದ ಬಳಿಕ, ತನ್ನೊಂದಿಗೆ ಬಂದ ಸೇವಕನಿಗೆ ತನ್ನ ಮೈಯ ಮೇಲಿನ ಅಲಂಕಾರಗಳನ್ನೂ ರಾಜಭೂಷಣಗಳನ್ನೂ ಕೊಟ್ಟು, ಕತ್ತಿಯಿಂದ ತನ್ನ ಜಂಡಿಕೆಯನ್ನು ಕೊಯ್ದುಕೊಂಡು, ವೈರಾಗ್ಯಚಿಹ್ನಗಳನ್ನು ಧರಿಸಿದಂತಹ ಅನೋಮಾ ಎಂಬ ಹೆಸರಿನ ನದಿಯತೀರ; ಬುದ್ಧನ ಸಮಕಾಲೀನರಾಜನಾದ ಬಿಂದುಸಾರನ ರಾಜಗೃಹವೆಂಬ ರಾಜಧಾನಿ; ಮತ್ತು ಪರ್ವತಗುಹೆಗಳ ನಡುವೆ ಏಕಾಂತವಾಗಿ ತಪಶ್ಚರ್ಯೆ ಮಾಡುತ್ತಿದ್ದ ಋಷಿಗಳ ಆಶ್ರಯವನ್ನು ಎಲ್ಲಿ ಬುದ್ಧನು ಬೇಡಿದನೋ, ಆ ರಾಜಗೃಹದ ಬಳಿಯಲ್ಲಿರುವ ಪರ್ವತಗಳು; ಋಷಿಗಳು ಕಲಿಸಿದ ಜಪತಪಾದಿಸಾಧನೆಗಳಿಂದ ತೃಪ್ತಿಯಾಗದೆ ಅವನು ಆರು ವರುಷಗಳ ವರೆಗೆ ಎಲ್ಲಿ ಚಿಂತನೆ ಮಾಡುತ್ತ ಕುಳಿತನೋ, ಆ ಬುದ್ಧಗಯೆಯ ಸಮೀಪದಲ್ಲಿರುವ ಉರುವೇಲವೆಂಬ ಅರಣ್ಯ; ತಪಶ್ಚರ್ಯವು ವ್ಯರ್ಥವೆಂದೂ ಅನರ್ಥಾವಹವೆಂದೂ ತಿಳಿದು, ಆ ಭ್ರಾಂತಿಯನ್ನು ಬಿಟ್ಟು ಅವನು ಕ್ಷೀಣವಾದ ತನ್ನ ಶರೀರಕ್ಕೆ ಎಲ್ಲಿ ಯಥೇಷ್ಟವಾದ ಆಹಾರವನ್ನು ಕೊಟ್ಟು, ಪುನಃ ಕಾಂತಿಯನ್ನು ಉಂಟುಮಾಡಿಕೊಂಡನೋ, ಮತ್ತು ಎಲ್ಲಿ ಸುಜಾತೆ ಎಂಬ ಸ್ತ್ರೀಯು ಆತನಿಗೆ ಸಾಕಷ್ಟು ಭೋಜನವನ್ನು ಮಾಡಿಸಿದಳೋ ಆ ನಿರಂಜನಾ ನದಿಯತೀರ; ಎಲ್ಲಿ ಕುಳಿತಾಗ ಅವನಿಗೆ ದಿವ್ಯಜ್ಞಾನವು ಪ್ರಾಪ್ತವಾಯಿತೋ ಆ ಬುದ್ಧಗಯೆ ಎಂಬ ಸ್ಥಲ; ಸಿದ್ಧಿಯನ್ನು ಪಡೆದ ಮೇಲೆ ಎಲ್ಲಿ ಆತನು ಮೊದಲು ಧರ್ಮೋಪದೇಶಕ್ಕೆ ಪ್ರಾರಂಭಿಸಿದನೋ, ಆ ಕಾಶಿಪಟ್ಟಣದಲ್ಲಿನ ಮೃಗದಾವಕಾನನವೆಂಬ ಸ್ಥಾನ; ಮತ್ತು ಕೊನೆಗೆ ಎಲ್ಲಿ ಈ ಮಹಾಮಹಿಮನು ಈ ಜಗತ್ತಿನ ಕರ್ತವ್ಯವನ್ನು ಒಳ್ಳೆಯ ರೀತಿಯಿಂದ ಮಾಡಿ, ಅತಿ ಸಮಾಧಾನದಿಂದ ಇಹಲೋಕದ ನಿರೂಪವನ್ನು ತೆಗೆದುಕೊಂಡು ನಿರ್ವಾಣಪದವಿಯನ್ನೈದಿದನೋ ಆ ಕುಶಿನಗರವೆಂಬ ಪಟ್ಟಣ; ಈ ಸ್ಥಳ



ಗಳನ್ನೆಲ್ಲಾ ಅಶೋಕನು ನೋಡಿ ಆಯಾ ಸ್ಥಳಗಳಲ್ಲಿ ಚೈತ್ಯ, ಸ್ತೂಪ, ಮಂಟಪ, ವಿಹಾರ ಮುಂತಾದುವುಗಳನ್ನು ಕಟ್ಟಿಸಿದನು. ಮತ್ತು ಅಲ್ಲಿ ಮುಂದಿನ ಸಂತತಿಯ ಜನಗಳಿಗೆ ಧರ್ಮೋಪದೇಶವನ್ನು ಮಾಡುವುದಕ್ಕೋಸ್ಕರ ಬೌದ್ಧಧರ್ಮದ ಮುಖ್ಯಮುಖ್ಯ ತತ್ವಗಳನ್ನು ಮನಸ್ಸಿನಲ್ಲಿ ಬಿಂಬಿಸುವಂತೆ ಮಾಡ ತಕ್ಕ ಸಣ್ಣಸಣ್ಣ ವಾಕ್ಯಗಳನ್ನೂ, ಸೂತ್ರಗಳನ್ನೂ, ಶಿಲೆ, ಸ್ತಂಭ, ಅಥವಾ ವಿಹಾರ ಮುಂತಾದುವುಗಳ ಗೋಡೆಗಳ ಮೇಲೆ ಕೊರೆಯಿಸಿದನು. ಈ ಲೇಖಗಳಲ್ಲಿ ಕೆಲವನ್ನು ಮುಂದಿನ ಪ್ರಕರಣದಲ್ಲಿ ಕೊಡುವೆವು. ಇದಲ್ಲದೆ ದಣಿದ ಪಥಿಕರೂ ಪಶುಗಳೂ ವಿಶ್ರಾಂತಿಯನ್ನು ಹೊಂದುವಂತೆ ಮಾರ್ಗಗಳ ಎಡಬಲಕ್ಕೆ ಮಾವಿನ ಗಿಡುಗಳನ್ನು ಹಚ್ಚಿಸುವುದು, ಪ್ರತಿ ಅರ್ಧ ಹರದಾರಿಗೆ ತೃಷಾರ್ತರಿಗೋಸ್ಕರ ಬಾವಿಗಳನ್ನು ಅಗೆಯಿಸುವುದು, ರಾತ್ರಿ ಇಳಿದುಕೊಳ್ಳುವುದಕ್ಕೆ ಧರ್ಮಶಾಲೆಗಳನ್ನು ಕಟ್ಟಿಸುವುದು, ಇವೇ ಮುಂತಾದ ಅಸಂಖ್ಯಧರ್ಮಕೃತ್ಯಗಳನ್ನು ಅಶೋಕನು ಮಾಡಿದನು.[೪೩]

A 2250

೪೩ ದಿಲ್ಲಿಯ ಸ್ತಂಭದಲ್ಲಿನ ೬ನೆಯ ಆದೇಶವನ್ನು ಮುಂದಿನ ಭಾಗದಲ್ಲಿ ಕೊಟ್ಟಿದೆ. ಅದನ್ನು ನೋಡಿರಿ.



Digitized by ROJA MUTHIAH RESEARCH LIBRARY

## ೮ನೆಯ ಪ್ರಕರಣ.

### ಅಶೋಕನ ಲೇಖಗಳು.

ಬೌದ್ಧಧರ್ಮದ ಇತಿಹಾಸದ ಪುಷ್ಕಳಾಂಶವು ಈಗ ದಂತಕಥೆಯ ರೂಪದಿಂದ ಉಪಲಬ್ಧವಾಗಿದೆ. ಈ ದಂತಕಥೆಗಳಿಂದ ನಿಜವಾಗಿ "ಇತಿಹಾಸ" ಎಂದು ಹೇಳ ಬಹುದಾದ ವಿಶ್ವಸನೀಯ ವೃತ್ತಾಂತವು ದೊರೆಯುವುದಿಲ್ಲ. ಅಶೋಕನು ಕೊರೆಯಿಸಿದ ಶಿಲಾಲೇಖಗಳು, ಸ್ತಂಭಲೇಖಗಳು, ಆದೇಶಗಳು ಮುಂತಾದುವುಗಳಿಂದ ಈ ವಿಷಯವಾಗಿ ನಮಗೆ ಅಲ್ಪಸ್ವಲ್ಪ ತಿಳಿದು ಬರುತ್ತಿದೆ. ಆದುದರಿಂದ ಇತಿಹಾಸ ದೃಷ್ಟಿಯಿಂದ ಈ ಲೇಖಗಳಿಗೆ ಹೆಚ್ಚು ಮಹತ್ವವು ಕೊಡಲ್ಪಟ್ಟಿದೆ. ಅಥವಾ ಈ ಲೇಖಗಳಿರುವುದರಿಂದಲೇ ಸಾಂಪ್ರತದಲ್ಲಿ ಬೌದ್ಧಧರ್ಮದ ನಿಜವಾದ ಯೋಗ್ಯತೆಯು ನಮಗೆ ಗೊತ್ತಾಗುತ್ತಿದೆ ಎಂದರೂ ಎನ್ನ ಬಹುದು. ಆದುದರಿಂದ ನಿಜವಾದ ಇತಿಹಾಸದ ಮೂಲಕಾರಣವಾದ ಈ ಶಿಲಾಲೇಖಗಳ ಸಂಬಂಧವಾಗಿ ಕೊಂಚ ವಿಸ್ತಾರವಾಗಿ ಬರೆದರೆ ಅದು ಅನವಶ್ಯವೆನ್ನಿಸಲಾರದು.

ಈ ಲೇಖಗಳು ಅಶೋಕನ ಕಾಲದವುಗಳು, ಎಂದರೆ, ಎರಡು ಸಾವಿರ ವರ್ಷಗಳ ಹಿಂದಿನವುಗಳಾಗಿವೆ. ಇವುಗಳಲ್ಲಿ ಕೆಲವನ್ನು ಬಂಡೆಗಳ ಮೇಲೆಯೂ, ಕೆಲವನ್ನು ಪಾಷಾಣಸ್ತಂಭಗಳ ಮೇಲೆಯೂ, ಇನ್ನು ಕೆಲವನ್ನು ದೊಡ್ಡದೊಡ್ಡ ಹಾಸುಕಲ್ಲುಗಳ ಮೇಲೆಯೂ ಕೊರೆದಿರುವರು. ಇವುಗಳಲ್ಲಿ ಬಂಡೆಗಳ ಮೇಲೆ ಕೊರೆದ ಲೇಖಗಳು ಎಲ್ಲವುಗಳಿಗಿಂತ ಮೊದಲಿನವೂ ಚಿತ್ತಾಕರ್ಷಕವೂ ಆಗಿವೆ. ಈ ಪ್ರತಿಯೊಂದು ಲೇಖದಲ್ಲಿ, ಅದು ಅಶೋಕನು ಪಟ್ಟವನ್ನೇರಿದ ಬಳಿಕ ಎಷ್ಟನೆಯ ವರ್ಷದಲ್ಲಿ ಬರೆಯಲ್ಪಟ್ಟಿತೆಂಬುದನ್ನು ಸ್ಪಷ್ಟವಾಗಿ ಹೇಳಿರುವುದರಿಂದ, ಅವುಗಳ ಕಾಲನಿರ್ಣಯದ ವಿಷಯದಲ್ಲಿ ತೊಂದರೆಯುಂಟಾಗಲು ಮಾರ್ಗವೇ ಇಲ್ಲ. ಅಶೋಕನು ಬಂಡೆಗಳಲ್ಲಿ ಕೊರೆಯಿಸಿದ ಸುಪ್ರಸಿದ್ಧವಾದ ಹದಿನಾಲ್ಕು



ಆದೇಶಗಳಲ್ಲಿ ಎಷ್ಟೋ ಆದೇಶಗಳು ಅವನು ಪಟ್ಟವೇರಿದ ಹದಿಮೂರು ಅಥವಾ ಹದಿನಾಲ್ಕನೆಯ ವರ್ಷ ಕೊರೆಯಲ್ಪಟ್ಟುವುಗಳಾಗಿವೆ. ಪಾಷಾಣಸ್ತಂಭಗಳ ಮೇಲಿನ ಲೇಖಗಳು ೨೭-೨೮ ವರ್ಷದವುಗಳು; ಮತ್ತು ಬೈರಾತ್ ಅಥವಾ ಬಾಬ್ರಾದಲ್ಲಿನ ಲೇಖಗಳು ಅದಕ್ಕೂ ಇತ್ತಲಾಗಿನವುಗಳಾಗಿವೆ. ಇವೆಲ್ಲವನ್ನು ಅಶೋಕನು ಕೊರೆಯಿಸಿದನು ಎಂಬುದೇನೋ ನಿಜ; ಆದರೆ ಆ ಲೇಖಗಳಲ್ಲಿ ಅಶೋಕನ ಹೆಸರೇ ಇಲ್ಲ. ಅವುಗಳಲ್ಲೆಲ್ಲಾ 'ಪಿಯದಸಿ' ಅಥವಾ 'ದೇವಾನಾಂಪಿಯದಸಿ' [ಪ್ರಿಯದರ್ಶಿ ಅಥವಾ ದೇವಾನಾಂಪ್ರಿಯದರ್ಶಿ] ಎಂಬುದಾಗಿ ರಾಜನ ಹೆಸರು ತೋರಿಬರುತ್ತಿದೆ. ಈ ಪ್ರಿಯದರ್ಶಿ ರಾಜನು ಯಾರೆಂಬ ವಿಷಯದಲ್ಲಿ ದೊಡ್ಡ ಸಂದೇಹವು ಉಂಟಾಗಿತ್ತು. ಈ ಸಂದೇಹವನ್ನು ಹೇಗೆ ಹೋಗಲಾಡಿಸಿದರೆಂಬ ಸಂಗತಿಯು ಕೇಳತಕ್ಕುದಾಗಿದೆ. ಚಾರ್ಲ್ಸ್ ಟರ್ನರ್ ಎಂಬ ದೊಡ್ಡ ಸರಕಾರೀ ಅಧಿಕಾರಿಯೊಬ್ಬನು ಸಿಂಹಲೀಯ ಪಂಡಿತರ ಸಹಾಯದಿಂದ ಪಾಲಿಭಾಷೆಯನ್ನು ಕಲಿತು, ಸಿಂಹಲ ದ್ವೀಪದಲ್ಲಿನ ಮಹಾವಂಶ ಮತ್ತು ದೀಪವಂಶವೆಂಬ ಎರಡು ಪ್ರಸಿದ್ಧವಾದ ಬೌದ್ಧಧರ್ಮಗ್ರಂಥಗಳ ಪರಿಚಯವನ್ನು ಮಾಡಿಕೊಂಡನು. ಅವುಗಳಲ್ಲಿ ಅಶೋಕನು ಬೌದ್ಧಧರ್ಮದ ಪುರಸ್ಕೃತನಾಗಿದ್ದನೆಂತಲೂ, ಅವನು ಅನೇಕ ಶಿಲಾಲೇಖಗಳನ್ನು ಕೊರೆದಿರುವನೆಂತಲೂ, ಬರೆದುದು ಕಂಡುಬಂದಿತು. ಇಷ್ಟೇ ಅಲ್ಲ; ಅವನ ಆಳಿಕೆಯ ಕಾಲವೇ ಮುಂತಾದ ಸಂಗತಿಯೆಲ್ಲಾ ಅವುಗಳಲ್ಲಿ ಸವಿಸ್ತರವಾಗಿ ಕೊಟ್ಟಿತ್ತು. ಅವುಗಳ ಮೇಲಿಂದ ಟರ್ನರ್ ಸಾಹೇಬರು ಮೊತ್ತಮೊದಲು ಬೌದ್ಧಧರ್ಮದ ಕ್ರಮವಾದ ಇತಿಹಾಸವನ್ನು ಬರೆದರು.

ಇತ್ತ ಮಿ. ಜೇಮ್ಸ್ ಪ್ರಿನ್‌ಸೆಪ್ ಸಾಹೇಬರು ಕ್ರಿ. ಶ. ೧೮೩೭-೩೮ನೆಯ ವರ್ಷದಲ್ಲಿ ಅನೇಕ ಸ್ಥಳಗಳಲ್ಲಿನ ಶಿಲಾಲೇಖಗಳನ್ನೂ ನಾಣ್ಯಗಳನ್ನೂ ಕೂಡಿಸಿ, ಅವುಗಳೊಳಗಿನ ಅಕ್ಷರಗಳನ್ನು ಒಂದಕ್ಕೊಂದು ಹೋಲಿಸಿ ಪರೀಕ್ಷಿಸಿ ನೋಡಿದರು. ಈ ಲೇಖಗಳೆಲ್ಲಾ

Digitized by ROJA MUTHIAH RESEARCH LIBRARY

ಬೌದ್ಧಮಂದಿರದಲ್ಲಿ ದೊರೆತಿದ್ದುದರಿಂದ ಇದು, ಆ ಮಂದಿರಗಳನ್ನು ಯಾರು, ಎಂದು, ಕಟ್ಟಿಸಿದರೆಂಬ ಮುಂತಾದ ಸಂಗತಿಯ ದಾನಪತ್ರವಾಗಿರ ಬಹುದೆಂದು ತಿಳಿದು ಅವರು ಅಕ್ಷರಗಳನ್ನು ಪರೀಕ್ಷಿಸುತ್ತಿರಲು, ಕಡೆಯ ಎರಡು ಅಕ್ಷರಗಳು ಒಂದರೊಡನೊಂದು ಸರಿಕೂಡಿದುವು. ಆದುದರಿಂದ ಕಡೆಯ ಇವೆರಡು ಅಕ್ಷರಗಳು 'ದಾನ' ಎಂಬ ಶಬ್ದವಾಗಿರ ಬಹುದೆಂದು ಅವರು ಸುಮ್ಮನೆ ಭಾವಿಸಿಕೊಂಡು, ಮುಂದೆ ಈ ಅಕ್ಷರಗಳು ಬಂದಲ್ಲೆಲ್ಲಾ "ದಾನ" ಎಂತಲೇ ಓದ ತೊಡಗಿದರು; ದೇವನಾಗರೀ, ನಾಗರೀ ಮುಂತಾದ ಭಾಷೆಗಳಲ್ಲಿ 'ದಾ' ಅಕ್ಷರವನ್ನು ಬರೆಯುವಂತೆಯೇ ಅಲ್ಲಿಯೂ ಹೆಚ್ಚು ಕಡಮೆಯಾಗಿ ಬರೆದಿದ್ದುದರಿಂದ, ಅದು 'ದಾ' ಅಕ್ಷರವೇ ಆಗಿರುವುದೆಂದು ಅವರಿಗೆ ಮನವರಿಕೆಯಾಯಿತು. ಈ ಮೇರೆಗೆ ಒಂದೊಂದು ಅಕ್ಷರವನ್ನು ಬೇರೆ ಲೇಖಗಳ ಮತ್ತು ಭಾಷೆಗಳ ಅಕ್ಷರಗಳಿಗೆ ಹೋಲಿಸಿ ನೋಡಲು, ನಿಬಿಡವಾದ ಅಂಧಕಾರದಲ್ಲಿ ಒಮ್ಮಿಂದೊಮ್ಮೆ ಸೂರ್ಯಕಿರಣವು ಬಿದ್ದಂತೆ ಆ ಒಗಟು ಸ್ಪಷ್ಟವಾಯಿತು. ಸಿಂಹಲದ್ವೀಪದ ಬೌದ್ಧಧರ್ಮಗ್ರಂಥಗಳ ಪಾಲೀಭಾಷೆಗೂ ಇದರ ಭಾಷೆಗೂ ಬಹಳ ಸಾಮ್ಯವು ಕಂಡುಬಂದಿತು. ಸಂಸ್ಕೃತದೊಳಗಿನ ವಿಭಕ್ತಿ ಪ್ರತ್ಯಯಗಳು ಸಹ ಸ್ಪಷ್ಟವಾಗಿ ತೋರ ತೊಡಗಿದುವು. ಆ ಬಳಿಕ ಅರ್ಥವು ಬೋಧೆಯಾಗಲು ತೊಂದರೆಯಾಗಲಿಲ್ಲ. ಈ ಪ್ರಕಾರ ಭಾಷಾತುಲನಾಶಾಸ್ತ್ರದ ಪದ್ಧತಿಯಿಂದ, ಒಮ್ಮೆ ತುಚ್ಛ್ಯವೆನಿಸಿದ ಸಂಗತಿಯ ಮಹತ್ವವು ಜನರಿಗೆ ತಿಳಿಯ ತೊಡಗಿತು.

ದಿಲ್ಲಿಯೊಳಗಣ ಫಿರೋಜಶಹನ ಸ್ತಂಭದ ಮೇಲಿನ ಲೇಖಗಳನ್ನೂ, ಇನ್ನು ಇತರ ಲೇಖಗಳನ್ನೂ, ಅವುಗಳ ಇಂಗ್ಲೀಷ್ ಭಾಷಾಂತರಗಳನ್ನೂ ಮಿ। ಪ್ರಿನ್‌ಸೆಪ್ ಸಾಹೇಬರು ಬಂಗಾಲದ ಏಸಿಯಾಟಿಕ್ ಸೊಸಾಯಿಟಿಗೆ ತೋರಿಸಿದರು; ಮತ್ತು ಅವುಗಳನ್ನು ಮುದ್ರಿಸಿ ಪ್ರಸಿದ್ಧಗೊಳಿಸಿದರು. ಈ ವೃತ್ತಾಂತವನ್ನು ಓದಿದ ಕೂಡಲೇ ಮಿ। ಟರ್ನರ್ ಸಾಹೇಬರಿಗೆ, ಈ ಲೇಖಗಳು ಮಹಾವಂಶದಲ್ಲಿ ಉಲ್ಲೇಖಿಸಿದ ಅಶೋಕನವೇ ಆಗಿರ ಬಹುದೆಂದು ತೋರಿದುವು. ರಾಜ್ಯದ ಅಪರಿಮಿತ ವಿಸ್ತಾರವೂ ಮಗಧ ದೇಶದ ಉಲ್ಲೇಖವೂ, ಭೂತದಯೆಯನ್ನು ತೋರಿಸುವುದರ ಸಂಬಂಧವಾದ ಆಜ್ಞೆಗಳೂ, ಮುಂತಾದ ಸಂಗತಿಗಳು ಮಹಾವಂಶದಲ್ಲಿ ಅಶೋಕನ ವಿಷಯದಲ್ಲಿ ಹೇಳಿದಂತೆಯೇ ಪ್ರಿಯದರ್ಶಿರಾಜನ ಲೇಖಗಳಲ್ಲಿಯೂ ಸ್ಪಷ್ಟವಾಗಿ ತೋರಿಬಂದುವು. ಆ ತರುವಾಯ ಅಶೋಕನ ಸಮಕಾಲೀನರಾದ ಟಾಲೆಮಿ, ಮೇಗಾಜ್ ಮುಂತಾದ ಗ್ರೀಕ ರಾಜರ ಹೆಸರುಗಳು ಸಹ ಆ ಲೇಖಗಳಲ್ಲಿ ಕಂಡುಬಂದುವು. ಇದಲ್ಲದೆ ಅಶೋಕನ ಅಜ್ಜನಾದ ಚಂದ್ರಗುಪ್ತನ ಹೆಸರು ಸಹ ಅವುಗಳಲ್ಲಿ ಬರೆಯಲ್ಪಟ್ಟದ್ದುದರಿಂದ, ಪ್ರಿಯದರ್ಶಿ ಮತ್ತು ಅಶೋಕರೆಂಬುವರು ಒಂದೇ ಎಂಬುದರಲ್ಲಿ ತಿಲಮಾತ್ರವೂ ಸಂಶಯ ಉಳಿಯಲಿಲ್ಲ. "ಪ್ರಿಯದರ್ಶಿ" ಎಂದರೆ, ಆನಂದವನ್ನು ನೋಡುವವನು; ಮತ್ತು "ಅಶೋಕ" ಎಂದರೆ ದುಃಖರಹಿತನು; ಹೀಗೆ ಇವೆರಡು ಶಬ್ದಗಳ ಅರ್ಥದಲ್ಲಿ ಸಹ ಬಹಳ ಸಾಮ್ಯವಿರುವುದರಿಂದ, ಈ ಅಭಿಪ್ರಾಯಕ್ಕೆ ಹೆಚ್ಚು ಬಲ ದೊರೆಯಿತು. ಇನ್ನು ಯಾರಿಗೆ ಈ ವಿಷಯದಲ್ಲಿ ಸಂದೇಹವಿತ್ತೋ, ಅವರಿಗೆ ಅದನ್ನು ದೀಪವಂಶವು ಹೋಗಗೊಳಿಸಿತು. ಯಾವ ರಾಜನಿಗೆ ಮಹಾವಂಶದಲ್ಲಿ ಅಶೋಕನೆಂದು ಹೇಳಿರುವರೋ, ಅವನನ್ನೇ ದೀಪವಂಶದಲ್ಲಿ ಪ್ರಿಯದರ್ಶಿಯೆಂದು ಕರೆದಿರುವುದು ಗೊತ್ತಾದ ಬಳಿಕ ವಾದವೇ ಉಳಿಯದಂತಾಯಿತು.

ಬಂಡೆಗಳ ಮೇಲಿನ ಲೇಖಗಳನ್ನು, ಮೊದಲಿನವೆಂತಲೂ ಅದಕ್ಕೂ ಇತ್ತಲಾಗಿನವೆಂತಲೂ, ಎರಡು ವರ್ಗಗಳನ್ನಾಗಿ ವಿಭಾಗಿಸ ಬಹುದು. ಒಂದನೆಯ ವರ್ಗದೊಳಗೆ ಐದು ಲೇಖಗಳ ಸಮಾವೇಶವಾಗುವುದು.

೧. **ಗುಜರಾತಿನಲ್ಲಿ ಜುನಾಗಡದ ಹತ್ತಿರವಿರುವ ಗಿರನಾರೆಂಬಲ್ಲಿ** — ಇದು ಹದಿನೇಳು ಅಡಿ ಉದ್ದವೂ ಎಂಟು ಅಡಿ ಅಗಲವೂ ಇದೆ. ಈ ಲೇಖದ ಪ್ರತಿ ಒಂದು ಅಕ್ಷರವು ೧½ ಅಂಗು



Digitized by ROJA MUTHIAH RESEARCH LIBRARY

ಲದಷ್ಟು ಉದ್ದವಾಗಿದೆ. ಈ ಬಂಡೆಯ ಕೆಲವು ಭಾಗಗಳನ್ನು ಒಡೆದು, ಸಮೀಪದಲ್ಲಿಯೇ ಒಂದು ಸೇತುವನ್ನು ಕಟ್ಟುವುದಕ್ಕೆ ಒಯ್ದರು. ಅದರಲ್ಲಿ ಅಶೋಕನ ಹದಿಮೂರನೆಯ ಆದೇಶದ ಸ್ವಲ್ಪ ಭಾಗವು ಹೋಯಿತು. ಆ ಮೇಲೆ ಕೆಲವು ವರ್ಷಗಳ ತರುವಾಯ ಕ್ಯಾಪ್ಟನ್ ಪಾಸ್ಟನ್ ಸಾಹೇಬರು ಈ ಸೇತುವಿನ ಬಳಿಯ ಭೂಮಿಯನ್ನು ಅಗೆಯಿಸುತ್ತಿರಲು, ಅವರಿಗೆ ಈ ಆದೇಶ ವನ್ನು ಕೊರೆದ ಕಲ್ಲು ಛಿನ್ನವಿಚ್ಛಿನ್ನವಾದ ಸ್ಥಿತಿಯಲ್ಲಿ ದೊರೆ ಯಿತು.*

೨. **ಒರಿಸಾ ಪ್ರಾಂತದ ಧವಲಿಯಲ್ಲಿ**— ಇದು ಮೇಲಿನಂ ತೆಯೇ ಇದೆ.

೩. **ಅದೇ ಪ್ರಾಂತದ ಜೈಗಡದಲ್ಲಿ**— ಈ ಲೇಖವನ್ನು ಬೇರೆಬೇರೆ ಮೂರು ಬಂಡೆಗಳ ಮೇಲೆ ಕೊರೆದಿರುವರು. ಇವು ಗಳಲ್ಲಿ ಮೊದಲನೆಯ ಎರಡು ಬಂಡೆಗಳ ಮೇಲೆ ಒಂದೊಂದರ ಮೇಲೆ ಐದೈದರಂತೆ ಹತ್ತು ಆದೇಶಗಳನ್ನು ಕೊರೆದಿರುವರು. ಮತ್ತು ಮೂರನೆಯದರಲ್ಲಿ ಧವಲಿಯಲ್ಲಿನಂತೆ ಎರಡು ಹೊಸ ಆದೇಶಗಳಿವೆ.

೪. **ಯಮುನೆಯ ಉತ್ತರ ತೀರದಲ್ಲಿ ಮಸೂರೆಯ ಬಳಿಯಲ್ಲಿರುವ ಖಾಲಸಿಯಲ್ಲಿ**— ಈ ಬಂಡೆಯು ಹತ್ತು ಅಡಿ ಉದ್ದವೂ, ಹತ್ತು ಅಡಿ ಎತ್ತರವೂ, ಎಂಟು ಅಡಿ ದಪ್ಪವೂ ಆಗಿದೆ.

೫. **ವಾಯುವ್ಯದಲ್ಲಿ ಅಂಟಕದಿಂದ ಸ್ವಲ್ಪ ದೂರದಲ್ಲಿ ಕರ್ಪುದಗಿರಿಯ ಬಳಿಯಲ್ಲಿರುವ ಶಹಾಬಾಜಗಡದಲ್ಲಿ**— ಈ ಲೇಖವನ್ನು ಕೊರೆದ ಬಂಡೆಯು ಹತ್ತು ಅಡಿ ಎತ್ತರ, ಇಪ್ಪತ್ತನಾಲ್ಕು ಅಡಿ ಉದ್ದ, ಹತ್ತು ಅಡಿ ದಪ್ಪವಿದೆ. ಇದರಲ್ಲಿ ಹಲವು ಗ್ರೀಕರಾಜರ ಹೆಸರುಗಳನ್ನು ಉಲ್ಲೇಖಿಸಿರುವುದರಿಂದ, ಇತಿಹಾಸ ದೃಷ್ಟ್ಯಾ ಇದು ಬಹಳ ಮಹತ್ವವುಳ್ಳದಾಗಿದೆ. ಇದು 'ಅರಿಯನೊಪಾಲಿ' ಭಾಷೆಯಲ್ಲಿ ಬರೆಯಲ್ಪಟ್ಟಿದೆ.

* Cunningham's Corpus Inscriptionum Indicarum Vol. i. p. 14.



ಮೇಲೆ ವಿವರಿಸಿದ ಸ್ಥಳಗಳಲ್ಲಿ ಒಂದೊಂದೇ ಲೇಖವಿಲ್ಲ; ಬಹಳ ಇವೆ. ಅವುಗಳಿಗೆಲ್ಲಾ ಕೂಡಿ ಅಶೋಕನ ಸುಪ್ರಸಿದ್ಧ ಹದಿನಾಲ್ಕು ಆದೇಶಗಳೆನ್ನುವರು. ಈ ಆದೇಶಗಳ ಭಾಷಾಂತರವನ್ನು ಮುಂದಿನ ಪ್ರಕರಣದಲ್ಲಿ ಕೊಟ್ಟಿದೆ. ಅಶೋಕನು ಪಟ್ಟವೇರಿದ ೧೧ರಿಂದ ೧೪ನೆಯ ವರ್ಷಗಳ ನಡುವೆ, ಎಂದರೆ, ಮೂರು ವರ್ಷಗಳಲ್ಲಿ ಈ ಹದಿನಾಲ್ಕು ಆದೇಶಗಳನ್ನು ಕೊರೆಯಿಸಿದನೆಂದು ಕೆಲವು ಪಂಡಿತರ ಅಭಿಪ್ರಾಯವಿದೆ.**

ಈ ಹದಿನಾಲ್ಕು ಆದೇಶಗಳ ಹೊರತು ಇನ್ನೂ ಎರಡು ಆದೇಶಗಳು ಧವಲಿ, ಮತ್ತು ಜೈಗಡದಲ್ಲಿ ದೊರೆತುವು. ಈ ಲೇಖಗಳ ಭಾಷಾಸರಣಿಯೂ ಲೇಖನಪದ್ಧತಿಯೂ ಮೊದಲಿನ ಹದಿನಾಲ್ಕು ಆದೇಶಗಳ ಹಾಗಿಲ್ಲ. ಇವುಗಳಲ್ಲದೆ ಇನ್ನೂ ಎರಡು ರೂಪನಾಥ, ಮತ್ತು ಸಹಸರಾಮದಲ್ಲಿ ದೊರೆತುವು. ಇವುಗಳಲ್ಲಿ ಒಂದು ಎಲ್ಲಕ್ಕಿಂತ ಪ್ರಾಚೀನವಾಗಿದೆ.

ಈ ಲೇಖಗಳನ್ನು ಬಂಡೆಗಳ ಮೇಲೆ ಕೊರೆದಿರುವರೆಂಬುದನ್ನು ಮೇಲೆ ಹೇಳಿಯೇ ಇದೆ. ಆದರೆ ಇಂತಹ ದೊಡ್ಡ ದೊಡ್ಡ ಬಂಡೆಗಳು ಎಲ್ಲಾ ಕಡೆಗಳಲ್ಲಿಯೂ ದೊರೆಯಲು ಪ್ರಯಾಸಬಿದ್ದುದರಿಂದ, ಶಿಲಾಸ್ತಂಭಗಳನ್ನು ಮಾಡಿಸಿ ನೆಡಿಸುವ ಕಲ್ಪನೆಯು ಅಶೋಕನಿಗೆ ತೋಚಿತು. ಅಲಹಾಬಾದು, ದಿಲ್ಲಿ ಮುಂತಾದ ಸ್ಥಳಗಳಲ್ಲಿ ಈ ತೆರನಾದ ಸ್ತಂಭಗಳಿವೆ. ಈ ಸ್ತಂಭಗಳ ಮೇಲೆ ಎಂಟು ಆದೇಶಗಳನ್ನು ಕೊರೆದಿರುವರು. ಈ ಎರಡು ಸ್ಥಳಗಳ ಸಂಕ್ಷಿಪ್ತ ವೃತ್ತಾಂತವು ಹೀಗಿದೆ:—

೧. **ದಿಲ್ಲಿ.** ಇಲ್ಲಿಯ ಸ್ತಂಭಕ್ಕೆ ಫಿರೋಜ್‌ಶಹನ ಕಂಬವೆನ್ನುವರು. ಇದು ಮೊತ್ತಮೊದಲು ಯಮುನಾ ನದಿಯ ತೀರದಲ್ಲಿರುವ ಖಿಜರಾಬಾದಿನಲ್ಲಿತ್ತು. ಅದನ್ನು ಫಿರೋಜಶಹನು ದಿಲ್ಲಿಗೆ ತಂದನಂತೆ. ಇದು ಒಟ್ಟು ೩೨ ಗಜ ಎತ್ತರವಿತ್ತು. ಅದರಲ್ಲಿ ೮ ಗಜದಷ್ಟು ಭೂಮಿಯೊಳಗೆ ಹುಗಿದಿತ್ತೆಂದು ತಮನೀಶಿ

** Copleston's Buddhism.

Digitized by ROJA MUTHIAH RESEARCH LIBRARY

ರಾಜ್ ಎಂಬ ಫಾರಸೀ ಗ್ರಂಥಕಾರನು ಬರೆದಿರುವನು. ಈಗ ಅದರ ಎತ್ತರವು ೪೨⅔ ಅಡಿಗಳೆಂದು ಜನರಲ್ ಕನಿಂಗ್‌ಹ್ಯಾಮ್ ಸಾಹೇಬರು ಬರೆದಿರುವರು. ಈ ಸ್ತಂಭದ ನಾಲ್ಕು ಮಗ್ಗುಲಲ್ಲಿಯೂ ಲೇಖಗಳನ್ನು ಕೊರೆದಿರುವರು. ಇದಲ್ಲದೆ ಅಲ್ಲಿ ಇನ್ನೊಂದು ಸ್ತಂಭವೂ ಇದೆ.

೨. **ಅಲಹಾಬಾದು.** ಇದು ೩೫ ಅಡಿ ಎತ್ತರವಿದ್ದು ಇದರ ತಳದ ವ್ಯಾಸವು ೩ ಅಡಿಯಾಗಿಯೂ ಶಿಖರದ ವ್ಯಾಸವು ೨ ಅಡಿ ೨ ಅಂಗುಲವೂ ಆಗಿದೆ.*

ಈ ಆದೇಶಗಳನ್ನು ಕೊರೆಯಿಸುವುದರಲ್ಲಿ ಅಶೋಕನ ಉದ್ದೇಶವೇನಿತ್ತೆಂಬುದನ್ನು ನಿಶ್ಚೈಸುವುದು ಕಠಿನವಲ್ಲ. ಧರ್ಮೋಪದೇಶಕರಿಂದ ಆಗುವ ಕಾರ್ಯವು ಆ ಹೊತ್ತು ಮಟ್ಟಿಗೆ ಇರುವುದೇ ಹೊರತು ಚಿರಕಾಲ ಉಳಿಯುವುದಿಲ್ಲ ಎಂದರಿತು, ಮುಂದಿನ ಸಂತತಿಗಳ ಹಿತಕ್ಕೋಸ್ಕರ ಈ ಯುಕ್ತಿಯನ್ನು ಯೋಜಿಸುವುದರಲ್ಲಿ ಅಶೋಕನು ತುಂಬಾ ದೂರದರ್ಶಿತ್ವವನ್ನು ತೋರಿಸಿದನೆಂದು ನಿಸ್ಸಂದೇಹವಾಗಿ ಹೇಳಬಹುದು. ಅಶೋಕನು ತೀರಿ ಹೋಗಿ ಇಂದಿಗೆ ಎರಡು ಸಾವಿರ ವರ್ಷಗಳಾಗಿ ಅವನ ಹೆಸರು ಸಹಾ ಇಲ್ಲದಂತಾದರೂ, ಅವನು ಕೊರೆಯಿಸಿದ ಲೇಖಗಳಲ್ಲಿ ಎಷ್ಟೋ ಲೇಖಗಳು ಸುಂಟುರಗಾಳಿ, ಮಳೆ, ಮಿಂಚು ಮುಂತಾದ ನೈಸರ್ಗಿಕ ಸಂಕಟಗಳನ್ನೂ, ಸಿಥಿಯನ್, ಇರಾಣಿ, ತುರಾಣಿ, ಮೋಗಲರೇ ಮೊದಲಾದ ಮ್ಲೇಂಛರ ದಾಳಿಗಳೇ ಮೊದಲಾದ ಮಾನವಜನ್ಯ ಸಂಕಟಗಳನ್ನೂ ಧೈರ್ಯದಿಂದ ದಾಟಿ, ಜನರಿಗೆ ಧರ್ಮೋಪದೇಶವನ್ನು ಮಾಡುವ ಕಾರ್ಯದಲ್ಲಿ ಲೇಶವಾದರೂ ಆಲಸ್ಯವನ್ನು ತೋರಿಸದಂತಹ ಕರ್ತವ್ಯತತ್ಪರನಾದ ಮಹಾಪುರುಷನಂತೆ ಅಹೋರಾತ್ರಿ ನಡುಕಟ್ಟಿಕೊಂಡು ನಿಂತಿವೆ. ಈ ಲೇಖಗಳಿಗೋಸ್ಕರ ಸ್ಥಲನಿಯಮ ಮಾಡುವುದರಲ್ಲಿ ಸಹಾ ಅಶೋಕನು ಅಸಾಧಾರಣವಾದ ಜಾಣ್ಮೆಯನ್ನು ತೋರಿಸಿರುವನು. ಆದರೆ ಪ್ರಾಚೀನ

* Corpus Inscriptionum Indicarum Vol. i. pp. 34-38.



ಮತ್ತು ಅರ್ವಾಚೀನ ಕಾಲದ ಹಿಂದುಸ್ಥಾನದ ದೇಶಮರ್ಯಾದೆಯಲ್ಲಿಯೂ ಪಟ್ಟಣಗಳ ಸ್ಥಿತಿಯಲ್ಲಿಯೂ ವಿಲಕ್ಷಣವಾದ ಕ್ರಾಂತಿಯುಂಟಾದುದರಿಂದ, ಈ ಜಾಣತನವು ಪರೀಕ್ಷಕರ ದೃಷ್ಟಿಗೆ ಥಕ್ಕನೆ ಬೀಳುವುದಿಲ್ಲ. ಅಶೋಕನ ರಾಜಧಾನಿಯು ಪಾಟಲೀಪುತ್ರನಗರವೆಂದು ಮೇಲೆ ಹೇಳಿದೆ. ಈ ಪಟ್ಟಣದ ಹೆಸರು ಸಹಾ ಅರ್ವಾಚೀನ ಭೂಗೋಲದಲ್ಲಿ ಇಲ್ಲ. ಆದರೂ ಮೆಗಸ್ಥನೀಸನೂ ಚೀನದೇಶದ ಪ್ರವಾಸಿಗಳೂ ಬರೆದಿಟ್ಟ ಪ್ರವಾಸ ವರ್ಣನೆಗಳ ಮೇಲಿಂದ, ಈಗಿನ ಪಾಟಣಾ ಪಟ್ಟಣದ ಬಳಿಯಲ್ಲಿಯೇ ಎಲ್ಲಿಯೋ ಪಾಟಲೀಪುತ್ರವಿತ್ತೆಂದು ತಿಳಿದು ಬರುತ್ತಿದೆ.೪೫ ಬಹುಶಃ ಈ ಪಟ್ಟಣವು ಗಂಗಾನದಿಯ ಪಾತ್ರದಲ್ಲಿ ಮುಳುಗಿರ ಬಹುದೆಂದು ತೋರುತ್ತಿದೆ. ಏಕೆಂದರೆ ಪಾಟಲೀಪುತ್ರ ನಗರವು ಜಲಪ್ರಳಯವಾಗಿ ನಷ್ಟವಾಯಿತೆಂದು ದಂತಕಥೆಯುಂಟು. ಕಾಲಾಂತರದಲ್ಲಿ ನದಿಗಳ ಪ್ರವಾಹವು ತಿರುಗುವುದೆಂಬುದು ಎಲ್ಲರಿಗೂ ಗೊತ್ತಾಗಿಯೇ ಇದೆ. ಅಶೋಕನು ಪಾಟಲೀಪುತ್ರನಗರದ ಸುತ್ತುಮುತ್ತು ಭಿಕ್ಷುಕರಿಗೋಸ್ಕರ ಅನೇಕ ವಿಹಾರಗಳನ್ನು ಕಟ್ಟಿಸಿದ್ದನು. ಅವುಗಳ ಅಲ್ಪಸ್ವಲ್ಪ ಚಿನ್ಹೆಗಳು ಈಗಲೂ ಗಂಗೆಯ ದಂಡೆಯ ಮೇಲೆ ಕಾಣಿಸುತ್ತಿವೆ. ಇದಲ್ಲದೆ ಪಾಟಣಾನಗರವಿರುವ ಪ್ರದೇಶಕ್ಕೆ 'ಬಹಾರ' ಅಥವಾ 'ಬಿಹಾರ' ಎನ್ನುವರು. ಚರಿತ್ರೆಯ ಈ ಆರಂಭದಲ್ಲಿ ಕೊಟ್ಟಿರುವ ಅಶೋಕನ ರಾಜ್ಯಮರ್ಯಾದೆಯನ್ನು ನೋಡಿದರೆ, ಆತನ ರಾಜಧಾನಿಯಾದ ಪಾಟಲೀಪುತ್ರನಗರವು ಸುಮಾರು ಅವನ ರಾಜ್ಯದ ಮಧ್ಯದಲ್ಲಿತ್ತೆಂದು ತಿಳಿದು ಬರುತ್ತಿದೆ. ಈ ರಾಜಧಾನಿಯಿಂದ ನಾಲ್ಕೂ ದಿಕ್ಕಿಗೆ ನಾಲ್ಕು ರಾಜಮಾರ್ಗಗಳು ಹೋಗುತ್ತಿದ್ದುವು. ಇವುಗಳಲ್ಲಿ ಒಂದನೆಯದು ನೇಪಾಳದ ಕಡೆಗೆ ಹೋಗುತ್ತಿತ್ತು; ಎರಡನೆಯದು ಗಯೆಯ ಮೇಲಿಂದ ಥೋಟಾ

೪೫ Legge's Translation of "Fa-haein's Record of Buddhistic Kingdoms" ಈ ಗ್ರಂಥದಲ್ಲಿ ಪಾಟಲೀಪುತ್ರದ ಅಕ್ಷಾಂಶವು ೨೫°, ೨೮'; ಪೂ. ಮತ್ತು ರೇಖಾಂಶವು ೮೫° ೧೫' ಪು. ಎಂಬುದಾಗಿ ಬರೆದಿದೆ. (ಪುಟ ೩೧ ಟೀಪು ೫).

Digitized by ROJA MUTHIAH RESEARCH LIBRARY

ನಾಗಪುರ ಪ್ರಾಂತದಲ್ಲಿನ ಬೆಟ್ಟಗಳ ಸಾಲುಗಳೊಳಗಿಂದ ಹಾದು ಓಢಿಯಾವಿನ ವರೆಗೆ ಹೋಗುತ್ತಿತ್ತು; ಮೂರನೆಯದು ಪ್ರಯಾಗ, ಉಜ್ಜಯನಿಗಳ ಮೇಲಿಂದ ಕಾಠೇವಾಡದ ಕಡೆಗೆ ಹೋಗುತ್ತಿತ್ತು; ನಾಲ್ಕನೆಯದು ಪಂಜಾಬುಕಂದಹಾರಗಳಿಗೆ ಹೋಗುತ್ತಿತ್ತು. ಈ ನಾಲ್ಕೂ ಮಾರ್ಗಗಳಲ್ಲಿ ಯಾವಾಗಲೂ ಜನರು ತಂಡತಂಡವಾಗಿ ಹೋಗುತ್ತಲೂ ಬರುತ್ತಲೂ ಇದ್ದುದರಿಂದ, ಆ ಮಾರ್ಗಗಳಲ್ಲಿ ಸ್ತಂಭಗಳನ್ನು ಕಟ್ಟಿಸಿದರೆ, ಬಹಳ ಜನರು ಓದುವರೆಂದರಿತು, ಕುಶಲರಾದ ಶಿಲ್ಪಕರಿಂದ ಲೇಖಗಳನ್ನು ಕೊರೆಯಿಸಿ, ಆ ಸ್ತಂಭಗಳನ್ನು ಈ ನಾಲ್ಕು ದಾರಿಗಳಲ್ಲಿಯೂ ಸ್ಥಾಪಿಸಿದನು. ಈ ಸ್ತಂಭಗಳ ಮೇಲಿನ ಶಿಲ್ಪಕಲೆಯು ಆಶ್ಚರ್ಯವನ್ನು ಉಂಟುಮಾಡುವಷ್ಟು ಸೊಗಸಾಗಿದೆ ಎಂದು ಆ ಕಲೆಯಲ್ಲಿ ಪ್ರವೀಣರಾದ ಜನರು ಹೇಳುತ್ತಿರುವರು.

ಈ ಸ್ತಂಭಗಳ ಮೇಲೆ ಬರೆದ ಆದೇಶಗಳಿಗೂ ಹಿಂದೆ ವಿವರಿಸಿದ ಬಂಡೆಗಳ ಮೇಲೆ ಕೊರೆದ ಆದೇಶಗಳಿಗೂ ಬಹಳ ಸಾಮ್ಯವಿರುವುದರಿಂದ, ಸ್ತಂಭಗಳ ಮೇಲೆ ಕೊರೆದ ಆದೇಶಗಳ ಭಾಷಾಂತರವನ್ನು ಸವಿಸ್ತರವಾಗಿ ಕೊಡದೆ ಅವುಗಳ ಸಾರಾಂಶವನ್ನು ಮಾತ್ರವೇ ಇಲ್ಲಿ ಕೊಡುವೆವು. ಅದರಿಂದ ಮೇಲ್ಕಂಡ ಲೇಖಗಳ ಪೂರ್ಣಸ್ವರೂಪವು ವಾಚಕರಿಗೆ ವಿದಿತವಾಗ ಬಹುದು.

## ದಿಲ್ಲಿಯ ಸ್ತಂಭವು.

### ಬಡಗು ಕಡೆಯ ಮಗ್ಗಲು.

### ೧ನೆಯ ಆದೇಶವು.

“ದೇವಪ್ರಿಯನಾದ ಪ್ರಿಯದರ್ಶಿರಾಜನು ಹೀಗೆನ್ನುವನು:—‘ನನ್ನ ರಾಜ್ಯಾಭಿಷೇಕವಾದಂದಿನಿಂದ ೨೬ನೆಯ ವರ್ಷ ಈ ಲೇಖವನ್ನು ನಾನು ಕೊರೆಯಿಸಿರುವೆನು.......ಧರ್ಮದ ವಿಷಯದಲ್ಲಿ ಪ್ರೀತಿಯೂ ಶ್ರದ್ಧೆಯೂ ಸ್ವಾಭಾವಿಕವಾಗಿ ಹೆಚ್ಚುತ್ತ ಹೋಗದೆ ಇರಲಾರದು. ನನ್ನ ರಾಜ್ಯದೊಳಗಣ ಎಲ್ಲಾ ಗೃಹಸ್ಥರೂ, ಯತಿಗಳೂ ಮೊದಲಾದವರಲ್ಲಿ ಧರ್ಮಬಂಧನವಿದೆ, ಮತ್ತು ಅವರೆಲ್ಲರೂ ನಿರಂತರವೂ ಧರ್ಮಮಾರ್ಗದಿಂದ ನಡೆಯದೆ ಇರಲಾರರು. ವಿಶೇಷ ವಿಷಯವೇನೆಂದರೆ—ತಮ್ಮ ಮನೋವಿಕಾರಗಳನ್ನು ದಮನ ಮಾಡಿ, ಅವರು ಮಹತ್ವವಾದ ಜ್ಞಾನವನ್ನು ಸಂಪಾದಿಸದೆ ಇರಲಾರರು. ಏಕೆಂದರೆ ಈ ಜ್ಞಾನವೇ ನಿಜವಾದ ಜ್ಞಾನವು; ಧರ್ಮವೇ ಜ್ಞಾನದ ಜನಕನೂ, ಆಶ್ರಯದಾತನೂ, ಗುರುವೂ ಆಗಿರುವುದು. ಧರ್ಮವೇ ನಿಜವಾದ ಸುಖದ ಧಾಮವು.’”[೪೬]



೨.

“ಜಗತ್ತಿನಲ್ಲಿ ಧರ್ಮವೇ ಶ್ರೇಷ್ಠವಾದುದು. ಸತ್ಕೃತ್ಯಗಳನ್ನು ಮಾಡುವುದೂ ಅಸತ್ಕೃತ್ಯಗಳಲ್ಲಿ ಪರಾಙ್ಮುಖತೆಯನ್ನು ತೋರಿಸುವುದೂ ಇದೇ ಧರ್ಮವಾಗಿದೆ. ದಯೆ, ಔದಾರ್ಯ, ಅಂತಃಕರಣಶುದ್ಧತೆ, ಪವಿತ್ರಾಚರಣೆ ಇವು ಧರ್ಮಸಂಸ್ಕಾರದ ಮೂಲವಾಗಿವೆ. ಬಡವರು, ದುಃಖಿತರು, ಕ್ಲೇಶಾಪೇಕ್ಷಿತ ಜನರು, ಪಶು, ಪಕ್ಷಿ, ಜಲಚರ, ಸ್ಥಲಚರ ಪ್ರಾಣಿಗಳಿಗೋಸ್ಕರ ನಾನು ಅನೇಕ ಧರ್ಮಕೃತ್ಯಗಳನ್ನು ಮಾಡಿರುವೆನು; ಹಾಗೆಯೇ ಎಲ್ಲರೂ ಮಾಡ ಬೇಕು. ಈ ಪ್ರಕಾರ ಮಾಡುವವರು ಶಾಶ್ವತವಾದ ಸುಖವನ್ನು ಪಡೆಯುವರು.”

೩.

“ನನಗೆ ಸೊಗಸಾಗಿಯೂ, ಧಾರ್ಮಿಕವಾಗಿಯೂ ತೋರಿದುದರ ಪ್ರವೃತ್ತಿಯು ಕೆಡುಕಿನ ಕಡೆಗಿದ್ದರೂ ನಾನು ಅದನ್ನು ಪಾಪದಲ್ಲಿ ಗಣಿಸುವುದಿಲ್ಲ. ಇದು ಒಳ್ಳೆಯದು, ಇದು ಕೆಡುಕು ಎಂಬುದನ್ನು ಪರೀಕ್ಷಿಸುವುದಕ್ಕಾಗಿಯೇ ದೇವರು ಮನುಷ್ಯನಿಗೆ ಕಣ್ಣುಗಳನ್ನು ಕೊಟ್ಟಿರುವನು. ತಂತಮ್ಮ ದೃಷ್ಟಿಯಂತೆ ಅವರವರು ಒಳ್ಳೆಯದು ಕೆಟ್ಟದ್ದೆಂದು ಪರೀಕ್ಷಿಸ ಬೇಕು. ಅಪಕಾರ, ನಿಷ್ಠುರತೆ, ಕೋಪ, ಗರ್ವ, ದ್ವೇಷ ಎಂಬಿವುಗಳು ಕಡಮೆ ತರಗತಿಯ ಪಾಪಗಳಲ್ಲಿ ಎಣಿಸಲ್ಪಡುವುವು......”

### ಪಡುವಣ ಮಗ್ಗಲು.

೪.

“.......ರಾಜ್ಯಾಭಿಷೇಕವಾದಂದಿನಿಂದ ೨೬ನೆಯ ವರ್ಷ ನಾನು ಈ ಲೇಖವನ್ನು ಕೊರೆಯಿಸಿದೆನು. ಈ ಹೊತ್ತು ಲಕ್ಷೋಪಲಕ್ಷ ಜನರು ನನ್ನ ಭಕ್ತರಾಗಿರುವರು. ಅವರಿಂದಾಗುವ ಅಪರಾಧಗಳಿಗಾಗಿ ಅವರಿಗೆ ಮಾಡತಕ್ಕ ದಂಡ ಮತ್ತು ಶಿಕ್ಷೆಗಳನ್ನು ಎಷ್ಟೆಂದು ಇಲ್ಲಿ ಹೇಳುವೆನು....

---

[೪೬] ಈ ಭಾಷಾಂತರವು ಅಕ್ಷರಶಃವಾಗಿಯಾಗಲೀ ಪೂರ್ಣವಾಗಿಯಾಗಲೀ ಮಾಡಿದುದಲ್ಲ. ಸ್ವಾರಸ್ಯವು ತಿಳಿಯುವಂತೆ ಮಹತ್ವದ ಭಾಗವನ್ನು ಮಾತ್ರ ಇಲ್ಲಿ ಕೊಟ್ಟಿದೆ.

Digitized by ROJA MUTHIAH RESEARCH LIBRARY

ನನ್ನ ಭಕ್ತರು ಔದುಂಬರಕ್ಕೆ ಪ್ರದಕ್ಷಣೆಗಳನ್ನು ಮಾಡುವ ಸ್ಥಳಗಳಲ್ಲೆಲ್ಲಾ ಜನರು ಅವರಿಗೆ ಊಟದ ಮತ್ತು ತಿಂಡಿಯ ಸಾಮಗ್ರಿಗಳನ್ನು ಒದಗಿಸಿ ಕೊಡಬೇಕು; ಇದರಿಂದ ಅವರಿಗೆ ಹಿತವಾಗುವುದು. ತಪ್ಪುಮಾಡ ತಕ್ಕ ನನ್ನ ಭಕ್ತನು ಅಪರಾಧದ ಪ್ರಮಾಣವನ್ನು ಅನುಸರಿಸಿ ಶಿಕ್ಷೆಯನ್ನು ಹೊಂದುವನು. ಆದರೆ ದೇಹಾಂತಶಾಸನವು ಯಾರಿಗೂ ದೊರೆಯಲಿಕ್ಕಿಲ್ಲ. ಕಾರಾಗೃಹವಾಸ, ಮತ್ತು ದೇಹಾಂತಶಾಸನಗಳ ಬದಲಾಗಿ ಗಡಿದಾಟಿಸುವ ಶಿಕ್ಷೆಯು ನಿರ್ಣೀತವಾಗಿದೆ. ರಾಜಮಾರ್ಗದಲ್ಲಿ ಪ್ರಾಣವನ್ನು ತೆಗೆದುಕೊಳ್ಳುವವರು (ದರೋಡೆಯವರು) ಅವರು ಬಡವರಾಗಿರಲಿ, ಶ್ರೀಮಂತರಾಗಿರಲಿ—ಅವರಿಗೆ ನಾನು ನಿಶ್ಚಯಿಸಿದ ಮೂರು ವಿಶೇಷ ದಿವಸಗಳಲ್ಲಿ ಪಾಶದ ಮೂಲಕ ದೇಹಾಂತಶಾಸನವು ಕೊಡಲ್ಪಡದು. ಯಾರು ಸಜೀವ ಪ್ರಾಣಿಗಳಿಗೆ ಗಾಯಗಳನ್ನು ಮಾಡುವರೋ, ಅಥವಾ ಅವುಗಳ ಜೀವವನ್ನು ತೆಗೆದುಕೊಳ್ಳುವರೋ, ಕೈಕಾಲುಗಳನ್ನು ಕತ್ತರಿಸುವುದರ ಬದಲಾಗಿ ಅವರ ಮೇಲೆ ದಯೆಯಿಟ್ಟು ಅವರು ಉಪವಾಸವಿಡಲ್ಪಡುವರು. ಸಾರಾಂಶವೇನೆಂದರೆ—ಅಪರಾಧಿಗಳ ಮೇಲೆ ಕೂಡ ನಾನು ಕೃಪಾದೃಷ್ಟಿಯನ್ನು ಇಡುವೆನು."

## ತೆಂಕಣ ಮಗ್ಗಲು.

೫.

"..... ಮುಂದೆ ಹೇಳಿದ ಗಿಳಿ, ಮೈನಾ, ಅಡವಿಯ ನೀರುಕೋಳಿ, ನೀರುಕೋಳಿ, ಗೂಬೆ, ರಣಹಾಳೇಹದ್ದು, ಕಣ್ಣುಕಪ್ಪಟೆ, ಅಂಬಕಪಿಲ್ಲಿಕ, ಕಾಗೆ, ವೇದವೇಯಕ, ಶಂಕೂಜಮವ, ಕಫತಸಯಕ...... ಪಾರಿವಾಳ ಈ ಪ್ರಾಣಿಗಳನ್ನು ಕೊಲ್ಲ ಬಾರದು; ಮತ್ತು ಚತುಷ್ಪಾದಗಳಲ್ಲಿ ಆಡು, ಕುರಿ, ಹೆಣ್ಣುಹಂದಿ, ಎಂಬಿವನ್ನು ತಿನ್ನ ಬಾರದು. ಪಶುಪಕ್ಷಿಗಳನ್ನು ಮಾಂಸದಾಶೆಗಾಗಲಿ ಮನೋಲ್ಲಾಸಕ್ಕಾಗಲಿ ವಧಿಸಲೂ ಪೀಡಿಸಲೂ ಬಾರದು..... ಪ್ರತಿ ತಿಂಗಳ ಚತುರ್ದಶಿಯ ಮತ್ತು ಹುಣ್ಣಿಮೆಯ ಅಥವಾ ಅಮಾವಾಸ್ಯೆಯ ದಿನ ಎತ್ತುಗಳನ್ನು ಮೇಯುವುದಕ್ಕೆ ಬಿಡಕೂಡದು."

## ಮೂಡಣ ಮಗ್ಗಲು.

೬.

"......ನನ್ನ ಆಳಿಕೆಯ ೧೨ನೆಯ ವರ್ಷ ನಾನು ಲೋಕಹಿತಕ್ಕಾಗಿ ಒಂದು ಆದೇಶವನ್ನು ಪ್ರಸಿದ್ಧಪಡಿಸಿದ್ದೆನು. ಅದನ್ನು ಈಗ ತೆಗೆದು ಹಾಕಿ, ನನ್ನ ಪೂರ್ವದ ಧರ್ಮವು ಪಾಪಮೂಲಕವಾಗಿತ್ತೆಂಬುದನ್ನು ಹೇಳಿ,



ಧರ್ಮದ ವಿಷಯದಲ್ಲಿ ಭಿನ್ನಮತಗಳುಳ್ಳಂತಹವರಿಗಾಗಿ ನಾನು ಪ್ರಾರ್ಥಿಸಿ, ಅವರೂ ಬೇಗನೆ ನನ್ನ ಪಂಥವನ್ನು ಸ್ವೀಕರಿಸುವರೆಂತಲೂ ಶಾಶ್ವತವಾದ ಸುಖವನ್ನು ಸಂಪಾದಿಸುವರೆಂತಲೂ ಕೋರುವೆನು. ಆದುದರಿಂದ ಈ ಆದೇಶವು ಪ್ರಸಿದ್ಧ ಪಡಿಸುವುದರಲ್ಲಿ ಬಂದಿದೆ.

೭.

"......ಪೂರ್ವದ ರಾಜರು ಹೀಗೆಯೇ ಇಚ್ಛಿಸಿ ಇಚ್ಛಿಸಿ ಮಡಿದುಹೋದರು. ರಾಜ್ಯಕರ್ತರು ಧರ್ಮಾಂತರವನ್ನು ಮಾಡುವುದರಿಂದ ಹೇಗೆ ಧರ್ಮವು ಉತ್ಕರ್ಷವನ್ನು ಹೊಂದುವುದು? ಕಡಮೆಯ ತರಗತಿಯ ಜನರು ಧರ್ಮಾಂತರ ಮಾಡುವುದರಿಂದ ನಿಜವಾದ ಧರ್ಮವು ವೃದ್ಧಿಯಾಗುವುದಾದರೆ, ರಾಜ್ಯಪದಸ್ಥರೂ ಮಹಾಕುಲದಲ್ಲಿ ಜನಿಸಿದವರೂ ಯಾವುದಾದರೊಂದು ಧರ್ಮವನ್ನು ಸ್ವೀಕರಿಸಲಾಗಿ, ಅದು ಎಷ್ಟು ಉತ್ಕರ್ಷವನ್ನು ಪಡೆಯ ಬಹುದು? ನಾನು ಇಂದಿನಿಂದ ಧರ್ಮೋಪದೇಶಕ್ಕಾಗಿ ಧರ್ಮೋಪದೇಶಕರನ್ನು ಕಳುಹುವುದೇ ಮೊದಲಾದ ಸಂಗತಿಗಳನ್ನು ಮಾಡ ತೊಡಗಿರುವೆನು. ಇದು ಎಲ್ಲರಿಗೂ ತಿಳಿಯಲಿ."

೮.

"..... ಮತ್ತು ಧರ್ಮೋತ್ಕರ್ಷವಾಗ ತೊಡಗಿದ ಹಾಗೆಯೇ ಪ್ರತಿಪಕ್ಷಕ್ಕೂ ಹೆಚ್ಚುಹೆಚ್ಚಾಗಿ ಬಲವು ದೊರೆಯುವುದು. ಆದುದರಿಂದ ಜನರಿಗೆ ಧರ್ಮೋಪದೇಶವು ದೊರೆಯುವಂತೆ ವ್ಯವಸ್ಥೆಯನ್ನು ಮಾಡುತ್ತಿರುವೆನು. ಅದರ ಮೂಲಕವಾಗಿ ಜನರಿಗೆ ನಿಜವಾದ ಜ್ಞಾನವು ಪ್ರಾಪ್ತವಾಗುವುದು; ಅವರು ಅದನ್ನು ಇತರರಿಗೆ ಕೊಟ್ಟು, ಧರ್ಮವನ್ನು ಪ್ರಸಾರಗೊಳಿಸ ಬೇಕು. ಅವರ ಲಕ್ಷೋಪಲಕ್ಷ ಶಿಷ್ಯರಿಗೂ ನಾನು ಅದನ್ನೇ ಹೇಳುವೆನು; ಅವರೂ ಜನರಿಗೆ ಧರ್ಮಜ್ಞಾನವನ್ನು ಸಂಪಾದಿಸಿ ಕೊಡಬೇಕು......"

"ದಾರಿಯಿಂದ ಹೋಗಿ ಬರುವ ಮನುಷ್ಯಾದಿ ಪ್ರಾಣಿಗಳಿಗೆ ಬಿಸಿಲಿನಲ್ಲಿ ನೆರಳಿನ ಸ್ಥಳವು ದೊರೆಯ ಬೇಕೆಂದರಿತು, ನಾನು ದಾರಿಯಲ್ಲೆಲ್ಲಾ ಔದುಂಬರದ ಮತ್ತು ಮಾವಿನ ಸಾಲುಮರಗಳನ್ನು ನೆಡಿಸಿರುವೆನು. ಮತ್ತು ಪ್ರತಿ ಅರ್ಧ ಹರದಾರಿಗೆ ಬಾವಿಗಳನ್ನೂ ಧರ್ಮಶಾಲೆಗಳನ್ನೂ ಕಟ್ಟಿಸಿರುವೆನು. ಸಾರಾಂಶವೇನೆಂದರೆ—ದಾರಿಗರ ಸುಖ ಸಮಾಧಾನಕ್ಕೋಸ್ಕರ ನಾನು ಮಾಡಿದಂತಹ ವ್ಯವಸ್ಥೆಗಳನ್ನೇ ಅನ್ಯರೂ ಮಾಡಬೇಕು."

"ಧರ್ಮಶಾಸ್ತ್ರ ಪ್ರವೀಣರಾದಂತಹ ಗುರುಗಳು ದಾನಮಾಡಲು ಸಮರ್ಥರಾದಂತಹ ಶ್ರೀಮಂತರಲ್ಲಿಯೂ, ನಾಸ್ತಿಕ ಮಂಡಲದಲ್ಲಿಯೂ,

Digitized by ROJA MUTHIAH RESEARCH LIBRARY

ಗೃಹಸ್ಥರಲ್ಲಿಯೂ, ಯತಿಗಳಲ್ಲಿಯೂ, ಬ್ರಾಹ್ಮಣರಲ್ಲಿಯೂ, ಕೇವಲ ದರಿದ್ರರಲ್ಲಿಯೂ, ಮುಂತಾಗಿ ಎಲ್ಲಾ ಕಡೆಗಳಲ್ಲಿಯೂ ಪ್ರವೇಶಿಸ ಬೇಕು. ನನ್ನ ರಾಣಿವಾಸದಲ್ಲಿ ಕೂಡ ಯುಕ್ತಿಯಿಂದಲೂ ಮರ್ಯಾದೆಯಿಂದಲೂ ಪ್ರವೇಶಿಸ ಬೇಕು. ಮತ್ತು ಎಲ್ಲರೂ ಸದ್ಧರ್ಮದಲ್ಲಿ ಪ್ರವರ್ತಿಸುವಂತೆ, ಅವರ ಮನಸ್ಸನ್ನು ಒಲಿಸ ಬೇಕು. ಧರ್ಮಯೋಗದಿಂದ ದಯೆ, ಔದಾರ್ಯ, ಸತ್ಯ, ಪವಿತ್ರತೆ, ಪ್ರಾಮಾಣಿಕತೆ ಮುಂತಾದ ಸದ್ಗುಣಗಳು ಉತ್ಕರ್ಷ ಹೊಂದ ಬೇಕಾದುದೇ ಧರ್ಮದ ನಿಜವಾದ ರಹಸ್ಯವು. ನಾನು ಯಾವ ಯಾವ ಧಾರ್ಮಿಕ ಕೃತ್ಯಗಳನ್ನು ಮಾಡಿರುವೆನೋ ಅವನ್ನೇ ಕರ್ತವ್ಯವೆಂದು ತಿಳಿದು, ಎಲ್ಲರೂ ಮಾಡಬೇಕು. ತಾಯಿ, ತಂದೆ, ಗುರುಗಳ ಸೇವೆಯನ್ನು ಮಾಡುವುದೂ, ಹಿರಿಯರಲ್ಲಿ ಆದರವನ್ನು ತೋರಿಸುವುದೂ, ಬ್ರಾಹ್ಮಣರು, ಶ್ರಾಮಣರು, ನಿರಾಶ್ರಿತಬಾಲಕರು, ಬಡವರು, ದಾಸರು, ಸೇವಕರು, ಚಾರಣರು ಮುಂತಾದವರಲ್ಲಿ ದಯವಿಡುವುದೂ ಇದೇ ಧರ್ಮದ ಸಾರವು. ಧಾರ್ಮಿಕಕೃತ್ಯಗಳನ್ನು ಮಾಡುವುದರಿಂದಲೂ, ಧರ್ಮಶೀಲರಿಗೆ ಬಾಧೆಯಾಗದಂತೆ ವ್ಯವಸ್ಥೆಯಲ್ಲಿ ಇಡುವುದರಿಂದಲೂ, ಧರ್ಮವು ವರ್ಧಿಸುವುದು. ಇವೆರಡೂ ಉಪಾಯಗಳನ್ನು ನಾನು ಮಾಡುತ್ತಿರುವೆನು. ಅವು ನನ್ನ ಪುತ್ರಪೌತ್ರರ ವರೆಗೆ ನಡೆಯಲಿ."

## ಅಲಹಾಬಾದಿನಲ್ಲಿನ ಸ್ತಂಭವು.

### ರಾಣಿಯ ಆದೇಶವು.

"ದೇವಪ್ರಿಯನ ಆಜ್ಞೆಯಿಂದ ಯಾವತ್ತೂ ಪ್ರಧಾನರಿಗೆ ತಿಳುಹಿಸುವುದೇನೆಂದರೆ—....ಈ ಮಾವಿನ ಗಿಡುಗಳನ್ನು ಎರಡನೆಯ ರಾಣಿಯೂ,[೪೭] ಕಿಚಿಗನಿ ಎಂಬ ಮೂರನೆಯ ರಾಣಿಯೂ[೪೮] ಕೊಟ್ಟಿರುವರು........"

[೪೭] ಈ ರಾಣಿಯು ಅಸಂಧಿಮಿತ್ರೆಯಾಗಿರ ಬಹುದು. ಇವಳು ಬೌದ್ಧಧರ್ಮದಲ್ಲಿ ವಿಶೇಷವಾದ ಶ್ರದ್ಧೆಯುಳ್ಳವಳಾಗಿ ಧರ್ಮಕೃತ್ಯಗಳ ಕಡೆಗೆ ತುಂಬಾ ಲಕ್ಷ್ಯವನ್ನು ಕೊಡುತ್ತಿದ್ದಳು. ಧರ್ಮೋತ್ಕರ್ಷಕಾರ್ಯದಲ್ಲಿ ಇವಳು ತನ್ನ ಪತಿಗೆ ಬಹಳ ಸಹಾಯವನ್ನು ಮಾಡುತ್ತಿದ್ದಳು. Bhilsa Topes, p. 114 ಇದರಲ್ಲಿಯೂ ಈ ರಾಣಿಯನ್ನು ಹೀಗೆಯೇ ಕೊಂಡಾಡಿರುವರು.

[೪೮] ಇವಳು ಮೂರನೆಯ ರಾಣಿಯಾದ ಕಿಛಿಗಿನಿ (?). ರಾಜನು ಇವಳನ್ನು ತನ್ನ ಆಳಿಕೆಯ ೩೪ನೆಯ ವರ್ಷದಲ್ಲಿ ಲಗ್ನ ಮಾಡಿಕೊಂಡನೆಂದು ಟರ್ನರ್ ಸಾಹೇಬರು ಬರೆದಿರುವರು. ಈ ರಾಣಿಯರ ಹೊರತು ಅಶೋಕನಿಗೆ ತಿಷ್ಯರಕ್ಷಿತಾ ಮತ್ತು ಪದ್ಮಾವತೀ (ಕುನಾಲನ ತಾಯಿ) ಎಂಬ ರಾಣಿಯರಿದ್ದರು. Burnouf: Introductional Historic du Buddhism Indien, 149, 403, 405; Corpus Inscriptionum Indicarum Vol. iii p. 141.



## ಸಾಂಚಿ ಎಂಬಲ್ಲಿನ ಸ್ತಂಭವು.

ಈ ಸ್ತಂಭವು ಹಲವೆಡೆಯಲ್ಲಿ ಒಡೆದಿರುವುದರಿಂದ, ಲೇಖವು ಸ್ಪಷ್ಟವಾಗಿ ಕಾಣುವುದಿಲ್ಲ. ಆದರೂ ಮೂರನೆಯ ಸಾಲಿನಿಂದ ಮುಂದೆ ಓದ ಬರುವ ಒಂದು ವಾಕ್ಯದಲ್ಲಿ "ಕ್ಷುಧಿತರಾದ ಧರ್ಮಗುರುಗಳಿಗೋಸ್ಕರ ಒಬ್ಬ ಉದಾರನೂ ಧಾರ್ಮಿಕನೂ ಆದ ಗೃಹಸ್ಥನು ಕೆಲವು ವ್ಯವಸ್ಥೆಗಳನ್ನು ಮಾಡಿರುವನು" ಎಂದೂ, ಕಡೆಯ ಎರಡು ಸಾಲುಗಳಲ್ಲಿ "ತೃಷಾರ್ತರಿಗೆ ಕುಡಿಯುವುದಕ್ಕೆ ಕರ್ಪೂರದ ವಾಸನೆಯ ತಣ್ಣೀರು ದೊರೆಯಬೇಕೆಂದು ನಾನು ಕೋರುವೆನು. ಈ ವ್ಯವಸ್ಥೆಯು ಚಿರಕಾಲ ಬಾಳಲಿ" ಎಂದೂ ಇದೆ.

ಈ ಲೇಖದ ಹೊರತು ಬಾರಾಬರೆಂಬಲ್ಲಿನ ಗುಹೆಯೊಳಗಿನಂತಹ ಇತರ ಚಿಕ್ಕಚಿಕ್ಕ ಲೇಖಗಳು ಹಲವುಂಟು. ಅವುಗಳಿಂದ ಅಶೋಕ ಚರಿತ್ರದೊಳಗಣ ಅನೇಕ ಸಂಗತಿಗಳ ವಿಷಯದಲ್ಲಿ ಪ್ರಕಾಶವು ಬೀಳ ಬಹುದು. ಅವುಗಳಲ್ಲಿ ಕೆಲವನ್ನು ಕುರಿತು ಇಲ್ಲಿ ಉಲ್ಲೇಖಿಸುವೆವು.

ವೈರಾಟೆಂಬಲ್ಲಿನ ಲೇಖದಲ್ಲಿ ಹೀಗೆ ಬರೆದಿದೆ.—

"ದೇವಪ್ರಿಯನಾದ ಪ್ರಿಯದರ್ಶಿರಾಯನು ಹೇಳುವುದೇನೆಂದರೆ— 'ನಾನು ಎರಡೂವರೆ ವರ್ಷಗಳ ವರೆಗೆ ಉಪಾಸಕನಾಗಿದ್ದೆನು. ಆಗ ನಾನು ಧರ್ಮದ ವಿಷಯದಲ್ಲಿ ಹೆಚ್ಚು ಆಸ್ಥೆಯನ್ನು ತೋರಿಸಿರಲಿಲ್ಲ. ಆ ಬಳಿಕ ಹೋದ ವರ್ಷ ನಾನು ಸಂಘದ ದರ್ಶನವನ್ನು ತೆಗೆದುಕೊಂಡೆನು. ಅಂದಿನಿಂದ ಜನರು ಜಂಬೂದ್ವೀಪದ, ಮುಂಚಿನ ದೇವರುಗಳ ದೇವತ್ವವನ್ನು ನಂಬದ ಹಾಗಾಗಿರುವರು.[೪೯] ಇದು ಧರ್ಮದ ವಿಷಯದಲ್ಲಿರುವ ನನ್ನ ಆಸ್ಥೆಯ ಫಲವು. ಕೇವಲ ಅಧಿಕಾರದ ಬಲದಿಂದ ಈ ಫಲವು ಪ್ರಾಪ್ತವಾಗುವುದಿಲ್ಲ. ಸ್ವರ್ಗವು ಎಂತಹ ದುಷ್ಪ್ರಾಪ್ಯವಾದರೂ, ಧರ್ಮಾಸಕ್ತತೆಯಿಂದ ಅದು ದುರ್ಬಲರಿಗೂ ಪ್ರಾಪ್ತವಾಗುವುದು. ಆದುದರಿಂದಲೇ (ಈ ಲೇಖದಿಂದ) ಜನರಿಗೆ ತಿಳುಹಿಸುವುದೇನೆಂದರೆ—ಸಬಲರಾಗಿರಲಿ, ದುರ್ಬಲರಾಗಿರಲಿ (ಉಚ್ಚಪದವಿಯವರಾಗಿರಲಿ, ನೀಚಪದವಿಯವರಾಗಿರಲಿ) ಎಲ್ಲರೂ

[೪೯] ಸಿದ್ಧಪುರದೊಳಗಣ ಲೇಖಗಳಲ್ಲಿಯೂ ಸರಿಯಾಗಿ ಇದೇ ವೃತ್ತಾಂತವುಂಟು. Epigraphica Indica, Vol .iii pp. 138-9.



Digitized by ROJA MUTHIAH RESEARCH LIBRARY

ಧರ್ಮದ ಮೇಲೆ ಆಸ್ಥೆಯನ್ನು ಇಡಬೇಕು; ಪರದೇಶಿಯರಿಗೂ ಧರ್ಮೋಪದೇಶವನ್ನು ಮಾಡಬೇಕು; ಮತ್ತು ಇಂತಹ ಆಸ್ಥೆಯನ್ನು ಚಿರಕಾಲವೂ ಇಡಬೇಕು. ಹಾಗೆ ಮಾಡಿದುದೇ ಆದರೆ (ಧಾರ್ಮಿಕ) ಉನ್ನತಿಯು ಅಧಿಕವಾಗಿಯೂ ನಿರಾತಂಕವಾಗಿಯೂ ನಿಲ್ಲುವುದು.'"

ಸಹಸ್ರರಾಮ ಎಂಬಲ್ಲಿನ ಲೇಖದಲ್ಲಿ ಹೀಗೆ ಬರೆದಿದೆ.—[೫೦]

"ಉಪದೇಶಕರ ಮೂಲಕವಾಗಿಯೇ ಧರ್ಮವು ಪ್ರಸಾರವಾಗುತ್ತಿದೆ. (ಆದುದರಿಂದ) ಇನ್ನೂರೈವತ್ತಾರು (೨೫೬) ಧರ್ಮೋಪದೇಶಕರನ್ನು ಕಳುಹಿಸಿರುವೆನು. ಗುಹೆಗಳಲ್ಲಿಯೂ, ಸ್ತಂಭಗಳಲ್ಲಿಯೂ ಇದನ್ನು ಕೊರೆಯಿಸಿರಿ."

ರೂಪನಾಥದಲ್ಲಿ ದೊರೆತ ಲೇಖದಲ್ಲಿಯೂ ಅಕ್ಷರಶಃ ಇದೇ ವೃತ್ತಾಂತವುಂಟು.

ನೇಪಾಲದೊಳಗಣ ಪಡೀರಾ ಮತ್ತು ನಿಗ್ಲೀವದಲ್ಲಿ ದೊರೆತ ಅಶೋಕನ ಆದೇಶಗಳ ಸಂಬಂಧವಾಗಿ ಡಾ॥ ಬುಲ್ಹರ್ ಸಾಹೇಬರು 'ಎಪಿಗ್ರೆಫಿಕಾ ಇಂಡಿಕಾ' ಎಂಬೀ ಪುಸ್ತಕದ ೫ನೆಯ ಸಂಚಿಕೆಯಲ್ಲಿ ಕೆಳಗೆ ಬರೆದ ವೃತ್ತಾಂತವನ್ನು ಕೊಟ್ಟಿರುವರು:—

"ಈ ಆದೇಶಗಳು ಡಾ ॥ ಫುರರ್ ಸಾಹೇಬರಿಗೆ ಅನುಕ್ರಮವಾಗಿ ಕ್ರಿ. ಶ. ೧೮೯೬ನೆಯ ಡಿಸೆಂಬರ್ ಮತ್ತು ಕ್ರಿ. ಶ. ೧೮೯೫ನೆಯ ಮಾರ್ಚ್ ತಿಂಗಳಲ್ಲಿಯೂ ದೊರೆತುವು. ಪಡೀರಾ ಮತ್ತು ನಿಗ್ಲೀವ, ಈ ಸ್ಥಳಗಳೆರಡೂ ನೇಪಾಳದಲ್ಲಿವೆ. ಈ ಆದೇಶಗಳು ಶಿಲಾಸ್ತಂಭಗಳ ಮೇಲಿದ್ದುವು. ಇವುಗಳಲ್ಲಿ ಪಡೀರಾದಲ್ಲಿನ ಸ್ತಂಭವು ಭೂಮಿಯಲ್ಲಿ ಮೂರು ಅಡಿ ಹುಗಿಯಲ್ಪಟ್ಟಿದ್ದರೂ ಅದು ಅಭಂಗವಾದಂತಹ ಸ್ಥಿತಿಯಲ್ಲಿ ದೊರೆಯಿತು; ಎರಡನೆಯದು ಮಾತ್ರ ಕೆಲವು ಸ್ಥಳಗಳಲ್ಲಿ ಭಂಗವಾಗಿತ್ತು. ಈ ಎರಡನೆಯದರ ಮೇಲಣ ಮೂರನೆಯ ಸಾಲಿನಲ್ಲಿ ಮೊದಲನೆಯ ಐದು ಅಕ್ಷರಗಳೂ, ನಾಲ್ಕನೆಯ ಸಾಲಿನಲ್ಲಿ ಮೊದಲನೆಯ ಏಳು ಅಕ್ಷರಗಳೂ ಹೋಗಿವೆ.

ಈ ಆದೇಶಗಳು ಕ್ರಿ. ಶ. ಪೂ. ಮೂರನೆಯ ಶತಕದ ಮಾಗಧೀ ಭಾಷೆಯಲ್ಲಿ ಬರೆಯಲ್ಪಟ್ಟುದರಿಂದ, ಖಾಲಸಿ, ಧೌಲಿ, ಔಗಡ, ವೈರಾಟ, ಸಹಸ್ರರಾಮ ಇತ್ಯಾದಿ ಸ್ಥಲಗಳೊಳಗಣ ಲೇಖಗಳ ಭಾಷೆಗೆ ಈ ಭಾಷೆಯು ಬಹಳ ಮಟ್ಟಿಗೆ ಹೋಲುತ್ತಿದೆ."

೫೦ Indian Antiquary, Vol. xx. p. 165.

Digitized by ROJA MUTHIAH RESEARCH LIBRARY



## ಪಡೀರದಲ್ಲಿನ ಆದೇಶವು.

"ದೇವತಾಪ್ರಿಯನಾದ ಪ್ರಿಯದರ್ಶಿರಾಜನು ತನ್ನ ರಾಜ್ಯಾಭಿಷೇಕವಾದ ಇಪ್ಪತ್ತನೆಯ ವರ್ಷದಲ್ಲಿ ಇಲ್ಲಿಗೆ ಬಂದನು. ಮತ್ತು ಇಲ್ಲಿ ಬುದ್ಧ ಶಾಕ್ಯಮುನಿಯು ಜನಿಸಿದನೆಂದು ಈ ಸ್ಥಲದಲ್ಲಿ ಈ ಶಿಲಾಸ್ತಂಭವನ್ನು ಹೂಳಲು ಅಪ್ಪಣೆಯನ್ನು ಇತ್ತನು. ಈ ಲುಂಬಿನೀ ಗ್ರಾಮದಲ್ಲಿ ಬುದ್ಧನು ಅವತರಿಸಿದನೆಂಬುದರಿಂದ, ಇಲ್ಲಿನ ತೆರಿಗೆಯನ್ನು ತೆಗೆದು ಹಾಕಿ, ಇಲ್ಲಿ ಧನವನ್ನು ಹಂಚಿದರು."

ಇದರಿಂದ, ಬುದ್ಧನ ಜನ್ಮಸ್ಥಾನವನ್ನು ನಿಶ್ಚಯಿಸುವ ವಿಷಯದಲ್ಲಿ ಈ ಲೇಖವು ಅತ್ಯುಪಯುಕ್ತವಾದುದೆಂದು ಕಂಡು ಬರುವುದು.

## ನಿಗ್ಲೀವದಲ್ಲಿನ ಆದೇಶವು.

"ದೇವಪ್ರಿಯನಾದ ಪ್ರಿಯದರ್ಶಿರಾಜನ ರಾಜ್ಯಾಭಿಷೇಕವಾದ ಹದಿನಾಲ್ಕು ವರ್ಷಗಳಾದ ಅನಂತರದಲ್ಲಿ ಅವನು ಬುದ್ಧಕೋನಾಕಮನನ ಸ್ತೂಪವನ್ನು ಎರಡನೆಯ ಸಲ ವಿಸ್ತರಿಸಿದನು. ರಾಜ್ಯಾಭಿಷೇಕವಾದ ಇಪ್ಪತ್ತನೆಯ ವರ್ಷ ಸ್ವತಃ ಅವನೇ ಬಂದು ಪೂಜೆಯನ್ನು ಅರ್ಪಿಸಿದನು; ಮತ್ತು ಈ ಸ್ತಂಭವು ಅವನ ಆಜ್ಞೆಯಿಂದ ನೆಡಿಸಲ್ಪಟ್ಟಿತು."

ಈ ಆದೇಶವು ಕೂಡ ಬೌದ್ಧಧರ್ಮದ ಇತಿಹಾಸವನ್ನು ಬರೆಯುವ ಕಾರ್ಯದಲ್ಲಿ ಬಹಳ ಉಪಯೋಗವುಳ್ಳುದಾಗಿದೆ. ಅಶೋಕನು ತನ್ನ ಆಳಿಕೆಯ ಹದಿನೈದನೆಯ ವರ್ಷದಲ್ಲಿ ಬುದ್ಧಕೋನಾಕಮನನ ಸ್ತೂಪವನ್ನು ವಿಸ್ತರಿಸಿದುದರಿಂದ, ಆ ರಾಜನಿಗಿಂತ ಮೊದಲು ಎಂದರೆ, ಕ್ರಿ. ಶ. ಪೂ. ೨೫೯ ವರ್ಷದ ಮೊದಲೇ ಮೇಲ್ಕಂಡ ಸ್ತೂಪವು ಅಸ್ತಿತ್ವದಲ್ಲಿತ್ತೆಂಬುದು ವ್ಯಕ್ತವಾಗುವುದು. ಕೋನಾಕಮನ ಬುದ್ಧನು, ಗೌತಮಬುದ್ಧನ ತರುವಾಯ ತುಂಬಾ ಕಾಲವು ಕಳೆದ ಮೇಲೆ ಹುಟ್ಟಿದನಾದುದರಿಂದ, ಗೌತಮಬುದ್ಧನ ನಿರ್ವಾಣಕಾಲವು, ಕೆಲವು ಪಂಡಿತರು ಹೇಳುವಂತೆ ಕ್ರಿ. ಶ. ಪೂ. ೨೫೦ ಅಥವಾ ೩೨೫ನೆಯ ವರ್ಷವೆಂದು ನಿಶ್ಚೈಸಲು ಬರುವುದಿಲ್ಲ. ಅದಕ್ಕೂ ನೂರು ವರ್ಷ ಪೂರ್ವದಲ್ಲಿ ಎಂದರೆ ಕ್ರಿ. ಶ. ಪೂ. ೪೭೭ರಲ್ಲಿ ಆತನು ಇದ್ದಿರ ಬಹುದೆಂದು ತೋರುತ್ತಿದೆ.

ಈ ಲೇಖಗಳಿಂದ, ಅಶೋಕನು ತನ್ನ ಆಳಿಕೆಯ ಇಪ್ಪತ್ತೊಂದನೆಯ ವರ್ಷ ಯಾತ್ರೆಮಾಡುತ್ತ ಮಾಡುತ್ತ, ಲುಂಬಿನಿ, ಕೋನಾಕಮನ ಬುದ್ಧನ ಸ್ತೂಪದ ಬಳಿಯಲ್ಲಿ ಬಂದಿದ್ದನೆಂದೂ ಇಷ್ಟೆ ಅಲ್ಲದೆ, ಅವನು ಬುದ್ಧನ ನಿರ್ವಾಣಭೂಮಿ, ರಾಮಗ್ರಾಮ, ಕಪಿಲವಸ್ತು, ಕೃತಛ್ಛಂದದ ಸ್ತೂಪ, ಶ್ರಾವತ್ತಿನಗರ ಮೊದಲಾದ ಸ್ಥಳಗಳಲ್ಲಿ ಬಂದಿದ್ದನೆಂದೂ, ದಿವ್ಯಾವದಾನವೆಂಬ ಗ್ರಂಥದಲ್ಲಿ ಬರೆದುದು ಬಹುಶಃ ನಿಜವಿರ ಬಹುದು ಎಂದು ತೋರುವುದು. ಇದೇ ಅಶೋಕನ ಚರಿತ್ರಕ್ಕೂ ಈ ಆದೇಶಗಳಿಗೂ ಇರುವ ಸಂಬಂಧವು. ಇದಲ್ಲದೆ, ಅಶೋಕನ ಆಜ್ಞೆಯಿಂದ ಈ ಸ್ಥಳದಲ್ಲಿ ಸ್ತಂಭಗಳನ್ನು ಹೂಳಿದರೆಂದೂ ಲುಂಬಿನಿನಗರದ ತೆರಿಗೆಯನ್ನು ತೆಗೆದು ಹಾಕಿದರೆಂದೂ ತಿಳಿಯುವುದರಿಂದ, ಆ ಕಾಲದಲ್ಲಿ ಅಶೋಕನ ರಾಜ್ಯಮರ್ಯಾದೆಯು ನೇಪಾಳದ ವರೆಗೆ ಹೋಗಿರ ಬಹುದೆಂಬುದು ಕೂಡ ಈ ಮೂಲಕವಾಗಿ ನಿಷ್ಪನ್ನವಾಗುತ್ತಿದೆ.

ಬೌದ್ಧಶಾಸ್ತ್ರಗ್ರಂಥಗಳ ಸಂಶೋಧನೆಗಾಗಿ ಅಶೋಕನು ಮಹಾಸಭೆಯನ್ನು ಕೂಡಿಸಿದ್ದನು. ಆ ಸಂಬಂಧದಲ್ಲಿ ಒಂದು ಲೇಖವುಂಟು. ಅದೇನೆಂದರೆ.—

"ರಾಜಾಪ್ರಿಯದರ್ಶಿಯು ಮಾಗಧ ಸಂಘಕ್ಕೆ ಅಭಿವಾದನವನ್ನು ಮಾಡಿ, ಸಭಾಸದರ ಆಯುಷ್ಯವೃದ್ಧಿಯನ್ನೂ ಸುಖವೃದ್ಧಿಯನ್ನೂ ಬಯಸುತ್ತಿರುವನು. ಪೂಜ್ಯ ಮಹಾರಾಜರೇ, ಬುದ್ಧ, ಧರ್ಮ, ಸಂಘ ಇವುಗಳನ್ನು (ಮೂರು ರತ್ನಗಳನ್ನು) ಎಷ್ಟು ಪೂಜ್ಯವಾದುವುಗಳೆಂದು ನಾನು ತಿಳಿಯುತ್ತಿರುವೆನೆಂಬುದು ತಮಗೆ ವಿದಿತವೇ ಆಗಿದೆ. ಮಹಾರಾಜರೇ, ಬುದ್ಧನು ಹೇಳಿದುದೆಲ್ಲಾ ಕೇವಲ ಸುಭಾಷಿತವೇ ಸರಿ. (ಆದುದರಿಂದ) ಅದನ್ನು ನನ್ನಿಂದಾದಷ್ಟು ದೂರದ ವರೆಗೆ ಪ್ರಸಾರಗೊಳಿಸ ಬೇಕೆಂದು ನಾನು ನಿಶ್ಚೈಸಿರುವೆನು. ಅದು ಕೊನೆಗಂಡರೆ ಸದ್ಧರ್ಮವು ಚಿರಸ್ಥಾಯಿಯಾಗಿ ನೆಲೆಗೊಳ್ಳುವುದು. ಪೂಜ್ಯರೇ, ಧರ್ಮ ಪರಿಯಾತ್ರೆಯಲ್ಲಿ (ಧರ್ಮಗ್ರಂಥಗಳಲ್ಲಿ) ವಿನಯಸಮುತ್ಕರ್ಷಿ, ಆರ್ಯವಸಾನಿ, ಅನಾಗತಭಯಾನಿ, ಮುನಿಗಾಥಾ, ಮೋನೇಯ ಸೂತ್ರ, ಉಪತಿಷ್ಯಪ್ರಶ್ನ, ಲಾಘುಲೋವಾದ ಇವುಗಳು ಮಾತ್ರವೇ ಸಮಾವೇಶವಾಗುವುವು...... ಪೂಜ್ಯಮಹಾಶಯರೇ, ಅನೇಕ ಭಿಕ್ಷುಕಭಿಕ್ಷುಣಿಯರು ಯಾವಾಗಲೂ ಈ ಧರ್ಮಗ್ರಂಥಗಳ ಶ್ರವಣಚಿಂತನೆಗಳನ್ನು ಮಾಡಬೇಕೆಂದು ನಾನು ಬಯಸುವೆನು. ಹಾಗೆ ಮಾಡಿದುದಾದರೆ ಉಪಾಸಕರೂ ಹಾಗೇ ಮಾಡುವರು. ಈ ಉದ್ದೇಶದಿಂದಲೇ, ನನ್ನ ಕೋರಿಕೆಯು ಎಲ್ಲರಿಗೂ ತಿಳಿಯ ಬೇಕೆಂದು ಈ ಲೇಖವು ಬರೆದಿಡುವುದರಲ್ಲಿ ಬಂದಿದೆ."[೫೧]



ಈ ಲೇಖದ ಸಂಬಂಧದಲ್ಲಿ ಕೆಲವು ಸಂಗತಿಗಳು ವಿಚಾರಾರ್ಹಗಳಾಗಿವೆ. ಈ ಲೇಖಗಳು ಬೌದ್ಧಶಾಸ್ತ್ರಗ್ರಂಥಗಳ ಸಂಶೋಧನೆಗಾಗಿ ಕೂಡಿದ ಸಭಾಸದರನ್ನು ಉಲ್ಲೇಖಿಸಿ ಬರೆಯಲ್ಪಟ್ಟವೆ ಎಂಬುದನ್ನು ಮೇಲೆ ಹೇಳಿರುವೆವು. ಆ ಕಾಲದಲ್ಲಿ ಬೌದ್ಧಮತದಲ್ಲಿ ಹದಿನೆಂಟು ಸಂಪ್ರದಾಯಗಳು ಉಂಟಾಗಿದ್ದುವು; ಮತ್ತು ಪ್ರತಿಯೊಂದು ಸಂಪ್ರದಾಯದ ಮತಗಳು ಒಂದೇ ಸಂಗತಿಯ ಬಗ್ಗೆ ಭಿನ್ನಭಿನ್ನವಾಗಿದ್ದು, ಗಡಿಬಿಡಿ ನಡೆದಿತ್ತು. ಈ ತೊಂದರೆಯನ್ನು ನಾಶ ಮಾಡದ ಹೊರತು, ಧರ್ಮಕ್ಕೆ ಸ್ಥಿರತೆಯು ಪ್ರಾಪ್ತವಾಗದ ಹೊರತು, ಅದರ ಪ್ರಸಾರವು ಚೆನ್ನಾಗಿ ಆಗಲಿಕ್ಕಿಲ್ಲವೆಂದೂ, ಇಷ್ಟೇ ಅಲ್ಲದೆ ಆ ಧರ್ಮವು ರಸಾತಲಕ್ಕೆ ಹೋಗ ಬಹುದೆಂದೂ ಈ ಆಲೋಚನೆಯಿಂದಲೇ ಮೇಲೆ ವಿವರಿಸಿದ ಮಹತ್ವದ ಪ್ರಶ್ನೆಗಳನ್ನು ನಿರ್ಣಯಗೊಳಿಸುವುದಕ್ಕೋಸ್ಕರ ಸಭೆಯು ಕರೆಯಿಸಲ್ಪಟ್ಟಿತು. ಈ ಸಭೆಗೆ ಅನೇಕ ಸಂಘದವರು ಬಂದಿದ್ದರು. ಸಂಘ ಎಂಬೀ ಶಬ್ದದ ಸರಿಯಾದ ಕಲ್ಪನೆಯು 'ಪಂಥ' ಅಥವಾ ಇಂಗ್ಲಿಷ್ ಭಾಷೆಯ 'ಚರ್ಚ್' ಎಂಬ ಈ ಶಬ್ದದಿಂದಾಗ ಬಹುದು. ಪ್ರತಿಯೊಂದು ಧರ್ಮ ಸಂಬಂಧವಾದ ವಿಷಯದಲ್ಲಿ ಒಂದೇ ಮತವನ್ನು ಅನುಸರಿಸುವಂತಹ ಸಮೂಹಕ್ಕೆ ಬೌದ್ಧಗ್ರಂಥಗಳಲ್ಲಿ 'ಸಂಘ' ಎಂಬ ಸಂಜ್ಞೆಯುಂಟು. ಸಂಘವನ್ನು ಅಂಟಿಕೊಂಡಿರುವುದು ಧಾರ್ಮಿಕ ಕೃತ್ಯಗಳಲ್ಲಿ ಅತಿಮಹತ್ವವಾದುದೆಂದು ತಿಳಿಯುತ್ತಿದ್ದರು. ಬುದ್ಧನಲ್ಲಿ ಶ್ರದ್ಧೆ, ಧರ್ಮಶೀಲತೆ, ಸಂಘಶಕ್ತಿ ಈ ಮೂರರ ಬಲದ ಮೇಲೆ ಬೌದ್ಧಧರ್ಮವು ಇಷ್ಟು ಬಲವಾಗಿ ಪ್ರಸಾರಗೊಂಡಿತ್ತು. ಚಿಕ್ಕ ಚಿಕ್ಕ ಸಂಘಗಳು ಬಹಳವಿರುವುದಕ್ಕಿಂತ, ಒಂದೇ ದೊಡ್ಡದಾದ ಸಂಘವಿರುವುದರಿಂದ, ಧರ್ಮಕ್ಕೆ ಹೆಚ್ಚು ಬಲವು ದೊರೆಯ ಬಹುದೆಂದರಿತು, ಎಲ್ಲಾ ಸಂಘಗಳನ್ನು ಒಟ್ಟುಗೂಡಿಸಲು ಅಶೋಕನು

[೫೧] Senart's paper; Indian Antiquary Vol. xx. p. 165-8.

Digitized by ROJA MUTHIAH RESEARCH LIBRARY

ಈ ಸಭೆಯ ಮೂಲಕವಾಗಿ ಪ್ರಯತ್ನಿಸಿದನು. ಈ ಉದ್ದೇಶವು ಬಹಳ ಮಟ್ಟಿಗೆ ಸಿದ್ಧಿಯನ್ನೈದಿತು ಎಂದೆನ್ನಲು ಸಂದೇಹವಿಲ್ಲ. ಬೌದ್ಧಧರ್ಮದಲ್ಲಿರುವ ವಿಲಕ್ಷಣವಾದ ಶಕ್ತಿಯ ರಹಸ್ಯವು ಈ ಸಂಘದಲ್ಲಿತ್ತೆಂಬುದು ಅಶೋಕನ ಲಕ್ಷ್ಯದಲ್ಲಿ ಬಂದಿತ್ತೆಂದು ಇದರಿಂದ ವ್ಯಕ್ತವಾಗುತ್ತಿದೆ.

ಧರ್ಮವು ಹೇಗೆ ಅಭಿವೃದ್ಧಿಗೊಳ್ಳುವುದೆಂಬುದನ್ನು ಕುರಿತು ದಿಲ್ಲಿಯೊಳಗಣ ಸ್ತಂಭದಲ್ಲಿ ಈ ಕೆಳಗೆ ಬರೆದ ಲೇಖವುಂಟು.

“ ದೇವತಾಪ್ರಿಯನಾದ ಪ್ರಿಯದರ್ಶಿರಾಜನು ಹೀಗೆಂದಿರುವನು—‘ಮನುಷ್ಯಜಾತಿಯಲ್ಲಿ ಧರ್ಮೋನ್ನತಿಯು ಹೇಗೆ ಆಗುವುದು? (ಎಂದರೆ) ನೀಚಜಾತಿಯ ಜನರಲ್ಲಿ ಧರ್ಮಶ್ರದ್ಧೆಯು ಉತ್ಪನ್ನವಾದರೆ ಅದು ನಿಶ್ಚಯವಾಗಿ ಆಗುವುದು’—ಮತ್ತು ದೇವತಾಪ್ರಿಯನಾದ ಪ್ರಿಯದರ್ಶಿರಾಜನು ಹೀಗೆಂದಿರುವನು—‘ರಾಜವಂಶದೊಳಗಣ ಮನುಷ್ಯರಿಗೆ ಧರ್ಮೋಪದೇಶವನ್ನು ಮಾಡುವುದರಿಂದ ಧರ್ಮವು ಎಷ್ಟು ಮಟ್ಟಿಗೆ ಉನ್ನತಿಯನ್ನೈದಬಹುದು? ನಿರ್ಧನರನ್ನು ಧಾರ್ಮಿಕರನ್ನಾಗಿ ಮಾಡುವುದರಿಂದಲೇ ಧರ್ಮೋನ್ನತಿಯಾಗುತ್ತಿದೆ ಎಂದ ಮೇಲೆ, ಉಚ್ಚಪ್ರತಿಯ ಜನರನ್ನು ಧಾರ್ಮಿಕರನ್ನಾಗಿ ಮಾಡುವುದರಿಂದ, ಅದು ಎಷ್ಟು ಉನ್ನತಿಯನ್ನ ಹೊಂದಬಹುದೆಂದು ಹೇಳುವ ಅವಶ್ಯಕತೆಯೇ ಇಲ್ಲ.’”

ಮೇಲೆ ವಿವರಿಸಿದ ಅಶೋಕನ ಲೇಖಗಳನ್ನು ಓದಲಾಗಿ, ಅವನ ಮನಸ್ಸು ಈ ಕಾಲದಲ್ಲಿ ಎಷ್ಟು ಉದಾತ್ತವಾಗಿತ್ತೆಂಬುದರ ಕಲ್ಪನೆಯನ್ನು ನಮ್ಮ ಪಾಠಕರು ಮಾಡದೆ ಇರಲಾರರು. ಅನ್ಯಧರ್ಮವನ್ನು ನಿಂದಿಸಬೇಕೆಂದು ನಮಗೆ ಇಚ್ಛೆ ಇಲ್ಲ. ನೀಚಜಾತಿಯ ಜನರನ್ನು ಧಾರ್ಮಿಕರನ್ನಾಗಿ ಮಾಡುವ ಧರ್ಮೋಪದೇಶಕರ ಕರ್ತವ್ಯದ ಮುಖ್ಯ ಅಂಗವು, ಕ್ರಿಸ್ತನ ಪೂರ್ವದಲ್ಲಿ ಎಷ್ಟೋ ಕಾಲದ ಹಿಂದೆ ಆಗಿಹೋದ ಅಶೋಕ ರಾಜನಿಗೆ ಚೆನ್ನಾಗಿ ಅವಗತವಾಗಿತ್ತು; ಮತ್ತು ಅದೇ ತತ್ವದ ಮೇಲೆ ಅವನು ಬೌದ್ಧಧರ್ಮವನ್ನು ಪ್ರಸಾರಗೊಳಿಸುವುದನ್ನು ನಿಶ್ಚೈಸಿದ್ದನೆಂಬುದು ಈ ಲೇಖದಿಂದ ಕಂಡು ಬರುತ್ತಿದೆ.[೫೨]

[೫೨] ದಿಲ್ಲಿಯ ಸ್ತಂಭದೊಳಗಣ ೭ನೆಯ ಆದೇಶವು.

Digitized by ROJA MUTHIAH RESEARCH LIBRARY



ಅಶೋಕ ಮತ್ತು ಕ್ರಿಸ್ತರಲ್ಲಿ ಈ ಕಲ್ಪನೆಯ ಮಟ್ಟಿಗೆ ಸಾಮ್ಯವುಂಟು. ಮತ್ತು ಕದಾಚಿತ್ ಅದು ಅವರಿಬ್ಬರಿಗೂ ಸ್ವತಂತ್ರವಾಗಿ ಭಿನ್ನಭಿನ್ನ ಕಾಲದಲ್ಲಿ ತೋಚಿರಬಹುದೆಂಬುದೂ ಸಂಭವನೀಯವು. ಆದರೂ ಒಬ್ಬನಿಂದ ಅದನ್ನು ಎರಡನೆಯವನು ತೆಗೆದುಕೊಂಡನು ಎಂದೆನ್ನಲೇ ಬೇಕೆಂದು ಯಾರಾದರೂ ಪಟ್ಟು ಹಿಡಿದುದೇ ಆದರೆ, ಅದರ ಉತ್ತರವು ಅವರಿಬ್ಬರ ಕಾಲಕ್ರಮದಿಂದ ಸುಲಭವಾಗಿ ತೋರಿಸಲು ಬರುತ್ತಿದೆ.[೫೩]

[೫೩] ಈ ಕಲ್ಪನೆಯು ಅಶೋಕನಿಗೆ ಕ್ರಿ. ಶ. ಪೂ. ಮೂರು ಶತಕಗಳ ಮೊದಲು ತೋಚಿತು; ಅವನು ಅದನ್ನು ರೂಢಿಯಲ್ಲಿ ತಂದುದಕ್ಕಾಗಿ ಜನರಲ್ ಕನಿಂಗಹ್ಯಾಮ್ ಸಾಹೇಬರು ಅಶೋಕನನ್ನು ಕೊಂಡಾಡಿ ಹೀಗೆಂದಿರುವರು:—The proselytizing zeal of Asoka is more worthy of record as it anticipated by nearly three centuries one of the most characteristic institutions of the early Christian Church. (Bhilsa Topes) p. 123.

# ೯ನೆಯ ಪ್ರಕರಣ.

## ಅಶೋಕನ ಪ್ರಸಿದ್ಧವಾದ ಹದಿನಾಲ್ಕು ಆದೇಶಗಳು.

ಅಶೋಕನ ಲೇಖಗಳಲ್ಲೆಲ್ಲಾ ಶಿಲೆಯ ಕಲ್ಲುಗಳ ಮೇಲೆ ಬರೆದ ಆದೇಶಗಳು ಬಹು ಮಹತ್ವದುವೆಂದು ಹಿಂದೆ ಹೇಳಿಯೇ ಇದೆ. ಆ ಲೇಖಗಳನ್ನು ಕೆಳಗೆ ಕೊಡುವೆವು.[೫೪]

೧.

“ಈ ಆದೇಶವು ಪ್ರಿಯದರ್ಶಿರಾಜನದಾಗಿದೆ (ದೇವತಾಪ್ರಿಯ). ಪ್ರಾಣಿಗಳ ಹಿಂಸೆಯನ್ನು ಸಂಪೂರ್ಣವಾಗಿ ನಿಲ್ಲಿಸಿದೆ. ಇನ್ನು ಮುಂದೆ (ಮಾಂಸಾಹಾರದ) ಭೋಜನಗಳಾಗಲಿಕ್ಕಿಲ್ಲ; ಏಕೆಂದರೆ ಅವುಗಳಿಂದ ಮಹತ್ತರವಾದ ಪಾಪವು ಉಂಟಾಗುವುದೆಂದು ರಾಜಾಪ್ರಿಯದರ್ಶಿಗೆ ತೋರುತ್ತಿದೆ. ಪ್ರಿಯದರ್ಶಿರಾಜನ ಪಾಕಶಾಲೆಯಲ್ಲಿ ಸತ್ಕಾರ್ಯಕ್ಕಾಗಿ ಪ್ರತಿ ದಿನವೂ ಲಕ್ಷೋಪಲಕ್ಷ ಪ್ರಾಣಿಗಳ ಸಂಹಾರವಾಗುತ್ತಿತ್ತು. ಆದರೆ ಇನ್ನು ಮುಂದೆ ಸತ್ಕಾರ್ಯದ ದೆಸೆಯಿಂದ ಕೂಡ ಹಿಂಸೆಯನ್ನು ಮಾಡಕೂಡದೆಂದು ರಾಜನು ನಿಶ್ಚೈಸಿರುವನು.”

೨.

“ದೇವತಾಪ್ರಿಯನಾದ ಪ್ರಿಯದರ್ಶಿರಾಜನು ಗೆದ್ದ ಪ್ರದೇಶಗಳಲ್ಲಿಯೂ ಚೋಳ, ಪಾಂಡ್ಯ, ಸತ್ಯಪುತ್ರ, ಕೇರಲಪುತ್ರ, ತಾಮ್ರಪರ್ಣಿ, ಆಂಟಿಯೋಕಸ್ ಎಂಬ ಯವನರಾಜನ ಪ್ರಾಂತದಲ್ಲಿಯೂ, ಇತರ ನೆರೆಯ ರಾಜ್ಯಗಳಲ್ಲಿಯೂ ತಿಳುಹಿಸುವುದೇನೆಂದರೆ:—ಮನುಷ್ಯ ಮತ್ತು ಮಿಕ್ಕ ಪ್ರಾಣಿಗಳ ಸಂಬಂಧವಾಗಿ ಪ್ರಿಯದರ್ಶಿರಾಜನು ಎರಡು ವ್ಯವಸ್ಥೆಗಳನ್ನು ಮಾಡಿರುವನು. ಮನುಷ್ಯ, ಪಶು, ಪಕ್ಷಿ ಮೊದಲಾದ ಪ್ರಾಣಿಗಳಿಗೆ ಉಪಯೋಗವಾಗುವ ಗಿಡುಗಳೂ ವನಸ್ಪತಿಗಳೂ ಉತ್ಪನ್ನವಾಗದ ಸ್ಥಳಗಳಲ್ಲಿ ಅವುಗಳಿಗೋಸ್ಕರ ಅವುಗಳನ್ನು ಇತರ ಸ್ಥಳಗಳಿಂದ ತರಿಸಿ ನೆಟ್ಟಿದೆ. ಬಾವಿಗಳನ್ನು ಅಗೆಯಿಸಿದೆ; ಮತ್ತು (ದಾರಿಗುಂಟ) ಗಿಡುಗಳನ್ನು ನೆಟ್ಟಿದೆ.”

೩.

“ನನ್ನ ಆಳಿಕೆಯ ಹನ್ನೆರಡನೆಯ ವರ್ಷದಲ್ಲಿ ಈ ಆದೇಶವು ಪ್ರಸಿದ್ಧಪಡಿಸುವುದರಲ್ಲಿ ಬಂದಿದೆ. ನನ್ನ ರಾಜ್ಯದಲ್ಲಿ ನನ್ನ ಪ್ರಜೆಗಳೂ ಇತರ ಜನರೂ

[೫೪] ಇದು ಮೂಲಲೇಖಗಳ ಅಕ್ಷರಶಃ ಭಾಷಾಂತರವಲ್ಲ. ಅರ್ಥ ಬೋಧವಾಗುವುದಕ್ಕೋಸ್ಕರ ಮಹತ್ವದ ಭಾಗವನ್ನು ಮಾತ್ರವೇ ಇಲ್ಲಿ ಕೊಟ್ಟಿದೆ.



ನಾನು ಕೊಟ್ಟ ಧರ್ಮಾಜ್ಞೆಗಳನ್ನು ಯೋಗ್ಯರೀತಿಯಾಗಿ ಪಾಲಿಸುವುದಕ್ಕೆ ಪ್ರತಿ ಐದು ವರ್ಷಗಳಿಗೊಮ್ಮೆ ಪ್ರಾಯಶ್ಚಿತ್ತವನ್ನು ತೆಗೆದುಕೊಳ್ಳಬೇಕು. ಔದಾರ್ಯ, ಅಹಿಂಸೆ, ಅಪರಿಮಿತತ್ವ, ಪರನಿಂದೆಗೆ ಪರಾಙ್ಮುಖರಾಗುವುದು, ಇವೆಲ್ಲವು ಒಳ್ಳೆಯವು. ಈ ಒಳ್ಳೆಯ ಸಂಗತಿಗಳನ್ನು ಉಪದೇಶದಿಂದಲೂ, ಸ್ವವರ್ತನದ ಉದಾಹರಣೆಯಿಂದಲೂ, ಜನರ ಮನಸ್ಸಿನಲ್ಲಿ ಬಿಂಬಿಸುವಂತೆ ಮಾಡಬರುವುದು.”

೪.

“ಇಂದಿಗೆ ಅನೇಕ ಶತಕಗಳಿಂದ, ಪ್ರಾಣಿಗಳ ಹತ್ಯೆಯೂ, ಸಜೀವ ಪ್ರಾಣಿಗಳಿಗೆ ಉಪದ್ರವವನ್ನು ಕೊಡುವುದೂ, ಸಮಾನರನ್ನು ಕುರಿತು ಅನಾದರವೂ, ಬ್ರಾಹ್ಮಣ ಮತ್ತು ಶ್ರಮಣರಿಗೆ ಅಪಮಾನವೂ ನಡೆದು ಬಂದಿವೆ; ಆದರೆ ಈಗ ಪ್ರಿಯದರ್ಶಿರಾಜನು ದುಂದುಭಿಗಳ ಧ್ವನಿಯಿಂದಲೂ ಆನೆ, ರಥ, ಕುದುರೆ ಮೊದಲಾದುವುಗಳ ಮೆರೆವಣಿಗೆಯೇ ಮೊದಲಾದ ವಿಭವದಿಂದಲೂ ಎಲ್ಲಾ ಜನರಿಗೂ ಹೀಗೆ ತಿಳಿಯಪಡಿಸುವನು. ಏನೆಂದರೆ—ಈ ರೀತಿಯಾಗಿ (ಪ್ರಾಣಿಗಳ ಹತ್ಯೆಯು) ಸಜೀವ ಪ್ರಾಣಿಗಳಿಗೆ ಅಪಾಯವೂ, ಸಮಾನರಿಗೆ ಅನಾದರವೂ, ಬ್ರಾಹ್ಮಣ ಮತ್ತು ಶ್ರಮಣರ ಮಾನಖಂಡನವೂ ಈ ಮುಂದೆ ನಡೆಯಲಿಕ್ಕಿಲ್ಲ. ಧರ್ಮವು ವರ್ಧಿಸುವುದು; ಮತ್ತು ಪ್ರಿಯದರ್ಶಿರಾಜನ ಈ ಆದೇಶವನ್ನು ಅವನ ಪುತ್ರಪೌತ್ರರು ಪಾಲಿಸದೆ ಇರಲಾರರು. ಧರ್ಮಸಂಸ್ಥಾಪನೆಗಾಗಿ ಪ್ರಿಯದರ್ಶಿರಾಜನ ಆದೇಶಗಳು ಪರ್ವತದಂತೆ ಸ್ಥಿರವಾಗಿ ನಿಲ್ಲಬೇಕು. ಪ್ರತಿಯೊಬ್ಬ ದುರಾಚಾರಿಯು ಈ ಆದೇಶಗಳ ಕಡೆಗೆ ಮನಸ್ಸು ಕೊಟ್ಟರೆ, ಒಳ್ಳೆಯದಾಗುವುದು. ಪ್ರಜೆಗಳಲ್ಲಿ ಯಾರೂ ಈ ಆದೇಶಗಳ ವಿರುದ್ಧವಾಗಿ ನಡೆಯುವುದನ್ನು ಮನಸ್ಸಿನಲ್ಲಿ ತರಕೂಡದು. ಪ್ರಿಯದರ್ಶಿರಾಜನ ಆಳಿಕೆಯ ಹನ್ನೆರಡನೆಯ ವರ್ಷದಲ್ಲಿ ಈ ಆದೇಶವು ಪ್ರಸಿದ್ಧಪಡಿಸಲಾಯಿತು.”

೫.

“ಒಳ್ಳೆಯ ಸಂಗತಿಯ ಉಪಯೋಗವನ್ನು ಕೆಡುಕು ಕೆಲಸಗಳ ಕಡೆಗೆ ಮಾಡುವವನಿಗೆ, ಆ ಒಳ್ಳೆಯ ಸಂಗತಿಯ ಫಲವೂ ಕೊನೆಗೆ ಕೆಡುಕಾಗಿ ದೊರೆಯುವುದು. ಆದುದರಿಂದ ನಾನು (ಜನರ) ಹಿತಕ್ಕಾಗಿ ಪ್ರಯತ್ನಿಸುತ್ತಿರುವೆನು. ನನ್ನ ಪುತ್ರಪೌತ್ರರು ಹಾಗೆಯೇ ನಡೆಯದಿರಲಾರರು. ಪ್ರತಿಯೊಬ್ಬನಿಗೆ ತನ್ನ ಕರ್ಮದಂತೆ ಫಲವು ದೊರೆಯುವುದು. ಈ ವರೆಗೆ ಅಧಿಕಾರಿಗಳು ಬಹಳ ಅನೀತಿಯನ್ನು ನಡೆಯಗೊಟ್ಟಿದ್ದುದರಿಂದ, ಪ್ರಿಯದರ್ಶಿರಾಜನ ಆಳಿಕೆಯ ಹತ್ತನೆಯ ವರ್ಷದಲ್ಲಿ ಜನರು ನೀತಿಯ ಮೇಲೆ ಲಕ್ಷ್ಯವಿಡು

Digitized by ROJA MUTHIAH RESEARCH LIBRARY

ವುದಕ್ಕೋಸ್ಕರ ಧರ್ಮ ಮಹಾಮಾತ್ರೆ ಎಂಬ ಅಧಿಕಾರಿಗಳನ್ನು ನಿಯಮಿಸಿದೆ. ಜನರನ್ನು ಧರ್ಮಮಾರ್ಗಕ್ಕೆ ಹಚ್ಚುವುದೇ ಅವರ ಕೆಲಸವಾಗಿದೆ. ಅವರು ಯೋನ, ಕಾಂಬೋಜ, ಗಾಂಧಾರ, ನಾರಿಸ್ತಿಕ** (?) ಪೇತೇನಿಕ, ಪ್ರಭೃತಿ ದೇಶಗಳೊಳಗಣ ಜನರಲ್ಲಿ ಧರ್ಮವೃದ್ಧಿಯನ್ನು ಉಂಟು ಮಾಡುವರು. ಅವರು, ಕ್ಷತ್ರಿಯ, ಬ್ರಾಹ್ಮಣ ಭಿಕ್ಷುಗಳೇ, ಮೊದಲಾದ ಎಲ್ಲಾ ಜನರಲ್ಲಿ ಪ್ರವೇಶಿಸಿ, ಜನರಿಗೆ ಕ್ಷೇಮಾಭಿವೃದ್ಧಿಯನ್ನು ಉಂಟು ಮಾಡುವರು. ಅವರು ತಿಳಿಯದ ಜನರಿಗೆ ಷಡ್ರಿಪುಗಳ ಸಂಯಮನವನ್ನು ಹೇಗೆ ಮಾಡ ಬೇಕೆಂಬುದನ್ನು ಕಲಿಸುವರು. ಅವರು ಪಾಪ ಶೃಂಖಲೆಗಳಿಂದ ಬದ್ಧರಾದ ಜನರನ್ನು ಆ ಶೃಂಖಲೆಗಳಿಂದ ಮುಕ್ತರನ್ನಾಗಿ ಮಾಡಲು ಪ್ರಯತ್ನಿಸುವರು. ಧಾರ್ಮಿಕ ಕೃತ್ಯಗಳಿಗೆ ಉತ್ತೇಜನವನ್ನು ಕೊಡುವರು. ಈ ಉದ್ದೇಶದಿಂದಲೇ ಈ ಆದೇಶವನ್ನು ಪ್ರಕಟಿಸಿದೆ. ಜನರು ಇದನ್ನು ಪಾಲಿಸಲಿ."

೬.

"ಪೂರ್ವಕಾಲದಲ್ಲಿ ತೀವ್ರವಾಗಿ ಕೆಲಸಗಳನ್ನು ಮಾಡುವ ಮತ್ತು ಯಾವಾಗಲೂ ಬೇಹುಗಾರರಿಂದ ವೃತ್ತಾಂತವನ್ನು ಕೇಳುವ ರೂಢಿಯು ಇದ್ದಿಲ್ಲ. ಆ ರೂಢಿಯನ್ನು ನಾನು ಹೊಸತಾಗಿ ಪ್ರಾರಂಭಿಸಿರುವೆನು. ಉಣ್ಣುವಾಗ, ವಿಶ್ರಾಂತಿಯ ಸಮಯದಲ್ಲಿ, ಏಕಾಂತದಲ್ಲಿರುವಾಗ, ಉದ್ಯಾನದಲ್ಲಿ ತಿರುಗಾಡುತ್ತಿರುವಾಗ, ಹೀಗೆ ಯಾವ ವೇಳೆಯಲ್ಲಿಯೂ, ಯಾವ ಸ್ಥಳದಲ್ಲಿಯೂ ವಾರ್ತಾದಾಯಕರು ನಿಸ್ಸಂದೇಹವಾಗಿ ನನ್ನ ಬಳಿಗೆ ಬರಬೇಕು; ಜನರ ಸಂಬಂಧದ ಕಾರ್ಯಗಳನ್ನು ನಾನು ಒಡನೆಯೇ ಮಾಡುವೆನು. ಇದನ್ನು ಕುರಿತು ನಾನು ನನ್ನ ಅಧಿಕಾರಿಗಳಿಗೆ ಬಾಯಿಂದ ಹೇಳಿದ ಆಜ್ಞೆಯನ್ನು ಅವರು ಜನರಲ್ಲಿ ಪ್ರಸಿದ್ಧ ಪಡಿಸಬೇಕು. ಧರ್ಮಗುರುಗಳ ಸಮಾಜದಲ್ಲಿ ಎಲ್ಲಿಯಾದರೂ ಜಗಳ, ವಾದ ಇಲ್ಲವೇ ಮತಭೇದಗಳಾದರೆ, ಆ ವಾರ್ತೆಯನ್ನು ವಾರ್ತಾಹರರು ಒಡನೆಯೇ ನನಗೆ ತಿಳಿಸ ಬೇಕು. ಏಕೆಂದರೆ, ನ್ಯಾಯದ ಕಾರ್ಯವು ನಿರ್ಮಲವೂ ತೀವ್ರವೂ ಆದಷ್ಟು ಒಳ್ಳೆಯದು. ಉಪದೇಶದ್ವಾರಾ ಜನರಿಗೆ ಹಿತವನ್ನು ಮಾಡುವುದು ನನ್ನ ಕರ್ತವ್ಯವು. ಮತ್ತು ಅದನ್ನು ಮಾಡುವುದಕ್ಕೆ ನ್ಯಾಯಪದ್ಧತಿಯನ್ನು ಸುಸ್ಥಿತಿಯಲ್ಲಿಡುವುದು ಆವಶ್ಯಕವಾಗಿದೆ. ನನ್ನ ರಾಜ್ಯದಲ್ಲಿರುವ ಎಲ್ಲಾ ಪ್ರಜೆಗಳ ಐಹಿಕ ಮತ್ತು ಪಾರಮಾ

** ಜನರಲ್ ಕನಿಂಗಹ್ಯಾಂವ್ ಸಾಹೇಬರು ರಾಸ್ತಿಕ (ಸುರಾಷ್ಟ್ರ) ಎಂದು ಈ ಶಬ್ದವನ್ನು ಓದ ಬೇಕೆಂದೂ 'ನ' ಕಾರವು ಹಿಂದಿನ ಗಾಂಧಾರ ಶಬ್ದದ ಷಷ್ಠೀ ವಿಭಕ್ತಿಯ ರೂಪದೊಳಗಣದೆಂದೂ ಬರೆದಿರುವರು.



ರ್ಥಿಕ ಹಿತವನ್ನು ಮಾಡುವುದೇ ನನ್ನ ಬದ್ಧಕರ್ತವ್ಯವಾಗಿದೆ. ಆದುದರಿಂದ ಈ ಆದೇಶವು ಪ್ರಸಿದ್ಧಗೊಳಿಸಲ್ಪಟ್ಟಿದೆ. ನನ್ನ ಪುತ್ರಪೌತ್ರಾದಿ ವಂಶಜರು ಇದನ್ನು ಪಾಲಿಸಲಿ! ಮತ್ತು ಪ್ರಜೆಗಳ ಹಿತಕ್ಕಾಗಿ ಪ್ರಯತ್ನಿಸಲಿ!"

೭.

"ಮನುಷ್ಯನು ನಾಸ್ತಿಕನಾಗಿದ್ದರೂ, ಅವನಿಗೆ ಸದ್ವರ್ತನವೂ ನೀತಿಯೂ ಬೇಕಾದುವೆಂದೇ ತೋರುವುದು. ಆದುದರಿಂದ ನನ್ನ ರಾಜ್ಯದಲ್ಲಿ ಎಲ್ಲಿಯಾದರೂ ನಾಸ್ತಿಕರು ಇದ್ದರೆ, ಅವರಿಗೆ ಯಾರೂ ತೊಂದರೆಯನ್ನು ಕೊಡಕೂಡದು. ಏಕೆಂದರೆ, ಮನುಷ್ಯನ ಮತಗಳೂ ವಿಚಾರಗಳೂ ಭಿನ್ನಭಿನ್ನವಾಗಿದ್ದರೂ, ಕಡೆಗೆ ಅವನ ಉದ್ದೇಶವು ಒಂದೇ ಆಗಿರುವುದು. ಸದ್ವರ್ತನವೂ ನೀತಿಯೂ ಬೇಡವಾದ ಮನುಷ್ಯನೊಡನೆ ಸಹ ಉದಾರತೆಯಿಂದ ನಡೆಯಬೇಕು. ಏಕೆಂದರೆ, ಮನುಷ್ಯನು ಎಂತಹ ನೀಚವೃತ್ತಿಯವನಾಗಿದ್ದರೂ, ಕೃತಜ್ಞತಾಬುದ್ಧಿಯು ಅವನಲ್ಲಿರುವ ಗುಣಗಳನ್ನು ಬೆಳಕಿಗೆ ತಾರದೆ ಇರುವುದಿಲ್ಲ."

೮.

"ಪೂರ್ವದಲ್ಲಿ ರಾಜರು ಬೇಟೆಯಾಡುವುದಕ್ಕಾಗಲೀ ಇಲ್ಲವೇ ವಿಲಾಸಕ್ಕಾಗಲೀ ಪ್ರವಾಸವನ್ನು ಮಾಡುತ್ತಿದ್ದರು. ದೇವತಾಪ್ರಿಯನಾದ ಪ್ರಿಯದರ್ಶಿರಾಜನಿಗೆ, ತನ್ನ ಆಳಿಕೆಯ ಹತ್ತನೆಯ ವರ್ಷದಿಂದ ಪ್ರವಾಸವನ್ನು ಕೆಳಗೆ ವಿವರಿಸಿದ ಕಾರಣಗಳಿಗಾಗಿ ಮಾಡಬೇಕೆಂದು ತೋರ ತೊಡಗಿತು. ಬ್ರಾಹ್ಮಣರಿಗೂ ಶ್ರಮಣರಿಗೂ ಪ್ರತಿ ಸ್ಥಳದಲ್ಲಿ ದಕ್ಷಿಣೆಯು ಮುಟ್ಟುವುದೋ ಇಲ್ಲವೋ? ಗುರುಜನಗಳಿಗೆ ದ್ರವ್ಯಸಹಾಯವು ದೊರೆಯುತ್ತಿದೆಯೋ ಇಲ್ಲವೋ? ಜನರು ಹೇಗೆ ಆಚರಿಸುತ್ತಿರುವರು? ಅವರನ್ನು ನೀತಿಯುತರನ್ನಾಗಿ ಮಾಡಲು, ಇನ್ನು ಯಾವ ಕಾಯಿದೆಕಾನೂನುಗಳ ಅವಶ್ಯಕತೆಯುಂಟು? ಇತ್ಯಾದಿ ಸಂಗತಿಗಳನ್ನು ಪ್ರತ್ಯಕ್ಷ ಅವಲೋಕಿಸುವುದು."

೯.

"ಪ್ರತಿಯೊಬ್ಬ ಮನುಷ್ಯನು ಲಗ್ನಕಾರ್ಯ, ಪುತ್ರಜನನ, ಶಿಷ್ಯಾಗಮನ ಇತ್ಯಾದಿ ಪ್ರಸಂಗಗಳಲ್ಲಿ ಉತ್ಸವವನ್ನು ಮಾಡುವನು. ಕರ್ತವ್ಯವು ಸಮಾಪ್ತವಾದ ದಿನವೇ ನಿಜವಾದ ಉತ್ಸವದ ದಿನವು. ಈ ಬಗೆಯ ಉತ್ಸವವನ್ನು ಎಲ್ಲರೂ ಮಾಡಬೇಕು. ಸೇವಕನು ಸ್ವಾಮಿಯ ಆಜ್ಞೆಯನ್ನು ಪಾಲಿಸುವುದು, ಕಿರಿಯರು ಹಿರಿಯರನ್ನು ಸನ್ಮಾನಿಸುವುದು; ಸಜೀವ ಪ್ರಾಣಿಗಳನ್ನು ಕುರಿತು

Digitized by ROJA MUTHIAH RESEARCH LIBRARY

ಅಂತಃಕರಣದಲ್ಲಿ ದಯೆಯನ್ನು ಇಡುವುದು, ಬ್ರಾಹ್ಮಣ ಮತ್ತು ಶ್ರಮಣರಿಗೆ ದಾನಧರ್ಮಗಳನ್ನು ಮಾಡುವುದು, ಇವೂ ಇತರ ಕೆಲವು ಸಂಗತಿಗಳೂ, ಯಾವ ದಿನ ಸಂಭವಿಸುವುವೋ ಅದೇ ನಿಜವಾದ ಉತ್ಸವದ ದಿವಸವೆನ್ನಬೇಕು. ಇಂತಹ ದಿನದಲ್ಲಿ ಪಿತಾಪುತ್ರರಿಗೆ, ಸ್ವಾಮಿಸೇವಕರಿಗೆ ಮುಂತಾಗಿ ಸರ್ವರಿಗೂ ಆನಂದವಾಗದೆ ಇರದು. ಈ ಉತ್ಸವವನ್ನು ಅವಶ್ಯವಾಗಿ ಮಾಡಬೇಕು......"

೧೦.

"ದೇವತಾಪ್ರಿಯನಾದ ಪ್ರಿಯದರ್ಶಿಯು ಕೀರ್ತಿಗೂ ಹೆಸರುವಾಸಿಗೂ ಹೆಚ್ಚು ಮಹತ್ವವನ್ನು ಕೊಡುವುದಿಲ್ಲ. ಅವನು ತನ್ನ ಜನರು ಸದಾಚಾರಿಗಳಾಗುವಂತಹ ವ್ಯವಸ್ಥೆಯನ್ನು ಮಾಡಿರುವನೆಂಬ ಕೀರ್ತಿಯೇ ಅವನಿಗೆ ಬೇಕಾಗಿದೆ. ಇದರ ಹೊರತು ಅನ್ಯಕಾರಣಗಳಿಗಾಗಿ ದೊರೆಯುವ ಕೀರ್ತಿಯನ್ನು ಅವನು ಕವಡಿಗೆ ಸಮಾನವಾಗಿ ತಿಳಿಯುವನು. ಸ್ವಾರ್ಥಪರರೂ ಅಲ್ಪರೂ ಆದವರು ಬೇಕಾದರೆ ಈ ಎರಡನೆಯ ಬಗೆಯ ದೊಡ್ಡಸ್ತಿಕೆಯನ್ನು ಸಂಪಾದಿಸಲಿ."

೧೧.

"ಧರ್ಮದಾನದಂತಹ ದಾನವಿಲ್ಲ. ಧರ್ಮದಾನದಲ್ಲಿ ಅನೇಕ ಸಂಗತಿಗಳು ಸೇರುವುವು. ಸೇವಕರ ವಿಷಯದಲ್ಲಿ ಪ್ರೀತಿಯೂ, ತಾಯಿತಂದೆಗಳ ವಿಷಯದಲ್ಲಿ ಆದರಪೂರ್ವಕವಾದ ಪ್ರೇಮವೂ, ಇಷ್ಟಮಿತ್ರರಿಗೆ ಉದಾರತೆಯಿಂದ ಮಾಡಿದ ಸಹಾಯವೂ, ಸಜೀವ ಪ್ರಾಣಿಗಳ ಅಹಿಂಸೆಯೂ,.... ಈ ಮೊದಲಾದ ಆಚರಣೆಗಳಿಂದ ಇಹಲೋಕದಲ್ಲಿ ಸೌಖ್ಯವೂ ಪರಲೋಕದಲ್ಲಿ ಸುಖಪ್ರಾಪ್ತಿಯೂ ಆಗುವುದು."

೧೨.

"ಗೃಹಸ್ಥಾಶ್ರಮಿಗಳು, ಯತಿಸನ್ಯಾಸಿಗಳು ಮುಂತಾದ ಇವರೆಲ್ಲರುಗಳ ಧರ್ಮಮಾರ್ಗದ ವಿಷಯದಲ್ಲಿ ದೇವಪ್ರಿಯನಾದ ಪ್ರಿಯದರ್ಶಿರಾಜನು ಆದರಬುದ್ಧಿಯನ್ನು ಇಟ್ಟಿರುವನು. ಇವರೆಲ್ಲರಿಗೂ ಮಾನ್ಯಗಳನ್ನು ಕೊಟ್ಟು, ಮತ್ತು ಇತರ ರೀತಿಯಾಗಿ ಸಹ ಆತನು ಅವರುಗಳ ಮೇಲೆ ತನಗೆ ಇರತಕ್ಕ ಪೂಜ್ಯಬುದ್ಧಿಯನ್ನು ವ್ಯಕ್ತಗೊಳಿಸುತ್ತಿರುವನು. ಧರ್ಮವೃದ್ಧಿಗೆ ಮಿಗಿಲಾದ ಪುಣ್ಯವು ಬೇರೊಂದಿಲ್ಲವೆಂದು ಆತನು ತಿಳಿಯುವನು. ಆತನು ಎಲ್ಲರಿಗೂ ಉತ್ತೇಜನವನ್ನು ಕೊಡುವನು. ಆದರೆ ಈ ಉತ್ತೇಜನದ ಮೂಲದಲ್ಲಿ



ಸ್ವಧರ್ಮನಿಷ್ಠೆ ಮತ್ತು ಪರಧರ್ಮಸಹಿಷ್ಣುತೆಗಳೆಂಬ ಈ ಎರಡು ಸಂಗತಿಗಳಿವೆ. ಪರಧರ್ಮಕ್ಕೆ ಸಹಾಯ ಮಾಡುವುದರಿಂದ ಸಹ ಸ್ವಧರ್ಮವು ವರ್ಧಿಸುವುದು. ಇದಕ್ಕೆ ವ್ಯತಿರಿಕ್ತವಾಗಿ ನಡೆಯುವವನು ಸ್ವಧರ್ಮಕ್ಕೂ ಪರಧರ್ಮಕ್ಕೂ ಹಾನಿಯನ್ನು ಉಂಟುಮಾಡುವನು. ಆದರೆ ಯಾವಾತನು ಸ್ವಧರ್ಮದ ಮೇಲಣ ಅಭಿಮಾನದಿಂದ ಅದನ್ನು ಪ್ರಸಾರಗೊಳಿಸುವುದಕ್ಕಾಗಿ ಪರಧರ್ಮವನ್ನು ನಿಂದಿಸುವನೋ ಆತನು ಸ್ವಧರ್ಮವೃದ್ಧಿಯ ಮಾರ್ಗದಲ್ಲಿ ವಿಘ್ನಗಳನ್ನು ತಂದು ಹಾಕುವನಾಗುವನು. ಆತನ ಈ ನಡತೆಯು ತುಚ್ಛವಾಗಿದೆ. ಇತರರ ಮೇಲೆ ಮಾನವನ್ನು ಇಡುವುದೂ ಅವರ ಉಪಯೋಗಕ್ಕೆ ಬೀಳುವುದೂ, ಪ್ರತಿಯೊಬ್ಬ ಮನುಷ್ಯನ ಕರ್ತವ್ಯವಾಗಿದೆ. ದೇವಪ್ರಿಯನಾದ ಪ್ರಿಯದರ್ಶಿರಾಜನಿಗೆ ಇದೇ ಇಚ್ಛೆ ಇರುವುದು. ಆದುದರಿಂದಲೇ ಆತನ ಆಶ್ರಯದಲ್ಲಿ ಪ್ರತಿಯೊಬ್ಬರೂ ತಂತಮ್ಮ ಧರ್ಮಶಾಸ್ತ್ರಾನುಸಾರವಾಗಿ ನಡೆಯತಕ್ಕದ್ದು. ಧರ್ಮತತ್ವವನ್ನು ಪ್ರಸಾರಗೊಳಿಸುವ ಕೆಲಸದಂತೆ ಪುಣ್ಯಪ್ರದವಾದ ಕಾರ್ಯವು ಬೇರೊಂದಿಲ್ಲವೆಂದು ಪ್ರಿಯದರ್ಶಿಯು ತಿಳಿಯುವನು. ಎಲ್ಲಾ ಧರ್ಮಗಳ ಹೇತುವೂ ಇದೇ ಆಗಿದೆ. ಆದುದರಿಂದ ಧರ್ಮಪ್ರಸಾರಾರ್ಥವಾಗಿಯೂ ನೀತಿವರ್ಧನಾರ್ಥವಾಗಿಯೂ ಸ್ತ್ರೀಪುರುಷರುಗಳ ವರ್ತನದ ಕಡೆಗೆ ಲಕ್ಷ್ಯ ಕೊಡುವುದಕ್ಕಾಗಿ ಅಧಿಕಾರಿಗಳನ್ನು ನಿಯಮಿಸುವುದೇ ಮೊದಲಾದ ಉಪಾಯಗಳಿಂದ ಧರ್ಮವು ವರ್ಧಿಸಿ, ನೀತಿಗೆ ಉತ್ಕರ್ಷೆಯುಂಟಾಗುವುದು......."

೧೩.

ಈ ಆದೇಶದ ನಡುವಣ ಸ್ವಲ್ಪ ಭಾಗವು ಹೋಗಿದೆ. ಆದುದರಿಂದ ಉಳಿದ ದೊರೆತ ಭಾಗದ ಭಾಷಾಂತರವನ್ನು ಮಾತ್ರ ಇಲ್ಲಿ ಕೊಟ್ಟಿದೆ:—

"ದೇವಪ್ರಿಯನಾದ ಪ್ರಿಯದರ್ಶಿರಾಜನು ವಿಸ್ತಾರವಾದ ಕಳಿಂಗ ದೇಶವನ್ನು ಪಾದಾಕ್ರಾಂತವನ್ನಾಗಿ ಮಾಡಿದನು. ಲಕ್ಷೋಪಲಕ್ಷ ಜನಗಳನ್ನು ಸೆರೆಹಿಡಿದು ದಾಸರನ್ನಾಗಿ ಮಾಡಿದನು. ಒಂದು ಲಕ್ಷ ಪ್ರಾಣಿಗಳು ಈ ಕಾಲದಲ್ಲಿ ಬಲಿ ಬಿದ್ದುವು. ಆದರೆ ಈ ಕಳಿಂಗವಿಜಯದ ದೆಸೆಯಿಂದ ರಾಜನ ವೃತ್ತಿಯು ಧರ್ಮದ ಕಡೆಗೆ ತಿರುಗಿತು. ಈ ಮುಂದೆ ತನ್ನ ತನುಮನಧನಗಳನ್ನು ಧರ್ಮಪ್ರಸಾರಾರ್ಥವಾಗಿ ಉಪಯೋಗಿಸುವೆನೆಂಬ ಸಂಕಲ್ಪ ಮಾಡುವಷ್ಟುಮಟ್ಟಿಗೆ ಈ ಕಳಿಂಗವಿಜಯದಿಂದ ಆತನ ಮನಸ್ಸಿಗೆ ಉಪರತಿಯುಂಟಾಯಿತು."

Digitized by ROJA MUTHIAH RESEARCH LIBRARY

“ಹೊಸದೇಶಗಳನ್ನು ಜಯಿಸುವಲ್ಲಿ ಉಂಟಾಗುವ ಪ್ರಾಣಹಾನಿಯು
ಸಂಗತಿಯನ್ನು ಕುರಿತು ನನಗೆ ವ್ಯಸನವುಂಟಾಗುತ್ತಿದೆ. ಆದರೆ ನನಗೆ ಇದರಲ್ಲಿ
ತೋರುವ ವಿಶೇಷವೇನೆಂದರೆ, ಇಂತಹ ಕಾಲದಲ್ಲಿ ತಂತಮ್ಮ ಧರ್ಮದಂತೆ
ನಡೆಯುವವರು, ಸದಾಚಾರಸಂಪನ್ನರು, ನೀತಿವಂತರು, ಆಜ್ಞಾಧಾರಕರು,
ಸಚ್ಛೀಲರಾದ ಬ್ರಾಹ್ಮಣಶ್ರಮಣರು ಮತ್ತು ಇತರರು, ಇವರಿಗೆಲ್ಲಾ ಈ ಗದ್ದ
ಲದಲ್ಲಿ ತುಂಬಾ ತೊಂದರೆಯನ್ನು ತಾಳ ಬೇಕಾಗುವುದು; ಅವರ ಪ್ರೇಮ
ಪಾತ್ರರಾದ ಜನಗಳು ಯುದ್ಧದಲ್ಲಿ ಕೊಲ್ಲಲ್ಪಡುವುದರಿಂದ ಅವರು ವಿಯೋ
ಗದುಃಖವನ್ನು ತಾಳ ಬೇಕಾಗುವುದು; ಮತ್ತು ಸ್ವತಃ ಅವರು ಪಲಾಯನ
ಮಾಡಿದರೂ, ಅವರ ಮನೆಮಾರುಗಳು, ಇಷ್ಟಮಿತ್ರರು, ಬಂಧುಬಾಂಧ
ವರು, ಮುಂತಾಗಿ ಇವರೆಲ್ಲರ ಸರ್ವಸ್ವನಾಶವಾದುದನ್ನು ನೋಡಬೇಕಾ
ಗುವುದು. ಕಳಿಂಗವಿಜಯದ ಕಾಲದಲ್ಲಿ ಲಕ್ಷೋಪಲಕ್ಷ ಜನರು, ನೀರಲ್ಲಿ
ಮುಣುಗಿ ಸತ್ತರು; ಎಷ್ಟೋ ಜನರು ಕಡಿಯಲ್ಪಟ್ಟರು; ಎಷ್ಟೋ ಮಂದಿ
ಸೆರೆ ಸಿಕ್ಕಿದರು; ಇದಕ್ಕಾಗಿ ಪ್ರಿಯದರ್ಶಿರಾಜನಿಗೆ ಸಾವಿರ ಪಾಲಷ್ಟು ದುಃಖ
ವಾಗುತ್ತಲಿದೆ. . . . . . . . ಪ್ರಾಣಿಮಾತ್ರಕ್ಕೆ ನಿರ್ಭಯತೆಯೂ ಮನುಷ್ಯನ
ವರ್ತನದೊಳಗಣ ಸದಯತೆಯೂ, ಈ ಎರಡೂ ಧರ್ಮವಿಜಯದ ಪತಾಕೆ
ಗಳಾಗಿವೆ! ಈ ಎರಡು ಸಂಗತಿಗಳಿಗಾಗಿಯೇ ಪ್ರಿಯದರ್ಶಿರಾಜನಿಗೆ ತನ್ನ
ವಿಸ್ತಾರವಾದ ರಾಜ್ಯದ ಮೇಲೆ ಅಲ್ಪಸ್ವಲ್ಪ ಅಭಿಮಾನವಿದೆ. ಯವನರಾಜ
ನಾದ ಅಂಟಿಯೋಕಸ್, ಅದರ ಆಚೆಗೆ ಇರುವ ಟಾಲೇಮಿ, ಅಂಟಿಗೋ
ನಸ್, ಮಾಗಸ್, ಮತ್ತು ಅಲಕ್ಸಾಂಡರ್ ಈ ನಾಲ್ಕು ಮಂದಿ ರಾಜರು;
ದಕ್ಷಿಣದಲ್ಲಿ ಚೋಳ, ಪಾಂಡ್ಯ ಮತ್ತು ತಾಮ್ರಪರ್ಣಿ; ಇನ್ನು ಗ್ರೀಕ, ಕಂಬೋ
ಜ, ನಾಬಕ, ನಾಭಪಂಥಿ, ಭೋಜ, ಪೆತೇನಿಕ, ಆಂಧ್ರ, ಪುಳಿಂದ, ಮೊದ
ಲಾದ ಈ ರಾಜರುಗಳೆಲ್ಲಾ ಪ್ರಿಯದರ್ಶಿಯ ಧರ್ಮಾನುಜ್ಞೆಗೆ ಒಳಗಾಗಿ
ನಡೆಯುತ್ತಲಿರುವರು. ಎಲ್ಲೆಲ್ಲಿ ಧರ್ಮೋಪದೇಶವನ್ನು ಮಾಡುವುದಕ್ಕಾಗಿ
ಜನಗಳನ್ನು ಕಳುಹಿಸಿದೆಯೋ ಅಲ್ಲಲ್ಲಿನ ನಿವಾಸಿಗಳು ಧರ್ಮೋಪದೇಶವನ್ನು
ಕೇಳಿಕೊಂಡು ತದನುಸಾರವಾಗಿ ನಡೆಯದಿರರು. . . . . . ಈ ಪ್ರಕಾರವಾಗಿ
ಸರ್ವತ್ರವೂ ವಿಜಯವುಂಟಾಗಿದೆ. ಇದನ್ನು ನೋಡಿ ನನಗೆ ಅತ್ಯಾನಂದವಾ
ಗುತ್ತಲಿದೆ. ಧರ್ಮವಿಜಯದ ಆನಂದವು ಹೀಗೆ ವಿಚಿತ್ರವಾಗಿದೆ; ಆದರೆ
ಈ ವಿಜಯದ ಪರಲೋಕದಲ್ಲಿ ದೊರೆಯತಕ್ಕ ಫಲವನ್ನು ಕುರಿತು ಯೋ
ಚಿಸಿದರೆ, ಈ ಆನಂದವು ಕೂಡ ತುಚ್ಛವಾಗಿ ತೋರುತ್ತಲಿದೆ. ಆದುದರಿಂದ
ಈ ಆದೇಶವನ್ನು ಕೊರೆಯಿಸಿ ಇಡುವೆನು. ಏನೆಂದರೆ, ನನ್ನ ಪುತ್ರಪೌತ್ರಾ
ದಿಗಳು ಖಡ್ಗಬಲದಿಂದ ವಿಜಯ ಹೊಂದುವ ಗದ್ದಲದಲ್ಲಿ ಬಿದ್ದು ಜನಗಳ
ಮೇಲೆ ಬಲಾತ್ಕಾರವನ್ನು ಮಾಡಲಾಗದು; ಮತ್ತು ಅವರನ್ನು ನಾಶ ಮಾಡು

Digitized by ROJA MUTHIAH RESEARCH LIBRARY



ವುದರಲ್ಲಿ ಪ್ರವರ್ತಿಸ ಬಾರದು. ಧರ್ಮವಿಜಯಕ್ಕಿಂತ ದೊಡ್ಡ ವಿಜಯವಿಲ್ಲ
ವೆಂಬುದನ್ನು ಅವರು ಚೆನ್ನಾಗಿ ಲಕ್ಷ್ಯದಲ್ಲಿ ಇಟ್ಟುಕೊಳ್ಳ ಬೇಕು. ಧರ್ಮ
ವಿಜಯದ ಯೋಗ್ಯತೆಯು ಇಹಪರಗಳೆರಡರಲ್ಲಿಯೂ ದೊಡ್ಡದಾಗಿದೆ.”

೧೪.

ಈ ಆದೇಶದಲ್ಲಿ ಹಿಂದಿನ ಹದಿಮೂರು ಆದೇಶಗಳಲ್ಲಿಯೂ
ಬಂದ ವಾಕ್ಯಗಳೂ ವಿಚಾರಗಳೂ ಪುನಃ ಬಂದಿರುವುದರಿಂದ
ಇದರ ಭಾಷಾಂತರವನ್ನು ಇಲ್ಲಿ ಕೊಟ್ಟಿಲ್ಲ.

ಈ ಆದೇಶಗಳು ತತ್ಕಾಲೀನ ಇತಿಹಾಸಜ್ಞಾನದ ಭಾಂಡಾಗಾ
ರವಾಗಿವೆ ಎಂದು ಮೇಲೆ ಹೇಳಿಯೇ ಇದೆ. ಇವುಗಳ ಮೂಲಕ
ವಾಗಿ ಅಶೋಕನ ರಾಜ್ಯವಿಸ್ತಾರ, ಕುಲವೃತ್ತಾಂತ, ಧರ್ಮದ
ವಿಷಯದಲ್ಲಿ ಕಲ್ಪನೆ, ನೀತಿಪ್ರಸಾರಾರ್ಥವಾಗಿ ಆತನು ನಿರ್ಮಿ
ಸಿದ ಎಲ್ಲಾ ಯೋಜನೆಗಳು, ಇತ್ಯಾದಿ ಸಂಗತಿಗಳ ವಿಷಯದಲ್ಲಿ
ತುಂಬಾ ಜ್ಞಾನವು ದೊರೆಯುತ್ತಿದೆ. ಮತ್ತು ಇದರ ಮೂಲಕ
ವಾಗಿ ಅಶೋಕನು ದೇಶಗಳ ಉನ್ನತ್ಯರ್ಥವಾಗಿ ಉಂಟುಮಾ
ಡಿದ ಧರ್ಮಕ್ರಾಂತಿಯ ಮಿತಿಯನ್ನು ನೋಡುವುದಕ್ಕೆ ಬಹಳ
ಸಹಾಯವುಂಟಾಗಿದೆ. ಲೇಖಗಳ ವಿಷಯಸ್ವರೂಪದ ಮೇಲಿಂದ
ಲೇಖಗಳನ್ನು ವರ್ಗೀಕರಿಸಿದರೆ, ಅವನ್ನು ಧರ್ಮವಿಷಯಕ, ರಾಜ್ಯ
ವಿಷಯಕ ಮತ್ತು ವ್ಯಕ್ತಿವಿಷಯಕ ಎಂದು ಮೂರು ವರ್ಗಗಳ
ನ್ನಾಗಿ ವಿಭಾಗಿಸ ಬಹುದು. ಆಸನಿವ (ಸಾಧ್ಯವಾದುದನ್ನೆಲ್ಲಾ
ಮಾಡಿ ಯಾರಿಗೂ ಅಪಾಯವುಂಟಾಗದಂತೆ ಮಾಡುವುದು),
ಉಪಕಾರ, ದಯೆ, ಔದಾರ್ಯ, ದಾನ, ಸತ್ಯ, ಪಾವಿತ್ರ್ಯವೆಂಬ ಈ
ಏಳು ವಿಷಯಗಳು ಧರ್ಮವೆಂಬ ವಿಷಯದಲ್ಲಿ ಸಮಾವೇಶವಾಗು
ತ್ತಿದ್ದುವೆಂದು ಇತರ ಲೇಖಗಳಿಂದ ತಿಳಿಯ ಬರುತ್ತಿದೆ. ಇವುಗಳಿಗೆ
ಅನುಸಾರವಾಗಿ ಮನುಷ್ಯರ ಐಹಿಕ ಕರ್ತವ್ಯಗಳು ನಿರ್ಣಯಿಸ
ಲ್ಪಡುತ್ತಿದ್ದುವು; ಹೇಗೆಂದರೆ ಹೆತ್ತವರು, ವೃದ್ಧರು (ಹಿರಿಯರು),
ಗುರು, ಇಷ್ಟಮಿತ್ರರು, ಇವರುಗಳ ಆಜ್ಞೆಯನ್ನು ಪಾಲಿಸುವುದು,
ಸೇವಕರ ಮಾತನ್ನು ಸಹಮಾನ್ಯ ಮಾಡುವುದು, ಬ್ರಾಹ್ಮಣಶ್ರಮ

ಣರುಗಳಿಗೆ ದಾನಧರ್ಮಗಳನ್ನು ಮಾಡುವುದು, ಭಾಷಣದಲ್ಲಿ ಪರಿಮಿತಿಯನ್ನಿಡುವುದು, ಪ್ರಾಣಿಮಾತ್ರದ ಮೇಲೆ ದಯೆಯನ್ನಿಡುವುದು, ಇವು ಪ್ರತಿಯೊಬ್ಬನ ಕರ್ತವ್ಯಕರ್ಮಗಳಾಗಿದ್ದುವು. ಈ ತತ್ವಗಳು ಹಿಂದೂ, ಮುಸಲ್ಮಾನ, ಕ್ರಿಸ್ತೀ ಮುಂತಾದ ಸರ್ವ ಧರ್ಮಗಳಿಗೂ ಒಂದೇ ಸಮನಾದುವುಗಳು; ಈ ಲೇಖಗಳಲ್ಲಿ ಬೌದ್ಧಧರ್ಮಕ್ಕೆ ಪ್ರತ್ಯೇಕವಾಗಿ ಉದ್ದೇಶಿಸಿ ಬರೆದುದು ಏನೊಂದೂ ಇಲ್ಲ. ಬುದ್ಧ, ಧರ್ಮ, ಸಂಘ, ಈ ಮೂರರ ಮತ್ತು ನಿರ್ವಾಣ ಪ್ರಾಪ್ತಿಯ ಉಲ್ಲೇಖವು ಎಲ್ಲಿಯೂ ಬಂದಿಲ್ಲ. ಇದರ ಮೇಲಿಂದ, ಈ ಶಿಲಾಲೇಖಗಳನ್ನು ಸರ್ವಧರ್ಮದ ಮತ್ತು ಪಂಥಗಳ ಜನಗಳು ಓದಿ ಆ ರೀತಿಯಾಗಿ ವರ್ತಿಸಬೇಕೆಂಬುದರಿಂದ ವಾದಗ್ರಸ್ತವಾದ ವಿಷಯಗಳನ್ನು ಬೇಕೆಂದು ಬಿಟ್ಟು ಸರ್ವಮಾನ್ಯವಾದ ತತ್ವಗಳನ್ನೇ ಅಶೋಕನು ಸಂಗ್ರಹಿಸಿರಬಹುದೆಂದು, ತೋರುತ್ತಿದೆ. ಅಶೋಕನ ಧರ್ಮೌದಾರ್ಯದ ವಿಷಯದಲ್ಲಿ ಆತನ ಲೇಖಗಳಲ್ಲಿಯೇ ಅತರ್ಕ್ಯವಾದ ಪ್ರಮಾಣವು ದೊರೆಯುವುದು. "ಮನುಷ್ಯನು ನಾಸ್ತಿಕನಾಗಿದ್ದರೂ, ಸದ್ವರ್ತನ ಮತ್ತು ನೀತಿ ಎಂಬಿವುಗಳು ಆತನಿಗೂ ಬೇಕಾದುವುಗಳೇ; ಆದುದರಿಂದ ನನ್ನ ರಾಜ್ಯದಲ್ಲಿ ಎಲ್ಲಿಯಾದರೂ ನಾಸ್ತಿಕರಿದ್ದರೂ ಅವರಿಗೆ ಯಾರೂ ತೊಂದರೆ ಕೊಡಬಾರದು; ಏಕೆಂದರೆ ಮನುಷ್ಯರ ಮತಗಳೂ ವಿಚಾರಗಳೂ ಭಿನ್ನವಾಗಿದ್ದರೂ ಅವರ ಕೊನೆಯ ಉದ್ದೇಶಗಳು ಒಂದೇ ಆಗಿರುವವು" ಎಂದು ಆತನು ಏಳನೆಯ ಆದೇಶದಲ್ಲಿ ಸ್ಪಷ್ಟವಾಗಿ ಹೇಳಿರುವನು. ಭಿನ್ನಮತಗಳ ವಿಷಯದಲ್ಲಿ ಸಹಿಷ್ಣುತೆಯನ್ನು ತೋರಿಸಿದ ಇಂತಹ ಉಜ್ವಲವಾದ ಉದಾಹರಣೆಯು ಬೇರೆ ಎಲ್ಲಿಯೂ ಸಿಕ್ಕುವುದು ಸಾಧ್ಯವಲ್ಲ. ಇನ್ನೊಂದು ಸಂಗತಿ ಏನೆಂದರೆ, ಅಶೋಕನು ಹಿಂದೂ ಧರ್ಮವನ್ನು ತ್ಯಜಿಸಿ ಬೌದ್ಧಧರ್ಮವನ್ನು ಸ್ವೀಕರಿಸಿದರೂ, ಆತನಿಗೆ ಬ್ರಾಹ್ಮಣರ ವಿಷಯದಲ್ಲಿ ಅತ್ಯಂತವಾದ ಪೂಜ್ಯಬುದ್ಧಿ ಇದ್ದಿತು; ಇಷ್ಟೇ ಅಲ್ಲದೆ ಪ್ರತಿಯೊಂದು ಸ್ಥಳದಲ್ಲಿ ಶ್ರಮಣರೊಡನೆ ಬ್ರಾಹ್ಮಣರಿಗೂ ಮಾನದಕ್ಷಿಣೆಗಳನ್ನು ಕೊಡಿರೆಂದು ಆತನು ಉಪ

Digitized by ROJA MUTHIAH RESEARCH LIBRARY



ದೇಶಿಸಿರುವನು. ಯಜ್ಞಯಾಗಾದಿ ಬ್ರಾಹ್ಮಣಧರ್ಮದ ಕರ್ಮಗಳಿಗೆ ಆತನು ಪ್ರತಿಕಾರ ಮಾಡಿದನೆಂಬುದರಿಂದಲೇ ಆತನು ಬ್ರಾಹ್ಮಣಧರ್ಮದ್ವೇಷಿಯಾಗಿದ್ದನೆಂದು ಎಷ್ಟೋ ಜನರು ಹೇಳುವರು. ಆದರೆ ಈ ಆಕ್ಷೇಪಣೆಗೆ ಇಷ್ಟೇ ಉತ್ತರವು ಸಾಕಾಗಿದೆ; ಏನೆಂದರೆ ಆತನು ಯಜ್ಞಯಾಗಗಳನ್ನು ಮಾಡಲೇ ಬಾರದೆಂದು ಎಲ್ಲಿಯೂ ಸ್ಪಷ್ಟವಾಗಿ ಹೇಳಿಲ್ಲ. ಪ್ರಾಣಿಮಾತ್ರವನ್ನು ಹಿಂಸಿಸದೆ, ಯಜ್ಞಯಾಗಾದಿ ಕರ್ಮಗಳನ್ನು ಮಾಡುವುದರ ವಿಷಯದಲ್ಲಿ ಆತನು ಆತಂಕ ಪಡಿಸಿರಲಿಲ್ಲವೆಂದು ನಮಗೆ ತೋರುತ್ತಿದೆ.

ರಾಜ್ಯವಿಷಯಕವಾದ ಅಶೋಕನ ಆದೇಶಗಳಲ್ಲಿ ಮುಖ್ಯತಃ ಹಿಂಸಾನಿಷೇಧ, ಚಿಕಿತ್ಸಾಲಯಗಳನ್ನು ಸ್ಥಾಪಿಸುವುದು, ನೀತಿಪ್ರಸಾರಾರ್ಥವಾಗಿ ವಿಶೇಷವಾದ ಪ್ರಯತ್ನಗಳನ್ನಿಡುವುದು—ಈ ಮೂರು ವಿಷಯಗಳು ಬರುತ್ತಿವೆ. ಅವುಗಳನ್ನು ಕುರಿತು ಈಗ ಇಲ್ಲಿ ಕ್ರಮಶಃ ಯೋಚಿಸುವ.

ಅಶೋಕನು ತನ್ನ ಪೂರ್ವವಯಸ್ಸಿನಲ್ಲಿ ಮಾಂಸಾಹಾರವನ್ನು ಮಾಡುತ್ತಲಿದ್ದನೆಂದೂ ಆತನ ಪಾಕಶಾಲೆಯಲ್ಲಿ ರುಚಿಕರವಾದ ಮಿಷ್ಟಾನ್ನಗಳನ್ನು ಮಾಡುವುದಕ್ಕಾಗಿ ದಿನಂಪ್ರತಿ ಸಾವಿರಾರು ಪ್ರಾಣಿಗಳ ವಧೆಯಾಗುತ್ತಲಿತ್ತೆಂದೂ ಹಿಂದೆ ಹೇಳಿರುವೆವು. ಇಷ್ಟೇ ಅಲ್ಲದೆ ಆತನು ಮೊದಲು ಹಿಂದೂವಾಗಿದ್ದುದರಿಂದ, ಯಜ್ಞಯಾಗ ನಿಮಿತ್ತವಾಗಿ ಸಹ ಎಷ್ಟೋ ಪ್ರಾಣಿಗಳ ಸಂಹಾರವು ನಿತ್ಯವೂ ಆತನ ಯಜ್ಞಶಾಲೆಯಲ್ಲಿ ಆಗುತ್ತಲಿರ ಬಹುದು. ಹೀಗಿದ್ದರೂ ಆತನಿಗೆ ಉಪರತಿಯುಂಟಾದೊಡನೆ ಆತನು ಎಲ್ಲಾ ಹಿಂಸೆಯನ್ನು ಕೂಡಲೇ ನಿಲ್ಲಿಸಿದುದರ ಮೇಲಿಂದ ಆತನ ದೃಢಬುದ್ಧಿಯ ಸ್ವಭಾವವು ವ್ಯಕ್ತವಾಗುತ್ತಲಿದೆ. ಬ್ರಾಹ್ಮಣರು ಯಜ್ಞಯಾಗಗಳಿಗಾಗಿ ಹಿಂಸೆಯನ್ನು ಮಾಡುತ್ತಲಿದ್ದರು. ಅವರು ಈ ರಾಜಾನುಶಾಸನದ ದೆಸೆಯಿಂದ ತಮ್ಮ ಧರ್ಮವು ಮುಳುಗಿತೆಂದು ತುಂಬಾ ಆಕ್ರೋಶವನ್ನು ಮಾಡಿಯೇ ಮಾಡಿರ ಬಹುದು. ಹಾಗೆಯೇ ಕ್ಷತ್ರಿಯರು ಆಹಾರಕ್ಕಾಗಿ ಪ್ರಾಣಿಗಳನ್ನು ವಧಿಸುತ್ತಲಿದ್ದರು. ಅವರಿಗೂ

ತಮ್ಮ ಸನಾತನವಾದ ಸ್ವಾತಂತ್ರ್ಯವನ್ನು ಮುಳುಗಿಸಿದುದಕ್ಕಾಗಿ
ಅತ್ಯಂತವಾದ ಸಂತಾಪವುಂಟಾಗದಿರುವುದು ಅಸಂಭವನೀಯವು.
ಆದರೆ ಅಶೋಕನು ಪ್ರತಿಯೊಂದು ವಿಷಯದಲ್ಲಿಯೂ ಅವರ
ಆಕ್ರೋಶಸಂತಾಪಗಳನ್ನು ಲೆಕ್ಕಿಸುವವನಾಗಿರಲಿಲ್ಲ. ಹಿಂಸೆಯ
ನ್ನು ನಿಷೇಧಿಸುವಲ್ಲಿ ಶ್ರುತಿಸ್ಮೃತಿಗಳ ಆಧಾರವನ್ನು ತೋರಿಸಿ,
ಬ್ರಾಹ್ಮಣರಿಗೆ ಮಾಂಸಾಹಾರವು ವಿಹಿತವೋ ನಿಷಿದ್ಧವೋ ಎಂದು
ನಿಶ್ಚಯಿಸುವ ಗದ್ದಲದಲ್ಲಿ ಆತನು ಬೀಳಲಿಲ್ಲ. ಪುನರ್ಜನ್ಮದ ತತ್ವದ
ಮೇಲೆ ಅವಲಂಬಿಸಿಯೂ ಆತನು ಜನಗಳನ್ನು ಸಂತೈಸುವ ಪ್ರಯ
ತ್ನವನ್ನು ಮಾಡಲಿಲ್ಲ. ಕೇವಲ ಭೂತದಯೆಯ ತತ್ವವನ್ನು ಅವ
ಲಂಬಿಸಿ ಆತನು ಇದನ್ನು ಪ್ರತಿಬಂಧಿಸಿದನು. ಆದುದರಿಂದಲೇ
ಕೊನೆಗೆ ಆತನ ಪ್ರಯತ್ನಗಳು ಸಫಲವಾದುವು. ರಾಜಸೂಯ,
ಅಶ್ವಮೇಧಾದಿ ಯಜ್ಞಗಳು ನಿಂತು ಹೋಗಿ, ಇತರ ಯಜ್ಞಗಳಲ್ಲಿ
ಸಹ ಪ್ರಾಣಿಗಳನ್ನು ಬಲಿ ಕೊಡುವದರ ಬದಲಾಗಿ ಹಾಲು, ಬೆಣ್ಣೆ,
ಚರು ಮುಂತಾದ ದ್ರವ್ಯಗಳನ್ನು ಉಪಯೋಗಿಸಲು ತೊಡಗುವಂತೆ
ಮಾಡಿದ ಈ ಶ್ರೇಯಸ್ಸು ತಪ್ಪದೆ ಅಶೋಕನಿಗೆ ಸಲ್ಲುವುದು.

ಈ ಭೂಮಂಡಲದಲ್ಲಿ ಇಂದಿನ ವರೆಗೆ ಯಾರೊಬ್ಬರೂ ಮಾಡದೆ
ಇರುವ ಒಂದು ಮಹತ್ಕಾರ್ಯವನ್ನು ಅಶೋಕನು ತನ್ನ ಆಳಿಕೆಯಲ್ಲಿ
ಮಾಡಿದ್ದನು. ಆತನು ಮನುಷ್ಯರಿಗಾಗಿಯೂ ಪಶ್ವಾದಿಗಳಿಗಾಗಿ
ಯೂ ಬೇರೆಬೇರೆ ಚಿಕಿತ್ಸಾಲಯಗಳನ್ನು ಸ್ಥಾಪಿಸಿದ್ದನು. ಮನು
ಷ್ಯರಿಗಾಗಿ ಚಿಕಿತ್ಸಾಲಯಗಳನ್ನು (ಅಸ್ಪತ್ರೆಗಳನ್ನು) ಸ್ಥಾಪಿಸಿದ
ಶ್ರೇಯಸ್ಸು ಕ್ರಿಸ್ತೀ ಧರ್ಮದವರಿಗೆ ಸಲ್ಲುವುದೆಂದು ಗರ್ವದಿಂದ
ಮೆರೆಯುವರು. ಮನುಷ್ಯರಿಗಾಗಿ ಮಾತ್ರವೇ ಅಲ್ಲದೆ ಪಶ್ವಾದಿ
ಕನಿಷ್ಠವರ್ಗದ ಪ್ರಾಣಿಗಳಿಗಾಗಿ ಸಹಾ, ಚಿಕಿತ್ಸಾಲಯಗಳನ್ನು
ಸ್ಥಾಪಿಸಿದ ಪುರುಷನು ಕ್ರಿಸ್ತನಿಗಿಂತ ೨೫೦ ವರ್ಷಕ್ಕೆ ಮೊದಲು ಆಗಿ
ಹೋದನೆಂಬುದನ್ನು ನೆನಪಿನಲ್ಲಿ ಇಟ್ಟುಕೊಳ್ಳತಕ್ಕುದಾಗಿದೆ. ಉಚ್ಚ
ವಾದ ಸದಯತೆಯಿಂದ ಆತನು ಹಾಕಿ ಕೊಟ್ಟ ಈ ಮೇಲ್ಪಂತಿಯು
ಇತಿಹಾಸದಲ್ಲಿ ಅಜರಾಮರವಾಗಿ ನಿಲ್ಲುವಷ್ಟು ಯೋಗ್ಯತೆಯನ್ನು

Digitized by ROJA MUTHIAH RESEARCH LIBRARY



ಳ್ಳುದಾಗಿದೆ. ಮನುಷ್ಯರಿಗಾಗಿ ನಿರ್ಮಿಸಿದ ಔಷಧಾಲಯಗಳಿಗಿಂತ
ಪಶ್ವಾದಿಗಳಿಗಾಗಿ ಚಿಕಿತ್ಸಾಲಯಗಳನ್ನು ನಿರ್ಮಿಸಿದುದರ ಪುಣ್ಯ
ವು ವಿಶೇಷವಾಗಿದೆ. ದನ, ಎಮ್ಮೆ, ಕುದುರೆ ಮುಂತಾದ ಪ್ರಾಣಿ
ಗಳ ಮುರಿದ ಕಾಲಿಗೆ ಮುಲಾಮುಪಟ್ಟಿ ಇಟ್ಟು ವಾಸಿ ಮಾಡಿದ್ದಲ್ಲಿ,
ಅಥವಾ ವ್ಯಾಘ್ರಗ್ರಸ್ತವಾದ ದುರ್ಬಲವಾದ ಪಶುವಿಗೆ ಒಂದು
ತುತ್ತು ಹುಲ್ಲನ್ನೂ ಒಂದು ಗುಟುಕು ನೀರನ್ನೂ ಕೊಟ್ಟಲ್ಲಿ, ಆ
ಉಪಕಾರದ ದೆಸೆಯಿಂದ ಅವು ತೋರಿಸುವ ಕೃತಜ್ಞತೆಯ ಚಿಹ್ನವು
ಆ ಮೂಗು ಪಶುಗಳ ಅಶ್ರುಪೂರ್ಣವಾದ ಕಣ್ಣುಗಳಲ್ಲಿ ಸ್ಪಷ್ಟವಾಗಿ
ತೋರುವ ಹಾಗೆ, ಬುದ್ಧಿಬಲವೂ ವಾಚಾಬಲವೂ ಇರುವ ಮನು
ಷ್ಯರ ಮೋರೆಗಳ ಮೇಲೆ ಸಹ ತೋರಲಾರದು. ಈ ಸಂಗತಿಯು
ಎರಡು ಸಾವಿರ ವರ್ಷಗಳಿಗೆ ಹಿಂದೆ ಇದ್ದ ಅಶೋಕನ ಲಕ್ಷ್ಯಕ್ಕೆ
ಬಂದು, ಆತನು ತನ್ನ ರಾಜ್ಯದಲ್ಲಿ ಎಲ್ಲೆಲ್ಲಿಯೂ ಇಂತಹ ಚಿಕಿತ್ಸಾ
ಲಯಗಳನ್ನು ಸ್ಥಾಪಿಸಿದನು. ಹಿಮಾಲಯಾದಿ ಪರ್ವತಗಳಿಂದ
ದುರ್ಮಿಳವಾದ ವನಸ್ಪತಿ ಮತ್ತು ಔಷಧದ್ರವ್ಯಗಳನ್ನು ತರಿಸಿ ಅವ
ನ್ನು ಪ್ರತಿಯೊಂದು ಸ್ಥಳದಲ್ಲಿಯೂ ಉಪವನಗಳಲ್ಲಿ ಮುಂತಾಗಿ
ನೆಡಿಸ ಬೇಕೆಂದು ಅಧಿಕಾರಿಗಳಿಗೆ ಅಪ್ಪಣೆ ಮಾಡಿದನು. ಈ
ಸಂಗತಿಯು ವಿಚಾರಣೀಯವೂ ಅಭಿಮಾನನೀಯವೂ ಆಗಿದೆ
ಎಂದು ಯಾರು ಹೇಳಲಾರರು? ಪ್ರಾಣಿಮಾತ್ರಕ್ಕಾಗಿ ಆತನಲ್ಲಿ
ಇಷ್ಟು ದಯೆಯು ಆತನ ಅಂತಃಕರಣದಲ್ಲಿ ಜಾಗ್ರತವಾಗುವುದಕ್ಕೆ
ಬೌದ್ಧಧರ್ಮವೇ ಕಾರಣವೆಂಬುದರಲ್ಲಿ ಸಂದೇಹವಿಲ್ಲ. ಬುದ್ಧನಿ
ಗಿಂತ ಮೊದಲು ಮಾಂಸಾಹಾರವು ಬ್ರಾಹ್ಮಣರಿಗೆ ವಿಹಿತವಾಗಿ
ತ್ತೋ ನಿಷಿದ್ಧವಾಗಿತ್ತೋ ಎಂಬೀ ವಿಷಯವನ್ನು ಚರ್ಚಿಸದೆ
ಹೋದರೂ, ಹಿಂದೂ ಧರ್ಮದ ಭೂತದಯೆಯ ಮರ್ಯಾದೆಯು
ಬೌದ್ಧಧರ್ಮಕ್ಕಿಂತ ಬಹಳ ಸಕುಂಚಿತವಾಗಿತ್ತೆಂಬುದನ್ನು ಎಲ್ಲ
ರೂ ನಿರಭಿಮಾನತೆಯಿಂದ ಒಪ್ಪಲೇ ಬೇಕು. ಹಿಂದುಸ್ಥಾನದ
ಹೊರಗಣ ಇತರ ಯಾವ ಧರ್ಮದಲ್ಲಿಯೂ ಇದು ಇನ್ನು ಹೆಚ್ಚು
ಸಕುಂಚಿತವಾಗಿರುವುದು ಕಂಡು ಬಾರದಿರಲಾರದು......

ಇತ್ತಿತ್ತಲಾಗೆ ಪಶುವಿಷಯಕ ನಿಷ್ಠೂರತಾನಿವಾರಕ ಮಂಡಳಿಗಳು ಪಾಶ್ಚಾತ್ಯ ದೇಶಗಳಲ್ಲಿ ನಿರ್ಮಿತವಾಗುತ್ತಲಿವೆ. ಆದರೆ ಪಶುಗಳನ್ನು ಕೊಲ್ಲುವಾಗ ಅವುಗಳಿಗೆ ಬಹಳ ಸಂಕಟವನ್ನುಂಟು ಮಾಡದೆ, ಫ್ರಾನ್ಸ್ ದೇಶದ ರಾಜ್ಯಕ್ರಾಂತಿಯ ಕಾಲದಲ್ಲಿ ಹೇಗೆ 'ಗಿಲೊಟಿನ್' ಎಂಬ ಯಂತ್ರದಿಂದ ಮನುಷ್ಯನ ತಲೆಯನ್ನು ಇಡಿಸಿ ಕ್ಷಣಾರ್ಧದಲ್ಲಿ ಅದನ್ನು ಮುಂಡದಿಂದ ಬೇರೆ ಮಾಡುತ್ತಲಿದ್ದರೋ, ಆ ರೀತಿಯಾಗಿ ಕೊಲ್ಲಬಹುದೆಂಬುದೇ ಈ ಮಂಡಲಿಗಳ ಉದ್ದೇಶವಾಗಿದೆ. ಇದಕ್ಕೆ ಹೆಚ್ಚಾಗಿ ಪಾಶ್ಚಾತ್ಯರಲ್ಲಿ ಭೂತದಯೆ ಇರುವಂತೆ ತೋರುವುದಿಲ್ಲ. ಇದಕ್ಕೆ ಒಂದು ಕಾರಣವು ಸೂಚಿಸುತ್ತಿದೆ. ಏನೆಂದರೆ ಮನುಷ್ಯರಂತೆ ಇತರ ಕ್ಷುದ್ರ ಪ್ರಾಣಿಗಳಿಗೂ ಆತ್ಮವಿರುವುದೆಂಬ ಈ ಕಲ್ಪನೆಯು ಹಿಂದೂ ಮತ್ತು ಬೌದ್ಧಧರ್ಮಗಳಲ್ಲಿ ಹೇಗೆ ಇರುವುದೋ ಹಾಗೆ ಬೇರೆ ಯಾವುದರಲ್ಲಿಯೂ ಇಲ್ಲ. ಆದುದರಿಂದಲೇ "ಅಹಿಂಸಾಪರಮೋಧರ್ಮ:" ಎಂಬೀ ಉದಾರವಾದ ತತ್ವವನ್ನು ಈ ಎರಡು ಧರ್ಮದವರು—ವಿಶೇಷವಾಗಿ ಬೌದ್ಧರು ಮಾಡಿದಷ್ಟು ಪೂರ್ಣವಾಗಿ ಬೇರೆ ಯಾರೂ ಮಾಡಿದ ಹಾಗೆ ತೋರುವುದಿಲ್ಲ.

ಅಶೋಕನು ನೀತಿ ಪ್ರಸಾರಾರ್ಥವಾಗಿ ತನ್ನ ರಾಜ್ಯದಲ್ಲಿ ಮಾಡಿದ ವಿಶೇಷವಾದ ಯೋಜನೆಯು ಆತನ ೫-೬ನೆಯ ಆದೇಶಗಳಿಂದ ಕಂಡು ಬರುತ್ತಲಿದೆ. "ಇಂದಿನ ವರೆಗೆ ಅಧಿಕಾರಿಗಳು ತುಂಬಾ ಅನೀತಿಯನ್ನು ನಡೆಯಗೊಟ್ಟರು" ಎಂಬುದು ಅಶೋಕನಿಗೆ ಸಹಿಸದೆ, ಆತನು ಜನಗಳ ನೀತಿಯ ವಿಷಯದಲ್ಲಿ ವಿಶೇಷವಾದ ಲಕ್ಷ್ಯವನ್ನು ಇಡುವುದಕ್ಕಾಗಿ "ಧರ್ಮಮಹಾಮಾತ್ರ" ಎಂಬ ವಿಶೇಷಾಧಿಕಾರಿಗಳನ್ನು ನಿಯಮಿಸಿದ್ದನು. ಇವರು ಉಚ್ಚನೀಚವೆಂಬುದನ್ನು ನೋಡದೆ, ಎಲ್ಲಾ ವರ್ಗಗಳ ಜನಗಳಲ್ಲಿ ಭೇದಭಾವವನ್ನಿಡದೆ, ಸೇರಿಕೊಂಡಿದ್ದು, ಅವರ ವರ್ತನದ ಮೇಲೆ ಕಣ್ಣಿಟ್ಟುಕೊಂಡು ಇರಬೇಕಾಗಿತ್ತು. ಸದ್ಧರ್ಮವನ್ನು ಕುರಿತು ಉಪದೇಶಿಸಿ, ಸನ್ಮಾರ್ಗದಲ್ಲಿ ನಡೆಯುವಂತೆ ಅವರ ಮನಸ್ಸುಗಳಲ್ಲಿ



ಪ್ರವೃತ್ತಿಯನ್ನು ಉಂಟುಮಾಡಿ, ದುಷ್ಟರಿಗೆ ಶಾಸನವನ್ನೂ ಶಿಷ್ಟರಿಗೆ ಸನ್ಮಾನವನ್ನೂ ಮಾಡತಕ್ಕ ಕೆಲಸವು ಅವರಿಗೆ ಒಪ್ಪಿಸಲ್ಪಟ್ಟದ್ದಾಗಿತ್ತು. ಇಷ್ಟೇ ಅಲ್ಲದೆ ವಚಭೂಮಿಕ ಮತ್ತು ರಜ್ಜುಕವೆಂಬೀ ಎರಡು ಅಧಿಕಾರಗಳನ್ನುಳ್ಳ ಕೆಲವು ಅಧಿಕಾರಿಗಳೂ ಇದ್ದರು. ಜನಗಳ ನಡತೆಯ ಮೇಲೆ ಲಕ್ಷ್ಯವಿಡುವುದು ವಚಭೂಮಿಕರ ಕೆಲಸವಾಗಿತ್ತು. ಈ ಅಧಿಕಾರಿಗಳಿಗೆ ಆಗಿಂದಾಗ ಉತ್ತೇಜನವನ್ನೂ ಬೇಕಾದಂತೆ ಸಹಾಯವನ್ನೂ ಕೊಡುವುದಕ್ಕಾಗಿ ರಜ್ಜುಕರು ನಿಯೋಜಿತರಾಗಿದ್ದರು. ಈ ರಜ್ಜುಕರ ಒಂದು ಪರಿಷತ್ತು ನೆರೆದು ಧರ್ಮವಿಷಯಕವಾದ ಪ್ರಶ್ನೆಗಳನ್ನು ಚರ್ಚಿಸುತ್ತಿದ್ದರು.[೫೭]

ಉಪದೇಶದ ದ್ವಾರಾ ಜನಗಳಲ್ಲಿ ಧರ್ಮವನ್ನೂ ನೀತಿಯನ್ನೂ ಪ್ರಸಾರಗೊಳಿಸ ಬೇಕೆಂಬುದೇ ಅಶೋಕನ ಉದ್ದೇಶವಾಗಿದ್ದುದರಿಂದ, ಈ ಎರಡು ವಿಷಯಗಳಿಗಿಂತ ಹೆಚ್ಚಾಗಿ ಆತನ ಇತರ ರಾಜ್ಯವ್ಯವಸ್ಥೆಯ ಸಂಬಂಧವಾದ ಹೆಚ್ಚು ಸಂಗತಿಗಳು ಈ ಲೇಖಗಳಲ್ಲಿ ಕಂಡು ಬರುವುದಿಲ್ಲ. ಆದರೂ ಸಿಕ್ಕಿದಷ್ಟು ಸ್ವಲ್ಪ ಸಂಗತಿಗಳಿಂದ ಆತನ ರಾಜ್ಯವ್ಯವಸ್ಥೆಯ ಕಲ್ಪನೆಯನ್ನು ನಾವು ಅಲ್ಪಸ್ವಲ್ಪವಾಗಿ ಮಾಡಬಹುದು. ಅಶೋಕನು ತನ್ನ ರಾಜ್ಯದೊಳಗಣ ಪ್ರತಿಯೊಂದು ಪ್ರಾಂತದಲ್ಲಿಯೂ ಒಬ್ಬೊಬ್ಬ ಮುಖ್ಯಾಧಿಕಾರಿಯನ್ನು ನಿಯಮಿಸಿದ್ದನು. ಅವರಿಗೆ ಪ್ರಾದೇಶಿಕರೆಂಬ ಹೆಸರು ಸಲ್ಲುತ್ತಿತ್ತು. ಈ ಪ್ರಾದೇಶಿಕರ ಮೇಲೆ ಲಕ್ಷ್ಯವಿಡುವುದಕ್ಕಾಗಿ ಮಹಾಮಾತ್ರರೆಂಬುವರು (ಅಮಾತ್ಯ) ನಿಯಮಿಸಲ್ಪಟ್ಟದ್ದರು. ಬಹಳ ಮಹತ್ವದ ಕಾರ್ಯಗಳನ್ನೆಲ್ಲಾ ಇವರು ನೋಡಿಕೊಳ್ಳುತ್ತಲಿದ್ದರು. ಎಲ್ಲೆಗಳನ್ನು ಕಾಪಾಡಿಕೊಂಡು ಕಳ್ಳಕಾಕರನ್ನು ನಾಶ ಮಾಡುವ ಕೆಲಸದ ಮೇಲೆ ಅಂತಹ ಮಹಾಮಾತ್ರರೆಂಬುವರು ನಿಯೋಜಿಸಲ್ಪಟ್ಟದ್ದರು. ಇನ್ನು ಅಂತಃಪುರದ ವ್ಯವಸ್ಥೆಯನ್ನು ನೋಡತಕ್ಕ ಪ್ರತ್ಯೇಕ ಅಧಿಕಾರಿಗಳು ಇದ್ದರು. ಅವರನ್ನು ಇತಿಝಕ ಮಹಾಮಾತ್ರರು (?) ಎನ್ನುತ್ತಿದ್ದರು. ಗಲ್ಲಕ್ಕೆ

[೫೭] M. Senart's paper in the Indian Antiquary.

Digitized by ROJA MUTHIAH RESEARCH LIBRARY

ಹಾಕುವ ಶಿಕ್ಷೆ ಕೊಟ್ಟ ಅಪರಾಧಿಗಳಿಗೆ ಶಿಕ್ಷೆಯನ್ನು ಮಾಡುವ ದಿನವನ್ನು ನಿರ್ಣಯಿಸಿದ ತರುವಾಯ ಈಶ್ವರಪ್ರಾರ್ಥನೆಗಾಗಿ ಮೂರು ದಿನದ ಅವಕಾಶವನ್ನು ಕೊಡುತ್ತಿದ್ದರು. ಅಶೋಕನ ಆಡಳಿತದ ವಿಷಯದಲ್ಲಿ ಇದಕ್ಕಿಂತ ಹೆಚ್ಚು ಸಂಗತಿಗಳನ್ನು ತಿಳಿಯಲಾರದಿರುವುದು ಅತ್ಯಂತ ಶೋಚನೀಯವಾದ ಸಂಗತಿಯೇ ಸರಿ. ಆ ಸಂಗತಿಗಳನ್ನು ತಿಳಿದಿದ್ದರೆ, ಅವುಗಳ ಮೂಲಕವಾಗಿ ಎರಡು ಸಾವಿರ ವರ್ಷಗಳ ಹಿಂದೆ ಹಿಂದುಸ್ಥಾನದ ಅರ್ಧಕ್ಕಿಂತ ಹೆಚ್ಚಾಗಿದ್ದ ಪ್ರಚಂಡವಾದ ರಾಜ್ಯದ ಆಡಳಿತವನ್ನು ನಮ್ಮ ಆರ್ಯಚಕ್ರವರ್ತಿಗಳಾದ ಪ್ರಭುಗಳು ಹೇಗೆ ಮಾಡುತ್ತಿದ್ದರೆಂಬುದನ್ನು ತಿಳಿಯಲು ಉತ್ಕೃಷ್ಟವಾದ ಸಾಧನವು ದೊರೆತಂತಾಗುತ್ತಿತ್ತು; ಮತ್ತು ಈಗಿನ ಸಂಸ್ಕೃತವಾದ ರಾಜ್ಯಪದ್ಧತಿಯೊಡನೆ ಆ ರಾಜ್ಯವ್ಯವಸ್ಥೆಯನ್ನು ಹೋಲಿಸಿ ನೋಡುವುದಕ್ಕೆ ಒಳ್ಳೆಯ ಅನುಕೂಲವಾಗುತ್ತಿತ್ತು.

---

## ೧೦ನೆಯ ಪ್ರಕರಣ.

### ವಾರ್ಧಕ್ಯ ಮತ್ತು ಮೃತ್ಯು.

ಅಶೋಕನಿಗೆ ಈಗ ಮುಪ್ಪು ಬರಹತ್ತಿತು; ಮತ್ತು ಈ ಸಂಸಾರದಲ್ಲಿ ಮನುಷ್ಯನು ಅನುಭವಿಸ ಬೇಕಾಗುವ ಶೋಕಭಾಗವನ್ನು ಅಶೋಕನೂ ಅನುಭವಿಸ ಬೇಕಾಯಿತು. ಇದರ ದೆಸೆಯಿಂದ ಅವನ ಶರೀರವು ತುಂಬಾ ಕ್ಷೀಣವಾಗಿತ್ತು. ಅವನ ಸ್ವಂತ ತಮ್ಮನಾದ ವಿತಾಶೋಕನು ಭಿಕ್ಷುವ್ರತವನ್ನಾಚರಿಸುತ್ತಿರಲು, ಒಬ್ಬ ಅಮೀರನು ಅವನ ಕುತ್ತಿಗೆಯನ್ನು ಕೊಯ್ದು, ರಾಜನಿಗೆ ಕಾಣಿಕೆಯಾಗಿತ್ತನು ಎಂಬುದನ್ನು ಹಿಂದೆ ವಿವರಿಸಿರುವೆವು. ಆ ತರುವಾಯ ಅವನ ಸಚ್ಛೀಲನೂ ಸದ್ಗುಣಿಯೂ ಆದ ಕುನಾಲನೆಂಬ ಮಗನು ಮಲತಾಯಿಯಾದ ತಿಷ್ಯರಕ್ಷಿತೆಯ ಚಕ್ರದಲ್ಲಿ ಸಿಲುಕಿ, ದೃಷ್ಟಿಸುಖವನ್ನು ಅಕಾರಣವಾಗಿ ಕಳೆದುಕೊಂಡನು. ಇದರಿಂದಲೂ, ಇನ್ನು ಬಹು ಪ್ರಕಾರವಾಗಿ ಅವನಿಗೆ ಕಷ್ಟಗಳು ಪ್ರಾಪ್ತವಾದುದರಿಂದಲೂ, ರಾಜನು ಯಾವಾಗಲೂ ದುಃಖಿತನಾಗಿದ್ದನು. ಅವನ ಎರಡನೆಯ ಮಗನಾದ ಮಹಿಂದನೂ ಮಗಳಾದ ಸಂಗಮಿತ್ರೆಯೂ ಪಟ್ಟದ ರಾಣಿಯ ಉದರದಲ್ಲಿ ಜನಿಯಿಸದ ಕಾರಣ ಅಶೋಕನ ತರುವಾಯ ಅವರಿಗೆ ಪಟ್ಟವೇರುವ ಅಧಿಕಾರವಿರಲಿಲ್ಲ. ಮತ್ತು ಅವರೂ ರಾಜ್ಯಪದಪ್ರಾಪ್ತಿಯಲ್ಲಿ ಲೇಶವಾದರೂ ಆಸೆಯನ್ನು ಇಡದೆ ಧರ್ಮಜೀವನವನ್ನು ಸ್ವೀಕರಿಸಿ, ಧರ್ಮಪ್ರಸಾರಕ್ಕಾಗಿ ಸಿಂಹಲದ್ವೀಪಕ್ಕೆ ಹೋದರೆಂಬುದನ್ನು ಹಿಂದೆ ಹೇಳಿದೆ. ಹೀಗೆ ಒಟ್ಟಿಗೆ ಅಶೋಕನಿಗೆ ಕುನಾಲನ ಮಗನಾದ ಸಂಪದಿಯ ಹೊರತು ಪ್ರೇಮಪಾತ್ರರಾದವರು ಕುಟುಂಬದಲ್ಲಿ ಯಾರೂ ಉಳಿದಿರಲಿಲ್ಲ. ಮನುಷ್ಯನು ಬಾಲ್ಯದಲ್ಲಿ ಆಗಲೀ ತಾರುಣ್ಯದಲ್ಲಿ ಆಗಲೀ ಆಪ್ತರ ವಿಷಯದಲ್ಲಿ ಅಷ್ಟೊಂದು ಲೆಕ್ಕಿಸುವುದಿಲ್ಲ. ಆದರೆ ಮಯೂರ ಕವಿಯು ಹೇಳಿದಂತೆ "ಕೃತಾಂತ ಕಟಕಾಮಲಧ್ವಜಜರಾ" ತೋರಿ "ಪುರಃಸರಗದಾಸವೇಂ ಝುಗಡತಾಂತನೂಭಾಗಲಿ"

Digitized by ROJA MUTHIAH RESEARCH LIBRARY

ಪ್ರಾಪ್ತವಾಗಲು ಅವನಿಗೆ ತನ್ನ ಕುಟುಂಬದೊಳಗಣ ಜನರೆಲ್ಲರೂ ತನ್ನ ಬಳಿಯಲ್ಲಿರ ಬೇಕೆಂಬ ಇಚ್ಛೆಯು ಉತ್ಪನ್ನವಾಗುವುದು. ಅಶೋಕನು ಈ ಮನುಷ್ಯ ಸ್ವಭಾವಕ್ಕೆ ಅಪವಾದವಾಗಿರಲಿಲ್ಲ. ಆದರೆ ಅಂತಹ ಇಚ್ಛೆಯು ಉತ್ಪನ್ನವಾದರೂ, ಅದು ಸಫಲವಾಗುವ ಚಿಹ್ನಗಳನ್ನು ಸ್ವಲ್ಪವೂ ಕಾಣದಿರುವುದು ಮಾತ್ರ ಅತಿ ದುರ್ಭಾಗ್ಯತೆಯ ದ್ಯೋತಕವು. ಇಂತಹ ದೌರ್ಭಾಗ್ಯವು ಅಶೋಕನಿಗೆ ಪ್ರಾಪ್ತವಾಗಲಾಗಿ ಅವನ ಧೈರ್ಯವು ಕುಂದಿ, ಸಂಸಾರದ ವಿಷಯವಾಗಿ ಉದ್ವಿಗ್ನತೆಯೂ, ವಿರಕ್ತತೆಯೂ ಅವನ ಮನಸ್ಸಿನಲ್ಲಿ ಉದ್ಭವಿಸಿತು. ಕಡೆಗೆ ಅವನು ಭಿಕ್ಷುವ್ರತದ ದೀಕ್ಷೆಯನ್ನು ತೆಗೆದುಕೊಂಡನು. ಈ ಸಂಬಂಧವಾಗಿ ಒಂದು ಚಮತ್ಕಾರದ ಕಥೆಯು ಹಲವು ಗ್ರಂಥಗಳಲ್ಲಿ ದೊರೆಯುತ್ತಿದೆ. ಅದೆಂತೆನೆ—"ಒಂದು ದಿನ ಅಶೋಕ ರಾಜನು ತನ್ನ ಗುರುವಾದ ಆಚಾರ್ಯಗುಪ್ತನನ್ನು ಕರೆಯಿಸಿ ಆತನೊಡನೆ ಬೌದ್ಧರಲ್ಲಿ 'ಈ ವರೆಗೆ ಎಲ್ಲರಿಗಿಂತ ಹೆಚ್ಚು ದಾನವನ್ನು ಯಾರು ಮಾಡಿರುವರು?' ಎಂದು ಪ್ರಶ್ನೆ ಮಾಡಿದನು. ಅದಕ್ಕೆ ಉಪಗುಪ್ತನು 'ಅನಾಥ ಪಿಂಡಿಕನೆಂಬ ಗೃಹಸ್ಥನು. ಈ ಅನಾಥ ಪಿಂಡಿಕನು ಪ್ರವಸ್ತಿಯೆಂಬ ಪಟ್ಟಣದಲ್ಲಿರುತ್ತಿರಲು, ಅಲ್ಲಿಗೆ ಬುದ್ಧ ಮಹಾರಾಜರು ವಿಜಯುವನ್ನು ಮಾಡಲಾಗಿ, ಅವರಿಗೆ ಇರುವುದಕ್ಕೋಸ್ಕರ ಅವನು ತನ್ನ ಜೇತವನವೆಂಬ ಸುಂದರವೂ ವಿಸ್ತಾರವೂ ಆದ ಉದ್ಯಾನವನ್ನು ಕೊಟ್ಟನು. ಬುದ್ಧನು ಚಾತುರ್ಮಾಸ್ಯವನ್ನು ಇಲ್ಲಿಯೇ ತನ್ನ ಶಿಷ್ಯಪರಿವಾರದೊಂದಿಗೆ ಕಳೆದನು,' ಎಂದನು. ಇದನ್ನು ಕೇಳಿ ರಾಜನು 'ಅವನು ಈ ವರೆಗೆ ಎಷ್ಟು ದಾನಧರ್ಮವನ್ನು ಮಾಡಿರ ಬಹುದು?' ಎನ್ನಲು, ಉಪಗುಪ್ತನು 'ನೂರು ಕೋಟಿ ಸುವರ್ಣಮುದ್ರೆಗಳು' ಎಂದು ಉತ್ತರ ಕೊಟ್ಟನು. ಅದಕ್ಕೆ ಅಶೋಕನು 'ಒಳ್ಳೆಯದು, ನಾನೂ ನೂರು ಕೋಟಿ ಸುವರ್ಣ ಮುದ್ರೆಗಳನ್ನು ಕೊಡುವೆನು. ಅವುಗಳನ್ನು ಸ್ವೀಕರಿಸಿರಿ. ನಾನು ಇಂದಿನ ವರೆಗೆ ಎಂಭತ್ತುನಾಲ್ಕು ಸಾವಿರ ಸ್ತೂಪಗಳನ್ನೂ ವಿಹಾರಗಳನ್ನೂ ಕಟ್ಟಿಸಿರುವೆನು. ಆ ಪ್ರತಿಯೊಂದು ಸ್ತೂಪಕ್ಕೋಸ್ಕರ



ನಾನು ಒಂದೊಂದು ಲಕ್ಷ ಸುವರ್ಣಮುದ್ರೆಗಳನ್ನು ಕೊಡುವೆನು. ಮತ್ತು ಶಾಕ್ಯಗೌತಮನು ಹುಟ್ಟಿದ ಸ್ಥಳದಲ್ಲಿಯೂ, ಆತನು ಬುದ್ಧನಾದ ಸ್ಥಳದಲ್ಲಿಯೂ, ಅವನು ಧರ್ಮೋಪದೇಶವನ್ನು ಮಾಡಿದ್ದಲ್ಲಿಯೂ, ಇನ್ನು ಅವನು ನಿರ್ಯಾಣವನ್ನೈದಿದಲ್ಲಿಯೂ, ಮುಂತಾಗಿ ಈ ಎಲ್ಲಾ ಸ್ಥಳಗಳಲ್ಲಿ ಹೀಗೆ ಒಂದೊಂದು ಲಕ್ಷ ಮುದ್ರೆಗಳನ್ನು ಕೊಡುವೆನು. ಚಾತುರ್ಮಾಸ್ಯದಲ್ಲಿ ಎಲ್ಲಾ ಭಿಕ್ಷುಗಳೂ ಭಿಕ್ಷುಣಿಯರೂ ನನ್ನಲ್ಲಿಗೆ ಬಂದು, ನನ್ನ ಆತಿಥ್ಯವನ್ನು ಸ್ವೀಕರಿಸ ಬೇಕೆಂದು ನಾನು ಬಿನ್ನವಿಸುವೆನು. ಅದಕ್ಕಾಗಿ ನಾನು ನಾಲ್ಕು ಲಕ್ಷ ಸುವರ್ಣ ಮುದ್ರೆಗಳನ್ನು ತೆಗೆದಿಡುವೆನು. ಹಾಗೆಯೇ ಮೂರು ಸಾವಿರ ಭಿಕ್ಷುಗಳಿಗೆ ನಿರಂತರವೂ ಪರಿಪಾಲಿಸುವ ವ್ಯವಸ್ಥೆಯನ್ನು ನಾನು ಇಡುವೆನು. ಸ್ವತಃ ನಾನೂ, ನನ್ನ ಸ್ತ್ರೀಪುತ್ರರೂ ಭೂಮಿಯ ರೂಪವಾಗಿ ಇಟ್ಟ ನಮ್ಮ ಖಾಸಗಿಯ ಸಂಪತ್ತನ್ನೂ ನಾನು ದಾನ ಮಾಡಿರುವೆನೆಂದು ತಿಳಿಯಬೇಕು. ನಗದು ಹಣದ ಮೇಲೆ ಮಾತ್ರ ನಮ್ಮ ಬಾಧ್ಯತೆಯುಂಟು. ಈ ಹಣದಲ್ಲಿ ನಾಲ್ಕು ಲಕ್ಷ ಸುವರ್ಣ ಮುದ್ರೆಗಳನ್ನು ಕೊಟ್ಟು, ಆ ಭೂಸಂಪತ್ತನ್ನು ನಾವು ತಿರಿಗಿ ಕೊಂಡುಕೊಂಡಿರುವೆವು. ಒಟ್ಟಿಗೆ ನಾನು ತೊಂಭತ್ತಾರು ಕೋಟಿ ಸುವರ್ಣಮುದ್ರೆಗಳನ್ನು ದಾನಧರ್ಮ ಮಾಡಿರುವೆನು' ಎಂದು ರಾಜನು ತನ್ನ ವ್ಯವಸ್ಥೆಯನ್ನೆಲ್ಲಾ ಹೇಳಿದನು. ಈ ಭಾಷಣದಿಂದ ರಾಜನು ಶ್ರಮಿತನಾದುದರಿಂದ, ಆಸನದ ಮೇಲೆ ಮೈಯನ್ನು ಒರಗಿಸಿ, ಕೊಂಚ ಹೊತ್ತು ಸುಮ್ಮನಾದನು. 'ನಾನು ಇನ್ನು ಬಹಳ ದಿನ ಬದುಕುವ ಹಾಗಿಲ್ಲವೆಂದು ಆಗಲೇ ಆತನು ಉಪಗುಪ್ತನಿಗೆ ಹೇಳಿದನು."

ಮಹಾರಾಜರು ಅಸ್ವಸ್ಥರಾಗಿರುವರೆಂಬ ವಾರ್ತೆಯನ್ನು ಕೇಳಿದೊಡನೆಯೇ ಪ್ರಧಾನನಾದ ರಾಧಾಗುಪ್ತನು ಅವಸರದಿಂದ ರಾಜನಿದ್ದಲ್ಲಿಗೆ ಬಂದನು. ಆಗ ರಾಜನ ನೇತ್ರಗಳಿಂದ ಅಶ್ರುಪ್ರವಾಹವು ಸುರಿಯುತ್ತಲಿತ್ತು. ಇದನ್ನು ನೋಡಿ ಪ್ರಧಾನನು ರಾಜನಿಗೆ ಸಾಷ್ಟಾಂಗ ಪ್ರಣಿಪಾತವನ್ನು ಮಾಡಿ, "ಸ್ವಾಮಿ, ಇದು ಏನು?"

Digitized by ROJA MUTHIAH RESEARCH LIBRARY

ಎಂದು ಕೇಳಿದನು. ಅಶೋಕನು “ರಾಧಾಗುಪ್ತ! ಧನ, ರಾಜ್ಯ, ಸಂಸಾರಗಳನ್ನು ಬಿಟ್ಟು ಹೋಗ ಬೇಕಾಗುವುದೆಂದು ನನಗೆ ಲೇಶವಾದರೂ ಕ್ಲೇಶವಾಗುವುದಿಲ್ಲ; ಆದರೆ ನಾನು ಸ್ಥಾಪಿಸಿದ ಆರ್ಯಸಂಘಕ್ಕೂ ನನಗೂ ಚಿರಕಾಲ ವಿಯೋಗವಾಗುವುದು ಎಂಬುದಕ್ಕಾಗಿಯೇ ನನಗೆ ಈಗ ದುಃಖವಾಗುತ್ತಿದೆ. ಇನ್ನು ಮುಂದೆ ಆ ಸಂಘಕ್ಕೆ ಅವಶ್ಯಕವಿರುವ ಜೀವನವು ನನ್ನಿಂದ ದೊರೆಯಲಿಕ್ಕಿಲ್ಲ. ರಾಧಾಗುಪ್ತ! ನಾನು ಬುದ್ಧಪ್ರಭುವಿನ ಧರ್ಮವನ್ನು ಪ್ರಸಾರಗೊಳಿಸುವುದಕ್ಕಾಗಿ, ನೂರು ಕೋಟಿ ಸುವರ್ಣಮುದ್ರೆಗಳನ್ನು ದಾನ ಮಾಡ ಬೇಕೆಂದು ಸಂಕಲ್ಪವನ್ನು ಮಾಡಿದ್ದೆನೆಂಬುದು ನಿಮಗೆ ಗೊತ್ತೇ ಇರುವುದು. ಆದರೆ ಆ ಸಂಕಲ್ಪವು ನನ್ನಿಂದ ಕೊನೆಗಾಣಲಿಲ್ಲೆಂಬುದಕ್ಕಾಗಿ ನನಗೆ ಬಹಳ ಖೇದವಾಗುತ್ತಿದೆ. ತೊಂಭತ್ತಾರು ಕೋಟಿಗಳ ವ್ಯವಸ್ಥೆ ಆಯಿತು. ಇನ್ನೂ ನಾಲ್ಕು ಕೋಟಿ ಬೇಕಾಗಿದೆ ಎಂದನು.”

ಕುನಾಲಪುತ್ರನಾದ ಸಂಪದಿಯು ಈಗ ಯುವರಾಜ ಪಟ್ಟದ ಉತ್ತರಾಧಿಕಾರಿಯಾಗಿದ್ದನು. ರಾಜನು ಈ ಮೇರೆಗೆ ತನ್ನ ಬೊಕ್ಕಸವನ್ನೆಲ್ಲಾ ಹಾಳುಮಾಡಿ ಬಿಟ್ಟುದನ್ನು ನೋಡಿ ಮಂತ್ರಿಗಳು ಗಾಬರಿಯಾಗಿ, ಓಡುತ್ತೋಡುತ್ತ ಹೋಗಿ ಈ ಸಂಗತಿಯನ್ನು ಯುವರಾಜನಿಗೆ ಅರುಹಿದರು. ಅವರು “ಧರ್ಮಾವತಾರರಾದ ತಮ್ಮ ಹಿರಿಯರು ಇನ್ನು ಬಹಳ ದಿವಸ ಬಾಳರು. ಆದರೆ ತಾವು ಇನ್ನೂ ಬಹಳ ದಿವಸ ರಾಜ್ಯವನ್ನು ಆಳುವವರು. ಹಿರಿಯ ಮಹಾರಾಜರು ಬೊಕ್ಕಸವನ್ನೆಲ್ಲಾ ಕುಕ್ಕುಟಾರಾಮಕ್ಕೆ (ಆಚಾರ್ಯ ಉಪಗುಪ್ತನ ಮಠಕ್ಕೆ) ಕಳುಹಿಸಿ, ತಮ್ಮ ಸರ್ವನಾಶ ಮಾಡ ತೊಡಗಿರುವರು. ಅದನ್ನು ತಾವು ನಿವಾರಿಸುವುದು ಉಚಿತವಾಗಿದೆ” ಎಂದರು. ಇದನ್ನು ಕೇಳಿ ಸಂಪದಿಯ ಮನಸ್ಸು ತಿರುಗಿ, “ಇನ್ನು ಮುಂದೆ ಬೊಕ್ಕಸದೊಳಗಣ ದ್ರವ್ಯವನ್ನು ಕೊಡ ಬೇಡಿರಿ” ಎಂದು ಅವನು ಮಂತ್ರಿಗಳಿಗೆ ಅಪ್ಪಣೆಯನ್ನು ಮಾಡಿದನು. ಅಶೋಕರಾಜನು ಪ್ರತಿದಿನವೂ ಸುವರ್ಣಪಾತ್ರೆಯಲ್ಲಿ ಭೋಜನ ಮಾಡಿ,

Digitized by ROJA MUTHIAH RESEARCH LIBRARY



ತರುವಾಯ ಆ ಹರಿವಾಣವನ್ನು ಕುಕ್ಕುಟಾರಾಮಕ್ಕೆ ಕಳುಹುತ್ತಿದ್ದನು; ಆದರೆ ಮಂತ್ರಿಗಳು ಪ್ರತಿ ದಿನವೂ ಸುವರ್ಣಪಾತ್ರೆಗಳನ್ನು ಕೊಡುವುದರ ಬದಲು ಈಗ ಬೆಳ್ಳಿಯ ಹರಿವಾಣಗಳನ್ನು ಕೊಡಲು ತೊಡಗಿದರು. ಅಶೋಕನು ಮೊದಲಿನಂತೆ ಅದನ್ನೂ ಕುಕ್ಕುಟಾರಾಮಕ್ಕೆ ಕಳುಹಿಸಲಾರಂಭಿಸಿದನು. ಮುಂದೆ ಬೆಳ್ಳಿಯ ಹರಿವಾಣವೂ ದೊರೆಯದ ಹಾಗಾಗಿದ್ದುದರಿಂದ, ಅವನು ಮಣ್ಣಿನ ಪಾತ್ರದಲ್ಲಿ ಊಟ ಮಾಡ ತೊಡಗಿದನು. ಒಂದು ದಿನ ಮಂತ್ರಿಗಳು ಅವನ ಸಮಾಚಾರವನ್ನು ತಿಳಿಯುವುದಕ್ಕಾಗಿ ಬರಲು, ರಾಜನು ಕೈಯಲ್ಲಿ ನೆಲ್ಲೀಕಾಯಿಯ ಅರ್ಧಭಾಗವನ್ನು ಹಿಡಿದು, “ಮಂತ್ರಿವರ್ಯರೇ! ಈ ದೇಶದ ರಾಜನು ಯಾವನು?” ಎಂದನು. ಮಂತ್ರಿಗಳು ವಿಸ್ಮಿತರಾಗಿ ಕೈಮುಗಿದು, “ಪ್ರಭುಗಳೇ! ಹೀಗೇಕೆ ಕೇಳುವಿರಿ? ಈ ರಾಜ್ಯವು ತಮ್ಮದೇ” ಎಂದರು. ಈ ಉತ್ತರವನ್ನು ಕೇಳಿ ರಾಜನ ಕಣ್ಣುಗಳು ಅಶ್ರುಪೂರ್ಣವಾದುವು. ಅವನು “ಸತ್ಯವಾಗಿ ಹೇಳುವಿರಾ? ನಾನು ರಾಜ್ಯಭ್ರಷ್ಟನಾಗಿಲ್ಲವೇ? ನೋಡಿರಿ, ಈ ನೆಲ್ಲಿಯಕಾಯಿಯ ಅರ್ಧಭಾಗದ ಹೊರತು ನನ್ನದೆನ್ನುವ ವಸ್ತುವೇ ನನಗೆ ಈಗ ಉಳಿಯಲಿಲ್ಲ. ನಾನು ಸಾರ್ವಭೌಮ ರಾಜನಾದರೂ ಎರಡನೆಯವರಿಗೆ ಕೊಡುವೆನೆಂದರೆ, ನನ್ನ ಬಳಿಯಲ್ಲಿ ಏನೂ ಇಲ್ಲ. ಈ ಐಹಿಕ ಸಾಮ್ರಾಜ್ಯಕ್ಕೂ, ನೀರುಗುಳ್ಳೆಯಂತೆ ಅಶಾಶ್ವತವಾದ ಈ ಪ್ರಭುತ್ವಕ್ಕೂ ಧಿಕ್ಕಾರವು! ನಾನು ಜನರನ್ನು ಆಳುವವನು; ಆದರೆ ದುಃಖವು ನನ್ನನ್ನು ಆಳುವುದಾಯಿತು. ಯಾವನು ಸಂಪೂರ್ಣ ಪೃಥ್ವಿಯ ಏಕಚ್ಛತ್ರಾಧಿಪನಾಗಿ ರಾಜ್ಯವಾಳಿದನೋ, ಯಾವನು ಅನೇಕ ಸಂಗ್ರಾಮಗಳಲ್ಲಿ ಯಶಸ್ಸನ್ನು ಸಂಪಾದಿಸಿದನೋ, ಯಾವನು ನಾನು ನಾನೆನ್ನುವ ಗರ್ವದಿಂದ ಮತ್ತರಾದಂತಹ ಮಹಾಬಲಾಢ್ಯರಾದ ರಾಜರ ತಿಂಡಿಯನ್ನು ತಗ್ಗಿಸಿದನೋ, ಯಾವನು ಪ್ರಜೆಗಳಿಗೂ ರಾಜ್ಯಕ್ಕೂ ಅಪಾಯಕರವಾದಂತಹ ಸಹಸ್ರಾವಧಿ ಬಂಡಾಯಗಳನ್ನು ಮುರಿದನೋ, ಯಾವನು ಬಡವರನ್ನು ಕಾಪಾಡಿದನೋ, ಆ ಅಶೋಕನೇ

ಈಗ ರಾಜ್ಯಭ್ರಷ್ಟನಾಗಿ ದುಃಖದಿಂದ ಕಾಲಕ್ಷೇಪವನ್ನು ಮಾಡುತ್ತಿರುವನು. ಇದಕ್ಕಿಂತ ಅಧಿಕವಾದ ದೈವದುರ್ವಿಪಾಕದ ಪ್ರತ್ಯಕ್ಷ ಉದಾಹರಣೆಯು ಎಲ್ಲಿ ದೊರೆಯುವುದು? ಗಿಡದ ಮೇಲಣ ಹೂವು ಅಥವಾ ಎಲೆಯು ಟೊಂಗೆಯಲ್ಲಿರುವ ವರೆಗೆ ಮಾತ್ರ ಶೋಭಿಸುವುದು. ಅದು ಕೆಳಗೆ ಬಿದ್ದೊಡನೆಯೇ ಒಣಗಿ ಹೋಗುವುದು. ನನ್ನಂತಹ ರಾಜನ ಸ್ಥಿತಿಯೂ ಹೀಗೆಯೇ ಆಗಿದೆ. ಉದುರಿ ಬಿದ್ದ, ಸುಗಂಧಹೀನವಾದ, ಸೌಂದರ್ಯರಹಿತವಾದ, ಪುಷ್ಪದಂತೆ ಶುಷ್ಕನಾಗಿಯೂ ನಿಸ್ತೇಜನಾಗಿಯೂ ನಾನು ದಿನಗಳನ್ನು ಕಳೆಯುತ್ತಿರುವೆನು" ಎಂದನು.

ಅಶೋಕನು ಇನ್ನೊಬ್ಬನನ್ನು ಕರೆದು, "ಎಲೈ, ಬಂಧುವೇ! ನನ್ನಲ್ಲಿ ಅಪ್ಪಣೆಯನ್ನು ಮಾಡುವ ಅಧಿಕಾರವು ಉಳಿಯಲಿಲ್ಲೆಂಬುದು ನಿಜವು; ಆದರೂ ಬಿನ್ನಹ ಮಾಡಲು ಅಡ್ಡಿ ಇಲ್ಲ. ಈ ನನ್ನ ಕಡೆಯ ಬಿನ್ನಹವನ್ನು ನೀನು ಮಾನ್ಯವನ್ನಾಗಿ ಮಾಡು. ನೀನು ಕುಕ್ಕುಟಾರಾಮಕ್ಕೆ ಹೋಗಿ, ಈ ನೆಲ್ಲಿಯ ಶಕಲವನ್ನು ಕೊಟ್ಟು, ಅಲ್ಲಿರುವ ಆಚಾರ್ಯರ ಚರಣಗಳಿಗೆ ನನ್ನ ಹೆಸರಲ್ಲಿ ವಂದಿಸಿ, 'ರಾಜಾಧಿರಾಜನಾದ ಅಶೋಕನ ಐಶ್ವರ್ಯವು ಇಷ್ಟೇ ಉಳಿದಿದೆ; ಅದನ್ನೂ ಅವನು ತಮ್ಮ ಚರಣಗಳಿಗೆ ಅರ್ಪಿಸಿರುವನು. ಈ ಫಲದ ಅಂಶವು ಸಂಘದೊಳಗಣ ಯಾವತ್ತರಿಗೂ ದೊರೆಯುವಂತೆ ವ್ಯವಸ್ಥೆಯನ್ನು ಮಾಡುವ ಭಾರವು ತಮ್ಮ ಮೇಲಿದೆ' ಎಂದು ಹೇಳು" ಎಂದನು.

ತರುವಾಯ ಅಶೋಕನು ರಾಧಾಗುಪ್ತನ ಕಡೆಗೆ ತಿರುಗಿ "ಮಂತ್ರಿವರ್ಯನೇ! ಈಗ ಈ ದೇಶವನ್ನು ಯಾವನು ಆಳುತ್ತಿರುವನು?" ಎಂದು ಕೇಳಿದನು. ರಾಧಾಗುಪ್ತನು ಮೊದಲಿನಂತೆಯೇ "ಮಹಾರಾಜರೇ! ತಾವೇ ನಮ್ಮ ಒಡೆಯರು" ಎಂದು ಉತ್ತರವನ್ನು ಕೊಟ್ಟನು. ಅದನ್ನು ಕೇಳಿದ ಕೂಡಲೇ ಅಶೋಕನು ಆಸನದಿಂದೆದ್ದು, ಆಕಾಶದ ಕಡೆಗೆ ದೋರೆಯನ್ನು ಮಾಡಿ, ನಾಲ್ಕೂ ದಿಕ್ಕುಗಳನ್ನು ನೋಡಿ ದೊಡ್ಡ ಧ್ವನಿಯಿಂದ, "ನಾನು ಈ ಹೊತ್ತು ಧನ



ಭಾಂಡಾಗಾರದ ಹೊರತು ಬಹು ರತ್ನಗಳಿಂದ ಶೋಭಿಸುವಂತಹ ಈ ವಸುಂಧರೆಯನ್ನೆಲ್ಲಾ ಬುದ್ಧಸಂಘಕ್ಕೆ ಅರ್ಪಿಸಿರುವೆನು. ಈ ಪುಣ್ಯಕರ್ಮದ ಫಲವು ನನಗೆ ದೊರೆಯಲಿ! ನನಗೆ ಮುಂದಿನ ಜನ್ಮದಲ್ಲಿ ರಾಜ್ಯಸುಖವು ದೊರೆಯ ಬೇಕೆಂದೂ, ಅಥವಾ ಇಂದ್ರಭುವನವು ಲಭಿಸ ಬೇಕೆಂದೂ, ಇಲ್ಲವೇ ಬ್ರಹ್ಮಲೋಕವು ಪ್ರಾಪ್ತವಾಗ ಬೇಕೆಂದೂ, ನಾನು ಇಚ್ಛಿಸುವುದಿಲ್ಲ. ಇವೆಲ್ಲವುಗಳೂ ನೀರುಗುಳ್ಳೆಯಂತೆ ಕ್ಷಣಜೀವಿಗಳು; ಅರ್ಥಾತ್ ನಶ್ವರವಾದುವುಗಳು. ಧರ್ಮದ ವಿಷಯದಲ್ಲಿ ತೋರಿಸಿದ ದೃಢಶ್ರದ್ಧೆಯ ಬದಲು ನನಗೆ ಆತ್ಮಸಂಯಮನವು ದೊರೆತರೆ ಸಾಕು. ಪೃಥ್ವಿಯ ಸಾಮ್ರಾಜ್ಯವು ಕ್ಷಣಭಂಗುರವಾದುದು; ಆದರೆ ಆತ್ಮದ ಸಾಮ್ರಾಜ್ಯವು ಚಿರಕಾಲವು ಬಾಳುವುದು ಎಂದನು." ಈ ಮೇರೆಗೆ ಪೃಥ್ವಿಯನ್ನೆಲ್ಲಾ ಕೊಟ್ಟಂತೆ ದಾನಪತ್ರವನ್ನು ಬರೆದು ತಾರೆಂದು ರಾಧಾಗುಪ್ತನಿಗೆ ಹೇಳಿದನು. ಆ ಮೇರೆಗೆ ರಾಧಾಗುಪ್ತನು ಮಾರನೆಯ ದಿನ ದಾನಪತ್ರವನ್ನು ತಂದ ಬಳಿಕ, ಸ್ವಹಸ್ತದಿಂದ ಅದಕ್ಕೆ ರಾಜಮುದ್ರೆಯನ್ನು ಹಾಕಿ, ಅದನ್ನು ಕುಕ್ಕುಟಾರಾಮಕ್ಕೆ ಕಳುಹಿಸಿ ಕೊಟ್ಟನು.[೫೭] ಆ ಪತ್ರವು ಆಚಾರ್ಯರ ಕೈಸೇರಿದೊಡನೆಯೇ ಇತ್ತ ಮಹಾರಾಜನು ಇಹಲೋಕದ ಯಾತ್ರೆಯನ್ನು ಮುಗಿಸಿ, ಪರಲೋಕವನ್ನು ಕುರಿತು ಪ್ರಯಾಣ ಮಾಡಿದನು.

ಅಶೋಕನ ಅಂತ್ಯೇಷ್ಟಕ್ರಿಯೆ ಮೊದಲಾದುವುಗಳು ತೀರಿದ ಬಳಿಕ ರಾಧಾಗುಪ್ತನು ಮಂತ್ರಿಗಣವನ್ನು ಒಟ್ಟುಗೂಡಿಸಿ, "ಅಶೋಕ ಮಹಾರಾಜರು ನೂರು ಕೋಟಿ ಸುವರ್ಣ ಮುದ್ರೆಗಳನ್ನು ದಾನ ಮಾಡಲು ಸಂಕಲ್ಪವನ್ನು ಮಾಡಿದ್ದರು. ಅವುಗಳಲ್ಲಿ ತೊಂಭತ್ತಾರು ಕೋಟಿಗಳನ್ನು ಕೊಟ್ಟರು; ಮಿಕ್ಕ ನಾಲ್ಕು ಕೋಟಿಗಳನ್ನು

[೫೭] ಅಶೋಕನು ಮೂರು ಸಲ ಜಂಬೂದ್ವೀಪವನ್ನು ದಾನ ಮಾಡಿದ್ದನು; ಮತ್ತು ಮೂರಾವರ್ತಿಯೂ ಸಂಘಕ್ಕೆ ಯೋಗ್ಯ ಬೆಲೆಯನ್ನು ಕೊಟ್ಟು ಅದನ್ನು ಬಿಡಿಸಿಕೊಂಡಂತೆ ಅವನ ಶಿಲಾಲೇಖಗಳಲ್ಲಿ ಉಲ್ಲೇಖವುಂಟೆಂದು, ಫಾಹಯನೆಂಬ ಚೀನಿ ಪ್ರವಾಸಿಯು ತನ್ನ ಪ್ರವಾಸವರ್ಣನೆಯಲ್ಲಿ ಬರೆದಿರುವನು. ಆದರೆ ಈ ಲೇಖವು ಎಲ್ಲಿಯೂ ನಮ್ಮ ಕಣ್ಣಿಗೆ ಬಿದ್ದಿಲ್ಲ.

Digitized by ROJA MUTHIAH RESEARCH LIBRARY

ಕೊಡತಕ್ಕುದಾಗಿತ್ತು. ಹಿರಿಯ ಮಹಾರಾಜರ ಈ ಅವಶಿಷ್ಟವಾದ ಇಚ್ಛೆಯನ್ನು ಯುವರಾಜರು ಪೂರ್ಣ ಮಾಡುವರೆಂದು ತೋರದಿದ್ದುದರಿಂದ, ಅವರು ಪೃಥ್ವಿಯನ್ನು ದಾನಮಾಡಿದರು. ಈಗ ನಾವು ಒಂದು ಕಾರ್ಯವನ್ನು ಮಾಡ ಬೇಕಾಗಿದೆ. ಈ ನಾಲ್ಕು ಕೋಟಿ ಸುವರ್ಣ ಮುದ್ರೆಗಳನ್ನು ಸಂಘಕ್ಕೆ ಕೊಟ್ಟು, ಅವರಿಂದ ರಾಜ್ಯವನ್ನು ಬಿಡಿಸಿಕೊಳ್ಳಬೇಕು; ಎಂದರೆ, ನಾಲ್ಕು ಕೋಟಿಗೆ ರಾಜ್ಯವನ್ನು ಮಾರಾಟದಲ್ಲಿ ತೆಗದುಕೊಳ್ಳ ಬೇಕು" ಎಂದನು. ರಾಧಾಗುಪ್ತನ ಈ ಯುಕ್ತಿಯು ಎಲ್ಲರಿಗೂ ಮಾನ್ಯವಾಗಿ, ಒಡನೆಯೇ ಅದರಂತೆ ವ್ಯವಸ್ಥೆಯು ಮಾಡಲ್ಪಟ್ಟಿತು. ಈ ಪ್ರಕಾರ ಸಂಘದಿಂದ ಬಿಡಿಸಿಕೊಂಡ ರಾಜ್ಯವನ್ನು ಅಶೋಕನ ತರುವಾಯ ಸಂಪದಿಯು ಆಳಿದನು. ಅವನ ಅನಂತರ ಅವನ ಮಗನಾದ ಬ್ರಹಸ್ಪತಿಯು ರಾಜ್ಯಕ್ಕೆ ಒಡೆಯನಾದನು. ಬ್ರಹಸ್ಪತಿಯ ತರುವಾಯ ವೃಷಸೇನ, ಸೂರ್ಯವರ್ಮನ್, ಪುಷ್ಪಮಿತ್ರರು ರಾಜರಾದರು. ವಿಷ್ಣುಪುರಾಣದಲ್ಲಿ ಅಶೋಕ ಮತ್ತು ಸಂಪದಿಯ ತರುವಾಯ ಸುಯಶ, ದಶರಥ, ಸಂಗತ, ಶಾಲಿಶುಕ, ಸೋಮಶರ್ಮನ್, ಬ್ರಹದ್ರಥ ಎಂಬೀ ಆರು ರಾಜರು ಮಗಧ ದೇಶವನ್ನು ಆಳಿದರೆಂದು ಬರೆದಿದೆ. ಬ್ರಹದ್ರಥನ ಹಿಂದೆ ಅವನ ಸೇನಾಪತಿಯಾದ ಪುಷ್ಪಮಿತ್ರನು ಬ್ರಹದ್ರಥನನ್ನು ಕೊಂದು ಪಟ್ಟವೇರಿದನೆಂದು ಹೇಳುವರು. ಈ ಪುಷ್ಪಮಿತ್ರನು ಬೌದ್ಧಧರ್ಮವನ್ನು ಅತ್ಯಂತವಾಗಿ ದ್ವೇಷಿಸುತ್ತಿದ್ದನು. ಅಶೋಕನು ಸಂಪಾದಿಸಿದಷ್ಟೂ ಕೀರ್ತಿಯನ್ನು ಇವನು ಅದೇ ಪೀಠದಲ್ಲಿ ಕುಳಿತು ಕಳೆದನು. ಇವನು ಬುದ್ಧಗಯೆಯಲ್ಲಿನ ಬುದ್ಧ ಮಂದಿರದೊಳಗಣ ಬುದ್ಧಮೂರ್ತಿಯನ್ನು ತೆಗೆದು, ಆ ಸ್ಥಳದಲ್ಲಿ ಈಶ್ವರಮೂರ್ತಿಯನ್ನು ಸ್ಥಾಪಿಸಿದನು. ಕುಕ್ಕುಟಾರಾಮವನ್ನು ಹಾಳು ಮಾಡಿ, ಅಲ್ಲಿದ್ದ ಭಿಕ್ಷುಭಿಕ್ಷುಣಿಯರನ್ನು ಅತಿ ಕ್ರೂರತೆಯಿಂದ ಕೊಲ್ಲಿಸಿದನು. ಬೌದ್ಧಧರ್ಮದವರು ಎಲ್ಲೆಲ್ಲಿ ಇರುತ್ತಿದ್ದರೋ ಅಲ್ಲಲ್ಲಿಗೆಲ್ಲಾ ಹೋಗಿ ಅವರನ್ನು ಪೀಡಿಸಿ, ಅವರ ಸ್ತೂಪಗಳಿಗೂ ವಿಹಾರಗಳಿಗೂ ಬೆಂಕಿಯನ್ನು



ಹಚ್ಚಿಸಿ ಬೂದಿಯಾಗಿ ಮಾಡಿದನು. ಪುಷ್ಪಮಿತ್ರನ ತರುವಾಯ ಶುಂಗ ವಂಶದೊಳಗಣ ರಾಜರು ಪಾಟಲೀಪುತ್ರದಲ್ಲಿ ರಾಜ್ಯವಾಳತೊಡಗಿದರು. ಈ ಮುಂದಿನ ಸ್ವಲ್ಪ ಕಾಲದ ಇತಿಹಾಸವು ಉಪಲಬ್ಧವಾಗಿಲ್ಲ. ಮುಂದೆ ಕಾನಿಷ್ಕನೆಂಬ ಪರಾಕ್ರಮಿಯೂ, ಸದ್ಗುಣಿಯೂ, ಧಾರ್ಮಿಕನೂ ರಾಜನಾದನು. ಇವನು ಬೌದ್ಧಧರ್ಮದ ಪತಾಕೆಯನ್ನು ಇನ್ನೊಂದು ಸಲ ಭಾರತವರ್ಷದಲ್ಲೆಲ್ಲಾ ಅಲುಗಾಡುವಂತೆ ಮಾಡಿದನು. ಇವನ ಆಳಿಕೆಯಲ್ಲಿಯೇ ಬೌದ್ಧರ ನಾಲ್ಕನೆಯ ಮಹಾಸಭೆಯು ಕೂಡಿಸಲ್ಪಟ್ಟಿತ್ತು.

---

Digitized by ROJA MUTHIAH RESEARCH LIBRARY

# ೧೧ನೆಯ ಪ್ರಕರಣ.

## ಸಮಾಲೋಚನ.

Something mighty and sublime
Leave behind to conquer time;
Glorious 'tis to live for aye,
When these forms have passed away!

Goethe.

ಅಶೋಕನ ಆಳಿಕೆಗೆ ಒಬ್ಬ ಇತಿಹಾಸಕರ್ತನು, ಹಿಂದುಸ್ಥಾನದ ಪ್ರಾಚೀನ ಇತಿಹಾಸದೊಳಗಣ ಸುವರ್ಣಯುಗವೆಂಬ ಯೋಗ್ಯವಾದ ಅಭಿಧಾನವನ್ನು ಕೊಟ್ಟಿರುವನು. ಮತ್ತು ಆ ಕಾಲವು ಸುವರ್ಣಯುಗವಾಗಿತ್ತೆಂಬುದನ್ನು ಯಾರೂ ಶಂಕಿಸಲಾರರು. ಅಶೋಕನ ರಾಜ್ಯವಿಸ್ತಾರವನ್ನು ನೋಡಿದರೂ, ಅಥವಾ ಆ ಕಾಲದ ದೇಶಸ್ಥಿತಿ ಮತ್ತು ಶಾಂತತೆಗಳನ್ನು ಕುರಿತು ವಿಚಾರ ಮಾಡಿದರೂ, ಇಲ್ಲವೇ ನೀತಿ ಮತ್ತು ಧರ್ಮಭ್ರಷ್ಟರಾದ ಜನರನ್ನು ಮರಳಿ ಸನ್ಮಾರ್ಗಕ್ಕೆ ಹಚ್ಚುವಂತಹ ಅತಿ ಮಹತ್ವದ ಕಾರ್ಯವನ್ನು ಅಶೋಕನು ಮಾಡಿದನೆಂಬುದನ್ನು ಲಕ್ಷ್ಯದಲ್ಲಿ ತಂದರೂ, ಸುವರ್ಣಯುಗವೆಂಬೀ ಹೆಸರಿನ ಸಾರ್ಥಕತೆಯು ವ್ಯಕ್ತವಾಗುವುದು. ಹಿಂದುಸ್ಥಾನದಲ್ಲಿ ಅಥವಾ ಪೃಥ್ವಿಯಲ್ಲಿ ಸಹ ಆಗಿ ಹೋದ ಮಹಾ ಬಲಾಢ್ಯ, ರಾಜಕಾರ್ಯಕುಶಲ, ಪ್ರಜಾಪಾಲನತತ್ಪರ, ಸದ್ಧರ್ಮಪ್ರವರ್ತಕ ರಾಜಮಾಲಿಕೆಯಲ್ಲಿ ಅಗ್ರಸ್ಥಾನವು ದೊರೆಯುವಷ್ಟು ಯೋಗ್ಯತೆಯು ಅಶೋಕನಲ್ಲಿ ಇದ್ದಿತು. ಇತಿಹಾಸಪ್ರಸಿದ್ಧರಾದ ರಾಜರು, ಮತ್ತು ಬಾದಶಹರೊಡನೆ ಅವನ ತುಲನೆಯನ್ನು ಮಾಡಲು, ನಮ್ಮ ವಿಧಾನವು ಕೇವಲ ಚರಿತ್ರಕಾರರಲ್ಲಿ ನೆಟ್ಟ ಅತಿಶಯೋಕ್ತಿ ದೋಷದ ಉದಾಹರಣೆಯಲ್ಲವೆಂಬುದನ್ನು ಪ್ರತಿಯೊಬ್ಬ ನಿಷ್ಪಕ್ಷಪಾತಿಯಾದ ಗೃಹಸ್ಥನು ಒಪ್ಪಿಕೊಳ್ಳಬೇಕಾಗುವುದು. ಫ್ರಾನ್ಸ್ ದೇಶದ ಬಾದಶಹನಾದ ನೆಪೋಲಿಯನ್, ಇರಾಣದ ಸ್ಯಾರಸ್, ಜರ್ಮನಿಯ ಶಾರ್ಲಮೇನ್, ರಸಿಯದ ಪೀಟರ್ ದಿ ಗ್ರೇಟ್, ಗ್ರೀಸಿನ ಅಲೆಕ್ಝಾಂಡರ್, ರೋಮಿನ ಕಾನ್



ಸ್ಟಂಟಾಯಿನ್, ಢಿಲ್ಲಿಯ ಅಕಬರ್ ಇವರೆಲ್ಲರಿಗಿಂತಲೂ ಅಶೋಕನ ಯೋಗ್ಯತೆಯು ವಿಶೇಷವಾಗಿತ್ತೆಂಬುದನ್ನು ತೋರಿಸಬಹುದು. ಅಶೋಕನು ನೆಪೋಲಿಯನ್‌ನಂತೆ ಸಾಹಸಿಯೂ ಶೂರನೂ ಆಗಿದ್ದನು, ಆದರೆ ನೆಪೋಲಿಯನ್‌ನಂತೆ ಮಹತ್ವಾಕಾಂಕ್ಷೆಗಾಗಿ ತನ್ನ ಸರ್ವಸ್ವವನ್ನು ಸಮೂಲವಾಗಿ ನಾಶಮಾಡಿಕೊಳ್ಳಲಿಲ್ಲ. ಸ್ಯಾರಸ್‌ನಂತೆ ಅವನು ಇತರ ರಾಜ್ಯಗಳನ್ನು ಕೈವಶ ಮಾಡಿಕೊಂಡು ವಿಪುಲ ಧನ ಸಂಚಯವನ್ನು ಮಾಡಿಕೊಂಡಿದ್ದನು; ಆದರೆ ಆ ಬಗ್ಗೆ ಆತನು ಗರ್ವಿತನಾಗಲಿಲ್ಲ. ಪೀಟರ್ ದಿ ಗ್ರೇಟ್‌ನಂತೆ ಅವನು ಪ್ರಜಾವತ್ಸಲನಾಗಿದ್ದನು; ಆದರೆ ಪೀಟರ್‌ನಂತೆ ಕೇವಲ ಪ್ರಜೆಗಳ ಐಹಿಕ ಹಿತವನ್ನೇ ನೋಡದೆ, ಅದಕ್ಕಿಂತ ಅನಂತ ಪಾಲು ಶ್ರೇಷ್ಠವೂ ಚಿರಂತನವೂ ಆದ ಪಾರಲೌಕಿಕ ಸುಖದ ಸಲುವಾಗಿ ಅವನು ತನ್ನ ತನುಮನಧನಗಳನ್ನು ಅರ್ಪಿಸಿದ್ದನು. ಅಲೆಕ್ಝಾಂಡರನಂತೆ ಅವನು ದಿಗ್ವಿಜಯವನ್ನು ಮಾಡಿದನು; ಆದರೆ ಎಲ್ಲವನ್ನು ಗೆದ್ದ ಬಳಿಕ ತನಗೆ ಗೆಲ್ಲಲು ಏನೂ ಉಳಿಯಲಿಲ್ಲವೆಂದು ದುಃಖಿಸಿ, ಕಣ್ಣೀರು ಸುರಿಸದೆ, ತದ್ವಿರುದ್ಧವಾಗಿ ಮನೋವಿಕಾರಗಳನ್ನು ಗೆಲ್ಲುವುದು ದಿಗ್ವಿಜಯಕ್ಕಿಂತಲೂ ಕಠಿನವೆಂದು ಅವನು ಹೇಳುತ್ತಿದ್ದನು; ಮತ್ತು ಅಂತಹ ದುಷ್ಕಾರ್ಯವನ್ನೂ ಕೂಡ ಅವನು ತನ್ನ ನಿಶ್ಚಯದ ಪ್ರಭಾವದಿಂದ ಸಾಧ್ಯವನ್ನಾಗಿ ಮಾಡಿಕೊಂಡಿದ್ದನು. ಅಶೋಕನಿಗೆ ಬೌದ್ಧಧರ್ಮದ ಕಾನ್‌ಸ್ಟಂಟಾಯಿನ್ ಎಂದೆನ್ನುವುದುಂಟು. ಆದರೆ ಆ ರೋಮನ್ ಬಾದಶಹನಿಗಿಂತ ಅಶೋಕನ ಯೋಗ್ಯತೆಯು ಹೆಚ್ಚಾಗಿತ್ತು; ಏಕೆಂದರೆ, ಕಾನ್‌ಸ್ಟಂಟಾಯಿನ್‌ನು ಸ್ವತಃ ಕ್ರಿಸ್ತೀಧರ್ಮವನ್ನು ಸ್ವೀಕರಿಸಿ, ಆ ಧರ್ಮಕ್ಕೆ ಒಂದು ಬಗೆಯ ರಾಷ್ಟ್ರೀಯ ಸ್ವರೂಪವನ್ನು ಕೊಟ್ಟನೆಂಬ ಸಂಗತಿಯು ನಿಜವು. ಆದುದರಿಂದಲೇ ಅವನಿಗೆ ಕ್ರಿಸ್ತೀಧರ್ಮದ ಪುರಸ್ಕರ್ತನೆನ್ನುವ ರೂಢಿಯುಂಟು. ಆದರೆ ಅಶೋಕನು ಅದಕ್ಕೂ ಮುಂದೆ ಹೋಗಿದ್ದನು; ಅಶೋಕನು ಸ್ವತಃ ಬೌದ್ಧಧರ್ಮವನ್ನು ಸ್ವೀಕರಿಸಿದನಲ್ಲದೆ, ಆ ಧರ್ಮವನ್ನು ಪ್ರಸಾರಗೊಳಿಸುವುದಕ್ಕೋಸ್ಕರ ತ್ರಿಕರಣಪೂರ್ವಕವಾಗಿ ಪರಿಶ್ರಮ ಪಟ್ಟನು. ಸ್ಥಳಸ್ಥಳಗಳಲ್ಲಿ ಲೇಖಗಳನ್ನು ಕೊರೆಯಿಸಿಟ್ಟನು.



Digitized by ROJA MUTHIAH RESEARCH LIBRARY

ದೇಶದೇಶಗಳಿಗೆ ಉಪದೇಶಕರನ್ನು ಕಳುಹಿಸಿದನು, ಪ್ರತ್ಯಕ್ಷ ತನ್ನ
ಮಗನಾದ ಮಹಿಂದನನ್ನೂ ಮಗಳಾದ ಸಂಗಮಿತ್ರೆಯನ್ನೂ ಸಿಂಹ
ಲದ್ವೀಪದಂತಹ ಅತಿ ದೂರ ಪ್ರದೇಶಕ್ಕೆ ಧರ್ಮೋಪದೇಶಕರನ್ನಾಗಿ
ಕಳುಹಿಸಿದನು. ಸಾರಾಂಶವೇನೆಂದರೆ, ಅಶೋಕನು ಬೌದ್ಧಧ
ರ್ಮದ ಪುರಸ್ಕರ್ತನೇ; ಏಕೆ, ಪ್ರತಿಪಾಲಕನೂ, ಪ್ರಚಾರಕನೂ,
ಪ್ರೇಷಿತನೂ (apostle) ಆಗಿದ್ದನೆನ್ನುವುದು ಹೆಚ್ಚು ಯೋಗ್ಯವಾ
ಗಿದೆ. ಅಶೋಕನು ಹುಟ್ಟದೆ ಹೋಗಿದ್ದರೆ, ಗೌತಮಬುದ್ಧನು
ಮಹತ್ಪ್ರಯಾಸದಿಂದ ನೆಟ್ಟ ಧರ್ಮದ ಅಗೆಯು ಜೀವನಾಭಾವದ
ಮೂಲಕ ಆಗಲೇ ಕಮರಿ ಹೋಗುತ್ತಿತ್ತು. ಅಶೋಕನು ದೇಶ
ದೇಶಗಳಿಗೆ ಧರ್ಮೋಪದೇಶಕರನ್ನು ಕಳುಹಿಸದಿದ್ದರೆ ಚೀನ,
ಜಪಾನ, ಬ್ರಹ್ಮದೇಶ, ತಿಬೇಟ, ಸಯಾಮು, ಸಿಂಹಲದ್ವೀಪ ಮುಂ
ತಾದ ಈ ಸ್ಥಳಗಳಲ್ಲಿ ಬೌದ್ಧಧರ್ಮದ ಪ್ರಸಾರವು ಆಗುತ್ತಿತ್ತೋ
ಇಲ್ಲವೋ ಎಂದು ಹೇಳುವುದಕ್ಕೆ ಸಂಶಯವೇ ಸರಿ. ಮತ್ತು ಈ
ದೇಶಗಳಲ್ಲಿ ಬೌದ್ಧಧರ್ಮವು ಪ್ರವೇಶಿಸದೆ ಹೋಗಿದ್ದರೆ ಪ್ರಕೃತದಲ್ಲಿ
ಪೃಥ್ವಿಯ ಮೇಲೆ ಬೌದ್ಧಧರ್ಮದ ಚಿಹ್ನವು ಎಲ್ಲಿಯೂ ದೃಗ್ಗೋ
ಚರವಾಗುತ್ತಿದ್ದಿಲ್ಲವೆಂಬುದು ಸ್ಪಷ್ಟವಾಗಿದೆ. ಈ ದೃಷ್ಟಿಯಿಂದ
ನೋಡಿದರೆ ಅಶೋಕನಿಗೆ ಬೌದ್ಧಧರ್ಮದ ಪಿತನೆಂತಲೂ, ಆಧಾರ
ಸ್ತಂಭನೆಂತಲೂ ಎನ್ನಬೇಕು. ಸ್ವತಃ ಹಿಂದುಸ್ಥಾನದ ಇತಿಹಾಸ
ದಲ್ಲಿ ಅನೇಕ ಸಂಗತಿಗಳಲ್ಲಿ ಅಶೋಕನಿಗೆ ಸಮಾನನಾದವನು
ಢಿಲ್ಲಿಯ ಬಾದಶಹನಾದ ಅಕಬರ್‌ನೊಬ್ಬನೇ. ಉಭಯತರ ಅಜ್ಜಂ
ದಿರೂ—ಅಕಬರನ ಅಜ್ಜನಾದ ಬಾಬರನೂ, ಅಶೋಕನ ಅಜ್ಜ
ನಾದ ಚಂದ್ರಗುಪ್ತನೂ—ಸ್ವಬಾಹುಬಲದಿಂದ ಸ್ವತಂತ್ರವಾದ
ರಾಜ್ಯವನ್ನು ಸಂಪಾದಿಸಿದವರೂ, ಪರಾಕ್ರಮಿಗಳೂ, ಕುಲದೀಪ
ಕರೂ ಆಗಿದ್ದರು. ಅಕಬರನೂ ಅಶೋಕನೂ ವಿದ್ವಾಂಸರ ಪುರ
ಸ್ಕರ್ತರಾಗಿದ್ದರು. ಅಕಬರನ ಬಳಿಯಲ್ಲಿ ಅಬುಲ್‌ಫಜಲ್,
ಬಿದೋನಿ, ಫೈಜಿ ಇತ್ಯಾದಿ ಅನೇಕ ಹೆಸರ್ಗೊಂಡ ಗ್ರಂಥಕರ್ತರಿ
ದ್ದಂತೆ, ಅಶೋಕನ ಬಳಿಯಲ್ಲಿಯೂ ಆಚಾರ್ಯ ಉಪಗುಪ್ತ,
ಮೊಗ್ಗಲ ಪುತ್ರ ತಿಷ್ಯರಂತೆ ವಿದ್ವಾಂಸರಾದ, ಧರ್ಮಗ್ರಂಥಗಳನ್ನು



ಚೆನ್ನಾಗಿ ಪರಿಶೀಲಿಸಿದ ಭಿಕ್ಷುಗಳಿದ್ದರು. ಅಕಬರನು ಭಿನ್ನಭಿನ್ನ
ಧರ್ಮಮತಗಳ ಸಂಶೋಧನೆಗಾಗಿ ಒಂದು ಧರ್ಮಸಭೆಯನ್ನು
ಸ್ಥಾಪಿಸಿದಂತೆಯೇ, ಅಶೋಕನೂ ದೊಡ್ಡದಾದ ಬೌದ್ಧ ಮಹಾ
ಸಭೆಯನ್ನು ಕೂಡಿಸಿ, ತ್ರಿಪಿತಕವೆಂಬ ಬೌದ್ಧಧರ್ಮ ಗ್ರಂಥಗಳನ್ನು
ಸಂಶೋಧಿಸಿದನು. ಅಶೋಕನೂ ಅಕಬರನೂ ಎಲ್ಲಾ ಧರ್ಮ
ಗಳ ಮೇಲೆಯೂ ಸಮದೃಷ್ಟಿಯನ್ನಿಟ್ಟದ್ದರು. ಅಕಬರನು ಮಹ
ಮ್ಮದೀ ಧರ್ಮದವನಾಗಿದ್ದರೂ, ಹಿಂದು, ಕ್ರಿಸ್ತಿ, ಪಾರಸಿಕ,
ಇತ್ಯಾದಿ ಧರ್ಮಗಳ ವಿಷಯದಲ್ಲಿ ಆದರವನ್ನು ತೋರಿಸಿ, ಆಯಾ
ಮತಗಳ ಜನರ ಬುದ್ಧಿವಾದವನ್ನು ಶಾಂತತೆಯಿಂದ ಕೇಳಿಕೊಳ್ಳು
ತ್ತಿದ್ದನು. ಅಶೋಕನು ಬುದ್ಧಧರ್ಮವನ್ನು ಸ್ವೀಕರಿಸಿದ್ದರೂ
ಬ್ರಾಹ್ಮಣ, ಜೈನ ಧರ್ಮಗಳಿಗೆ ಸಮಾನವಾದ ಮಾನವನ್ನು ಕೊಡು
ತ್ತಿದ್ದನು. ಬೌದ್ಧಭಿಕ್ಷುಗಳಿಗೆ ಹೇಗೆಯೋ ಹಾಗೆಯೇ ಬ್ರಾಹ್ಮಣ
ಮತ್ತು ಶ್ರಮಣರಿಗೂ ಮಾನವನ್ನೂ ದಕ್ಷಿಣೆಯನ್ನೂ ಕೊಡುತ್ತ
ಹೋಗ ಬೇಕೆಂಬ ಆಜ್ಞೆಯನ್ನು ತನ್ನ ಆದೇಶಗಳಲ್ಲಿ ಪುನಃಪುನಃ
ಮಾಡಿದುದು ಕಂಡುಬರುತ್ತಿದೆ. ಆದರೆ ಅಕಬರನಲ್ಲಿ ನೀತಿಧೈ
ರ್ಯದ ಅಭಾವವೆಂಬ ದೊಡ್ಡ ಕೊರತೆಯು ಇತ್ತು. ಮಹಮ್ಮದೀ
ಧರ್ಮದಿಂದ ಅವನಿಗೆ ಸಮಾಧಾನವಾಗದಿದ್ದುದರಿಂದ ಅವನು
ಮಿಕ್ಕ ಧರ್ಮಗಳ ಜ್ಞಾನ ಮಾಡಿಕೊಂಡು, ಅವೆಲ್ಲವುಗಳಲ್ಲಿರುವ
ಉತ್ಕೃಷ್ಟ ತತ್ವಗಳನ್ನು ಸಂಗ್ರಹಿಸಿ ಒಂದು ಹೊಸತಾದ ಧರ್ಮ
ಪಂಥವನ್ನು ಸ್ಥಾಪಿಸಿದ್ದನು. ಆದರೆ ತನ್ನ ಈ ಧರ್ಮಪಂಥವನ್ನು
ಜನರ ಮುಂದಿಟ್ಟು, ಅವರು ಅದನ್ನು ಅಂಗೀಕರಿಸಲು ಮಾಡಬೇ
ಕಾದ ಸಾಹಸವನ್ನು ಮಾಡುವುದಕ್ಕೂ, ಇಂತಹ ಸಾಹಸಕ್ಕೆ,
ಮಹಮ್ಮದೀ ಧರ್ಮಾನುಯಾಯಿಗಳಿಂದ ಪ್ರಾಪ್ತವಾಗುವ ವಿರೋ
ಧಕ್ಕೂ, ಇದಿರಾಗಿ ನಿಲ್ಲಲವಶ್ಯಕವಿರುವ ಮಾನಸಿಕ ಧೈರ್ಯವೂ
ಅಕಬರನಲ್ಲಿ ಇದ್ದಿಲ್ಲ; ಆದುದರಿಂದ ಜನರು, ಬೇಕುಬೇಕಾದಂತಹ
ಧರ್ಮಮತಗಳಿಗೆ ಅಂಟಿಕೊಂಡು ನೀತಿಭ್ರಷ್ಟರಾಗಿರುವರೆಂಬುದು
ಆತನಿಗೆ ಗೊತ್ತಿದ್ದರೂ ಕೂಡ, ಅವನು ಆ ಶೋಚನೀಯವಾದ



Digitized by ROJA MUTHIAH RESEARCH LIBRARY

ಸ್ಥಿತಿಯ ಪ್ರತಿಕಾರಕ್ಕಾಗಿ ಎಷ್ಟು ಮಾತ್ರವೂ ಪ್ರಯತ್ನಿಸಲಿಲ್ಲ. ಅಶೋಕನು ಹಾಗಲ್ಲ. ಅವನು ಒಮ್ಮೆ ಬೌದ್ಧಧರ್ಮದ ಮೇಲೆ ವಿಶ್ವಾಸವನ್ನಿಟ್ಟೊಡನೆಯೇ, ಬುದ್ಧ, ಧರ್ಮ, ಸಂಘ ಇವುಗಳನ್ನು ಆಶ್ರಯಿಸಿದ ಹೊರತು ಮನುಷ್ಯರಿಗೆ ಬೇರೆ ಕಾರಣೋಪಾಯವಿಲ್ಲವೆಂದು ಅವನಿಗೆ ಕಂಡು ಬಂದ ಕೂಡಲೇ, ಲೋಕಾಪವಾದದ ಭೀತಿಯನ್ನು ಲೇಶವಾದರೂ ಮನಸ್ಸಿಗೆ ತಾರದೆ, ಸ್ವತಃ ತಾನು ಆ ಧರ್ಮವನ್ನು ಪ್ರಕಟವಾಗಿ ಸ್ವೀಕರಿಸಿದನು; ಇಷ್ಟೇ ಅಲ್ಲದೆ, ಜನರಿಗೂ ಆ ಧರ್ಮದ ಮಹತ್ವವು ತಿಳಿಯಬೇಕೆಂಬುದಕ್ಕೋಸ್ಕರ ತನ್ನಿಂದಾದಷ್ಟು ಸಾಹಸವನ್ನು ಮಾಡಿದನು. ಸಿವಿಲ್, ರೆವಿನ್ಯು, ಸೇನಾ ಮುಂತಾದ ಖಾತೆಗಳು ರಾಜ್ಯವ್ಯವಸ್ಥೆಯ ಮುಖ್ಯ ಉಪಾಂಗಗಳಾಗಿರುವಂತೆಯೇ, ನೀತ್ಯಾಚರಣವೆಂಬ ಹೊಸತಾದ ಖಾತೆಯನ್ನು ಅಶೋಕನು ತನ್ನ ರಾಜ್ಯವ್ಯವಸ್ಥೆಗೆ ಸೇರಿಸಿದ್ದನು. ಸಾರಾಂಶವೇನೆಂದರೆ, ಪ್ರಜೆಗಳ ಐಹಿಕ ಮತ್ತು ಪಾರಮಾರ್ಥಿಕ ಹಿತಕ್ಕಾಗಿ ಇಷ್ಟು ಮನಮುಟ್ಟಿ ಪ್ರಯತ್ನಿಸುವಂತಹ ರಾಜನು ಅಶೋಕನ ಹಿಂದೆಯೂ, ಮುಂದೆಯೂ ಈ ದೇಶದಲ್ಲಿ ಯಾವನೂ ಆಗಲಿಲ್ಲ, ಮತ್ತು ಅನ್ಯ ದೇಶಗಳಲ್ಲಿಯೂ ಆದ ಉದಾಹರಣೆಯು ಇತಿಹಾಸದಲ್ಲಿ ಕಂಡು ಬರುವುದಿಲ್ಲ.

ಅಶೋಕನ ಚರಿತ್ರೆಯೊಳಗಣ ಸೂಕ್ಷ್ಮ ಸಂಗತಿಗಳನ್ನು ಬಿಟ್ಟುಬಿಟ್ಟು, ಸ್ಥೂಲಮಾನದಿಂದ ವಿಚಾರ ಮಾಡತೊಡಗಿದರೆ, ಇತಿಹಾಸದೊಳಗಣ ಕೆಲವು ಸಿದ್ಧಾಂತಗಳ ಸ್ಪಷ್ಟೀಕರಣವು ಅದರಲ್ಲಿ ಆದಂತೆ ತೋರುತ್ತಿದೆ. "ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ। ಅಭ್ಯುತ್ಥಾನಾಯ ಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ॥" ಎಂದು ಪರಮಾತ್ಮನು ಗೀತೆಯಲ್ಲಿ ಹೇಳಿರುವನು. ಈ ಗೀತಾವಚನದ ಸತ್ಯತೆಯು ಪೂರ್ವಕಾಲದಲ್ಲಿ ಅನೇಕಾವರ್ತಿ ಜನರ ದೃಷ್ಟ್ಯೋತ್ಪತ್ತಿಗೆ ಬಂದಿದೆ. ಭೂಮಂಡಲದ ಬೇರೆಬೇರೆ ಧರ್ಮಗಳ ಇತಿಹಾಸಗಳನ್ನು ಸಹ ಮಾರ್ಮಿಕದೃಷ್ಟಿಯಿಂದ ನೋಡಿದುದಾದರೆ, ಇದೇ ಸಂಗತಿಯು ಪ್ರತ್ಯಕ್ಷಕ್ಕೆ ಬರುವುದು. ಜನರು, ಧರ್ಮ

Digitized by ROJA MUTHIAH RESEARCH LIBRARY



ಮತ್ತು ನೀತಿಗಳ ವಿಷಯದಲ್ಲಿ ಪರಾಙ್ಮುಖರಾಗಿ ಪಾಪಮಾಡತೊಡಗಿದೊಡನೆಯೇ ಯಾರಾದರೊಬ್ಬ ವಿಶೇಷ ತೇಜಸ್ವಿಯಾದ ಪುರುಷನು ಈಶಪ್ರೇರಣೆಯಿಂದ ನಿರ್ಮಾಣವಾಗಿ, ಅವನು ಅಧರ್ಮದ ಉಚ್ಛೇದನೆಗಾಗಿ ಯಾವುದೊಂದು ವಿಶಿಷ್ಟವಾದ ಧರ್ಮಮಾರ್ಗವನ್ನು ಹುಡುಕಿ ತೆಗೆಯುವನು. ಮತ್ತು ಕಾಲಾಂತರದಲ್ಲಿ ಧರ್ಮ, ಮತ್ತು ನೀತಿಗಳ ಬಲವು ಅಧರ್ಮವನ್ನು ತಗ್ಗಿಸಲು, ಜನರ ವ್ಯವಹಾರಗಳು ಮರಳಿ ಚೆನ್ನಾಗಿ ನಡೆಯತೊಡಗುವುವು. ಹಿಂದೂ ಧರ್ಮದೊಳಗಣ ಅವತಾರಗಳ ಕಲ್ಪನೆಯೂ, ಮಹಮ್ಮದ, ಕ್ರಿಸ್ತ, ಬುದ್ಧ ಮೊದಲಾದ ಸಾಧುಗಳ ಚರಿತ್ರಗಳೂ ಈ ಸಂಗತಿಯ ನಿದರ್ಶಕಗಳಾಗಿವೆ. ಈ ಈಶಯೋಜನೆಯು ಅತ್ಯಾಶ್ಚರ್ಯಕರವಾದುದು ಎಂಬುದರಲ್ಲಿ ಏನೂ ಸಂದೇಹವಿಲ್ಲ. ಆದರೂ ಇಷ್ಟರಿಂದಲೇ ಆ ಯೋಜನೆಯ ಪೂರ್ಣಸ್ವರೂಪವು ವಿದಿತವಾಗುವುದಿಲ್ಲ. ಈ ಯೋಜನೆಯ ಸಂಗಡಲೇ ಪರಮೇಶ್ವರನು ಬೇರೊಂದು ಅತಿ ಮಹತ್ವದ ಯೋಜನೆಯನ್ನೂ ಮಾಡಿರುವನು. ಮಹಮ್ಮದ, ಬುದ್ಧ, ಕ್ರಿಸ್ತರಂತಹ ಧರ್ಮಸಂಸ್ಥಾಪಕರು ಜನರಿಗೆ ಯಾವುದೊಂದು ವಿಶಿಷ್ಟ ಧರ್ಮಮಾರ್ಗವನ್ನು ತೋರಿಸಬಹುದು; ಮತ್ತು ಸ್ವಲ್ಪ ಕಾಲದ ಮಟ್ಟಿಗೆ ಜನರು ಆ ಧರ್ಮದಂತೆ ನಡೆಯಲೂ ಬಹುದು; ಆದರೆ ಆ ಧರ್ಮಕ್ಕೆ ಸ್ಥಿರತೆಯು ಪ್ರಾಪ್ತವಾಗದಂತೆಯೂ, ಜನರಲ್ಲಿ ಅದು ಹೆಚ್ಚುಹೆಚ್ಚಾಗಿ ಹಬ್ಬದಂತೆಯೂ, ಬೇರೊಂದು ವಿಶಿಷ್ಟ ಶಕ್ತಿಯ ಅಪೇಕ್ಷೆಯಿರುವುದು. ಆ ಅಪೇಕ್ಷೆಯನ್ನು ದೂರ ಮಾಡುವುದಕ್ಕಾಗಿ ಪ್ರತಿಯೊಬ್ಬ ಧರ್ಮಸಂಸ್ಥಾಪಕನ ಹಿಂದೆಯೇ ಒಬ್ಬೊಬ್ಬ ಚಕ್ರವರ್ತಿಯಾದ ರಾಜನು ನಿರ್ಮಾಣವಾಗುವ ಹಾಗೆ ಪರಮೇಶ್ವರನು ಯೋಜಿಸಿದಂತೆ ತೋರುತ್ತಿದೆ. ದ್ವಾಪರ ಯುಗದಲ್ಲಿ ಶ್ರೀಕೃಷ್ಣ ಪರಮಾತ್ಮನು ಉಪದೇಶಿಸಿದ ಭಾಗವತಧರ್ಮವನ್ನು ಪ್ರಸಾರಮಾಡುವುದಕ್ಕಾಗಿ ಧರ್ಮರಾಜ ಯುಧಿಷ್ಠಿರನು ನಿರ್ಮಾಣವಾದನು. ರೋಮಿನ ಜನರು ಶರೀರಸುಖದಲ್ಲಿಯೂ, ದುಂದುಗಾರಿಕೆಯಲ್ಲಿಯೂ ಆಸಕ್ತರಾಗಿ ಈಶ್ವರನನ್ನು ಮರೆತಿರಲು, ಅವರ

ಕಣ್ಣಿಗೆ ಅಂಜನವನ್ನು ಹಚ್ಚಿ ಅವರನ್ನು ದಾರಿಗೆ ತರುವುದಕ್ಕೂ,
ಕ್ರಿಸ್ತೀಧರ್ಮವನ್ನು ಪ್ರಸಾರಗೊಳಿಸುವುದಕ್ಕೂ, ಪರಮೇಶ್ವರನು
ಕಾನ್‌ಸ್ಟಂಟಾಯಿನ್‌ನೆಂಬ ಬಾದಶಹನನ್ನು ಯೋಜಿಸಿದನು.
ಮಹಮ್ಮದನ ತರುವಾಯ ಅವನ ಧರ್ಮವು ಕಾಫರ್ ಜನರಲ್ಲಿ
ಹಬ್ಬ ಬೇಕೆಂದು, ಅರಬೀ, ತುರ್ಕೀ, ಮೋಗಲ್ ಬಾದಶಹರು
ಉತ್ಪನ್ನರಾಗಿ, ಅವರು ಆ ಧರ್ಮದ ಅರ್ಧಚಂದ್ರಾಕೃತಿಯಾದ
ಧ್ವಜವನ್ನು ಏಸಿಯ, ಯುರೋಪ ಖಂಡಗಳಲ್ಲಿ ಮೆರೆಯಿಸಿದರು.
ಹಾಗೆಯೇ ಬೌದ್ಧಧರ್ಮದ ಪ್ರಸಾರಕ್ಕಾಗಿ ಅಶೋಕನನ್ನು ಅದೇ
ಜಗನ್ನಿಯಾಮಕನು ಯೋಜಿಸಿದನು. ಈ ಉದ್ದಿಷ್ಟಕಾರ್ಯವು
ಅಶೋಕನಿಂದ ಹೇಗೆ ನೆರವೇರಿತೆಂಬುದು ನಮ್ಮ ಪಾಠಕರಿಗೆ
ವಿದಿತವಾಗಿಯೇ ಇದೆ.

ಯಾವುದೊಂದು ಧರ್ಮವು ದೇಶದಲ್ಲಿ ಹಬ್ಬಲು ಮುಖ್ಯವಾಗಿ
ಸಾಮ್ರಾಜ್ಯ, ಮತ್ತು ಏಕಭಾಷೆ ಈ ಎರಡು ಸಂಗತಿಗಳು ಸಾಧನೀ
ಭೂತವಾಗಿರುವುವು. ಸಾಮ್ರಾಜ್ಯವಿಲ್ಲದಿದ್ದರೆ ಧರ್ಮಕ್ಕೆ ಸ್ಥೈರ್ಯ
ವು ಪ್ರಾಪ್ತವಾಗದೆ, ಅದರ ಬದಲಾಗಿ ಬೇರೆ ಬೇರೆ ಪ್ರಾಂತಗಳಲ್ಲಿ
ಬೇರೆ ಬೇರೆ ಆಚಾರಗಳೂ, ಮತಗಳೂ ಉತ್ಪನ್ನವಾಗಿ ಧರ್ಮದ
ಐಕ್ಯವು ನಾಶವಾಗುವುದು. ಹಾಗೆಯೇ, ಏಕ ಭಾಷೆಯು ಇರ
ದಿದ್ದರೆ ಧರ್ಮಪ್ರಸಾರವು ಆಗ ಬೇಕಾದಷ್ಟು ತೀವ್ರವಾಗಿ ಆಗುವು
ದಿಲ್ಲ. ಆದುದರಿಂದಲೇ ಯಾವುದಾದರೊಂದು ಹೊಸತಾದ ಮತ
ವು ಎಲ್ಲಾ ಕಡೆಗೂ ಪ್ರಸಾರವಾಗಬೇಕೆಂದು ಈಶ್ವರನ ಇಚ್ಛೆ
ಇದ್ದರೆ, ಅದನ್ನು ಕೊನೆಗಾಣಿಸುವುದಕ್ಕಾಗಿ ಸಾಮ್ರಾಜ್ಯ, ಮತ್ತು
ಏಕಭಾಷೆ ಇವುಗಳ ಯೋಗವು ಅಕಲ್ಪಿತ ರೀತಿಯಿಂದ ಕೂಡಿ
ಬರುವುದು. ಅಶೋಕನ ಕಾಲದಲ್ಲಿ ಇಂತಹ ಯೋಗವು ಕೂಡಿ
ಬಂದಿತ್ತು. ಅವನ ಏಕಛತ್ರವಾದ ರಾಜ್ಯದಲ್ಲಿ ಇಪ್ಪತ್ತು ಕೋಟಿ
ಪ್ರಜೆಗಳಿದ್ದರು. ಅವರೆಲ್ಲರೂ ಮುಖ್ಯವಾಗಿ "ಪಾಲೀ" ಎಂಬ
ಒಂದೇ ಭಾಷೆಯನ್ನಾಡುತ್ತಿದ್ದರು. ಪಾಲೀಭಾಷೆಯಲ್ಲಿ ದೇಶಪರತ್ವ
ದಿಂದ, ಮಾಗಧಿ, ಪಂಜಾಬಿ, ಉಜ್ಜನಿ, ಎಂಬೀಮೂರು ಶಾಖೆಗಳು



ಉಂಟಾಗಿದ್ದರೂ ಅವುಗಳು ಒಂದಕ್ಕೊಂದು ಬಹಳ ಭಿನ್ನವಾಗಿಲ್ಲ
ವಾದುದರಿಂದ, ಪಾಲೀಭಾಷೆಯೇ ಆ ಕಾಲದಲ್ಲಿ ಭರತಖಂಡದ
ಪ್ರಚಲಿತ ಭಾಷೆಯಾಗಿತ್ತೆಂದೆನ್ನಲು ಅಡ್ಡಿಯಿಲ್ಲ.

ಬೌದ್ಧಧರ್ಮವೇ ಆಗ್ಗೆ ಹಿಂದುಸ್ಥಾನದ ರಾಷ್ಟ್ರೀಯ ಧರ್ಮ
ವಾಗಲು ಯೋಗ್ಯವಾಗಿತ್ತು. ಎರಡನೆಯ ಪ್ರಕರಣದಲ್ಲಿ ವಿವರಿ
ಅಶೋಕನ ಜನ್ಮಕಾಲದ ಭರತಖಂಡದ ಸ್ಥಿತಿಯನ್ನು ನೋಡಿದರೆ,
ಆ ಕಾಲದಲ್ಲಿ ಜಾತಿಭೇದವನ್ನು ಸ್ಥಿರವಾಗಿಡುವುದು ಬಹಳ ಮಟ್ಟಿಗೆ
ಅಶಕ್ಯವಾಗಿತ್ತೆಂದು ಕಂಡು ಬಾರದಿರದು. ಬ್ರಾಹ್ಮಣಸೇವೆಯನ್ನು
ಮಾಡುವಂತಹ ಶೂದ್ರರು ಕ್ಷತ್ರಿಯರ ಸ್ಥಾನವನ್ನು ಆಕ್ರಮಿಸ
ತೊಡಗಿದ್ದುದರಿಂದ, ಬ್ರಾಹ್ಮಣರೇ ಶೂದ್ರಸೇವೆಯನ್ನು ಮಾಡುವ
ಸಂದರ್ಭವು ಬಂದಿತ್ತು. ಬ್ರಾಹ್ಮಣರಲ್ಲಿಯೂ ಬ್ರಾಹ್ಮಣ್ಯವು ಅಷ್ಟರ
ಮಟ್ಟಿಗೇ ಉಳಿದಿದ್ದುದರಿಂದ ಅವರನ್ನು ಯಾರೂ ಸನ್ಮಾನಿಸದ
ಹಾಗಾಗಿತ್ತು. ಬ್ರಾಹ್ಮಣರಿಗೆ ಶೂದ್ರರಲ್ಲಿಯೂ, ಶೂದ್ರರಿಗೆ ಕ್ಷತ್ರಿ
ಯರಲ್ಲಿಯೂ, ಕ್ಷತ್ರಿಯರಿಗೆ ಎಲ್ಲರಲ್ಲಿಯೂ ವೈಮನಸ್ಯವುಂಟಾ
ಗಿತ್ತು. ಇಂತಹ ಸಮಯದಲ್ಲಿ ಎಲ್ಲರನ್ನೂ ಸಮದೃಷ್ಟಿಯಿಂದ
ನೋಡುವಂತಹ ರಾಜನು ಹುಟ್ಟದೆ ಹೋಗಿದ್ದರೆ, ಮೇಲೆ ವಿವರಿಸಿದ
ಜಾತಿಜಾತಿಗಳೊಳಗಣ ವೈಮನಸ್ಯವೆಂಬ ಅಗ್ನಿಯು ಪ್ರಜ್ವಲಿಸಿ,
ಎಲ್ಲರನ್ನೂ ನಾಶಮಾಡಲು ಹಿಂದುಮುಂದೆ ನೋಡುತ್ತಿದ್ದಿಲ್ಲ.
ಅದೇ ಕಾಲಕ್ಕೆ ಸರಿಯಾಗಿ ಗ್ರೀಕರು ಹಿಂದುಸ್ಥಾನದ ಸುತ್ತು
ಮುತ್ತಲೂ ಹಾಳೇಹದ್ದುಗಳಂತೆ ಹೊಂಚು ಹಾಕಿಕೊಂಡು, ತಮ್ಮ
ಗ್ರಾಸವನ್ನು ಸಾಧಿಸುವ ದಾರಿ ನೋಡುತ್ತಿದ್ದರು. ಈ ತಂತಮ್ಮೊಳ
ಗಣ ವೈಮನಸ್ಯವು ಅವರಿಗೆ ಪಥ್ಯಕರವಾಗದೆ ಇರುತ್ತಿರಲಿಲ್ಲ.
ಇಂತಹ ಸಮಯದಲ್ಲಿ ಭರತಭೂಮಿಯನ್ನು ತಾರಿಸುವುದಕ್ಕೋ
ಸ್ಕರವಾಗಿಯೇ ಎಂಬಂತೆ, ಪರಮೇಶ್ವರನು ಅಶೋಕನನ್ನು ಕಳು
ಹಿಸಿ, ಆರ್ಯಭೂಮಿಯ ಮಾನವನ್ನು ಕಾಪಾಡಿದನು. ಬೌದ್ಧಧ
ರ್ಮವು ಯಾವುದಾದರೊಂದು ವಿಶಿಷ್ಟಜಾತಿಯ ಧರ್ಮವಾಗದೆ
ಸಾರ್ವಜನಿಕವಾಗಿದ್ದುದರಿಂದ, ಇಂತಹ ಬಿಕ್ಕಟ್ಟಿನ ವೇಳೆಯಲ್ಲಿ

Digitized by ROJA MUTHIAH RESEARCH LIBRARY

ಕಣ್ಣಿಗೆ ಅಂಜ
ಕ್ರಿಸ್ತೀಧರ್ಮ
ಕಾನ್‌ಸ್ಟಂಟ
ಮಹಮ್ಮದನ
ಹಬ್ಬ ಬೇಕೆಂ
ಉತ್ಪನ್ನರಾಗಿ,
ಧ್ವಜವನ್ನು
ಹಾಗೆಯೇ
ಜಗನ್ನಿಯಾಮ
ಅಶೋಕನಿಂದ
ವಿದಿತವಾಗಿಯೆ

ಯಾವು
ಸಾಮ್ರಾಜ್ಯ,
ಭೂತವಾಗಿರು
ವು ಪ್ರಾಪ್ತವಾ
ಬೇರೆ ಬೇರೆ
ಐಕ್ಯವು ನಾಶ
ದಿದ್ದರೆ ಧರ್ಮ
ದಿಲ್ಲ. ಆದುದ
ವು ಎಲ್ಲಾ
ಇದ್ದರೆ, ಅದನ
ಏಕಭಾಷೆ ಇ
ಬರುವುದು.
ಬಂದಿತ್ತು.
ಪ್ರಜೆಗಳಿದ್ದರು
ಒಂದೇ ಭಾಷೆ
ದಿಂದ, ಮಾಗ



ಎಲ್ಲರನ್ನೂ ಒಟ್ಟುಗೂಡಿಸಲು, ಅದರಿಂದ ಅತ್ಯುಪಯೋಗವ ಯಿತು. ಅದರಲ್ಲಿ ಜಾತಿಭೇದವಿಲ್ಲದಿದ್ದುದರಿಂದ ಪರಸ್ಪರರ ಉಚ್ಚನೀಚತೆಯ ಭಾವವನ್ನು ಉಂಟುಮಾಡಿ ವೈಮನಸ್ಯವನ ...ಚ್ಚಿಸುವ ಗುಣವು ಅದರಲ್ಲಿದ್ದಿಲ್ಲ. ಎಲ್ಲರ ಮೇಲೂ ಸಮದೃಷ್ಟಿ ...ನ್ನಿಡುವುದೇ ಆ ಧರ್ಮದ ಮುಖ್ಯತತ್ವವಾಗಿದ್ದುದರಿಂದ, ಅ ...ತ ಕಾಲದಲ್ಲಿ ರಾಷ್ಟ್ರೀಯಧರ್ಮವೆಂದೆನಿಸಿಕೊಳ್ಳಲು ಹೇಗೆ ನೋ ದರೂ ಯೋಗ್ಯವಾಗಿತ್ತೆಂಬುದನ್ನು ಕುರಿತು ಯಾರೂ ಶಂಕಿಸು ರೆಂದು ನಮಗೆ ತೋರುವುದಿಲ್ಲ. 15

ರಾಜಾಶ್ರಯವು ಧರ್ಮವೃದ್ಧಿಗೆ ಕಾರಣವಾಗುವಂತೆ ಧರ್ಮ ಹಾನಿಗೂ ಕಾರಣವಾಗುವುದೆಂಬೀ ವಿಧಾನವು ಮೊದಲುಮೊದಲ ಆಶ್ಚರ್ಯಕರವಾಗಿ ತೋರುವುದು. ಆದರೆ ಅದರ ಸತ್ಯತೆಯು ಬೌದ್ಧ ಮತ್ತು ಇತರ ಧರ್ಮಗಳ ಇತಿಹಾಸದಿಂದ ಚೆನ್ನಾಗಿ ವ್ಯಕ್ತ ವಾಗುತ್ತಿದೆ. ಬೌದ್ಧಧರ್ಮದ ಇತಿಹಾಸವನ್ನು ಮಾರ್ಮಿಕ ಯಿಂದ ಅವಲೋಕಿಸುವವರಿಗೂ ಈ ಪ್ರಕಾರವೇ ಹೆಚ್ಚುಕಡಮೆ ಯಾಗಿ ಬೌದ್ಧಧರ್ಮದಲ್ಲಿಯೂ ಆಗಿದೆಯೆಂಬುದು ಕಂಡುಬರ ವುದು. ಅಶೋಕನ ಪುರಸ್ಕರ್ತತ್ವದಿಂದ ಬೌದ್ಧಧರ್ಮವು ಕೇವ ಹಿಂದುಸ್ಥಾನದಲ್ಲಿಯೇ ಅಲ್ಲದೆ ಗ್ರೀಸ್, ಚೀನ, ಜಪಾನ, ಸಿಂಹ ದ್ವೀಪ ಮುಂತಾದ ದೂರದೂರದ ಪ್ರದೇಶಗಳಲ್ಲಿಯೂ ಹಬ್ಬಿತ ಬುದು ನಿಜವು; ಆದರೆ ಅವನು ಭಿಕ್ಷುಭಿಕ್ಷುಣಿಯರಿಗೆ ಇರು ದಕ್ಕೂ, ತಿಂಡಿವೂಟಗಳಿಗೂ ಸುವ್ಯವಸ್ಥೆಗಳನ್ನು ಮಾಡಿಕೊಟ್ಟದ್ದ ದರಿಂದ, ಅವರಿಗೆ ಧರ್ಮದ ವಿಷಯದಲ್ಲಿ ಶ್ರದ್ಧೆಯೂ, ನೀತ್ಯಾಚ ಣದ ವಿಷಯದಲ್ಲಿ ಆಸಕ್ತಿಯೂ, ಕಡಮೆಕಡಮೆಯಾಗತೊಡ ಆಲಸ್ಯವೂ, ದುರಾಚಾರವೂ ಪ್ರಬಲವಾದುವು; ಮತ್ತು ಕೊನೆ ಇವೇ ಆ ಧರ್ಮವನ್ನು ನಾಶಮಾಡಲು ಕಾರಣೀಭೂತವಾ ವೆಂಬುದನ್ನು ಒಪ್ಪಿಕೊಳ್ಳಬೇಕಾಗಿದೆ.

ಸಂಪೂರ್ಣಂ.

2250

Digitized by ROJA MUTHIAH RESEARCH LIBRARY

ದಿನಾಂಕ ಸೂಚಿ
ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೧೮
ಸರಸ್ವತಿ ಭಂಡಾರ
ಸೂ.: ನಿಗದಿತ ದಿನಕ್ಕಿಂತ ತಡವಾಗಿ ಪುಸ್ತಕ ತಲುಪಿಸುವವರಿಗೆ ದಿನವೊಂದಕ್ಕೆ ೨೫ ಪೈಸೆ ದಂಡ ವಿಧಿಸಲಾಗುವುದು.

| ಹಿಂದಿರುಗಿಸುವ ದಿನ | ಹಿಂದಿರುಗಿಸುವ ದಿನ |
|---|---|

ಪುಸ್ತಕಸೂಚಿ
ವ. ಸಂ:
ಕ್ರ. ಸಂ: 2256.
ಲೇಖಕ: ಅಣ್ಣಿಗೇರಿ (ರಾ ಕೃ ಇನಾವಂತಿ).
ಶಿರೋನಾಮೆ: ಅಶೋಕ.

ವ. ಸಂ:
ಕ್ರ. ಸಂ: 2256.
ಕ. ಸಾ. ಪ.
ಗ್ರಂಥ ಭಂಡಾರ

Digitized by ROJA MUTHIAH RESEARCH LIBRARY

Digitized by ROJA MUTHIAH RESEARCH LIBRARY